ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 27 ಭಾನುವಾರ 2025

₹4

ಸಂಪುಟ: 46 | ಸಂಚಿಕೆ: 12 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಸಾಟಿ ಇಲ್ಲದ ಸ್ಥಳ, ಸರಿಸಾಟಿಯಿಲ್ಲದ ಬೆಲೆ!









35+ ಕ್ಕೂ ಅಧಿಕ ವಿಶ್ವ ದರ್ಜೆಯ ಸೌಲಭ್ಯಗಳು

- ಧ್ಯಾನ ವಲಯ
- ಹಿರಿಯ ನಾಗರಿಕರ ಗೆಜೆಬೋ (ಮೊಗಸಾಲೆ)
- ಸಾಕುಪ್ರಾಣಿ ವಲಯ
- ನಗುವ (ಲಾಫಿಂಗ್) ಉದ್ಯಾನವನ
- ಉದ್ಯಾನ ನಡಿ
- ಪಾರ್ಟಿ ಲಾನ್
- ಕೂಟದ ಸ್ಥಳ
- ಉಯ್ಯಾಲೆ ಉದ್ಯಾನವನ
- ಮರಳು ಗುಂಡಿ (ಆಟದ ವಲಯ)
- ಚಿಕ್ಕ ಮಕ್ಕಳ ಉಯ್ಯಾಲೆ
- ಚಿಕ್ಕ ಮಕ್ಕಳ ಸ್ಪ್ರಿಂಗ್ ರೈಡರ್
- ಚಿಕ್ಕ ಮಕ್ಕಳ ಟಾಟ್ ಲಾಟ್
- ಯೋಗ ಲಾನ್
- ಜಾಗಿಂಗ್ ಟ್ರ್ಯಾಕ್
- ಹೊರಾಂಗಣ ಜಿಮ್
- ಆಕ್ಯುಪಂಕ್ಚರ್ ವಾಕ್ ವೇ
- ಮಕ್ಕಳ ಸೀ-ಸಾ
- ಗುಮ್ಮಟ ಹತ್ತುವವರು
- ಮಕ್ಕಳ ಜಾರುಬಂಡಿ
- ಮಕ್ಕಳ ಮಂಕಿ ಬಾರ್‌ಗಳು
- ಮಕ್ಕಳ ಡೂಡಲ್ ಕಾರ್ನರ್
- ಮಕ್ಕಳ ಜಂಗಲ್ ಜಿಮ್
- ಮಕ್ಕಳ ಮೆರ್ರಿ ಗೋ
- ಗಾಗಾ ಬಾಲ್ ಪಿಟ್
- ಮಕ್ಕಳ ಟಾಟ್ ಲಾಟ್
- ಮಕ್ಕಳ ಹಾಪ್ಸ್ಕಾಚ್
- ಮಕ್ಕಳ ಕ್ಲೈಂಬಿಂಗ್ ನೆಟ್
- ಮಕ್ಕಳ ರಾಕ್ ಕ್ಲೈಂಬಿಂಗ್ ವಾಲ್
- ಬಾಸ್ಕೆಟ್‌ಬಾಲ್ ಪೋಸ್ಟ್
- ಬ್ಯಾಡ್ಮಿಂಟನ್ ಕೋರ್ಟ್
- ವಾಲಿಬಾಲ್ ಕೋರ್ಟ್
- ಕ್ರಿಕೆಟ್ ನೆಟ್‌ಗಳು
- ವೀಕ್ಷಣಾ ಗ್ಯಾಲರಿ
- ವಿಶ್ರಾಂತಿ ಸ್ಥಳ
- ರಿಫ್ಲೆಕ್ಸಾಲಜಿ ಮಾರ್ಗ
- ಪಿಕ್ನಿಕ್ ಟೇಬಲ್‌ಗಳೊಂದಿಗೆ ಪೆರ್ಗೋಲಾ

ಮತ್ತು ಇನ್ನೂ ಹೆಚ್ಚಿನವು...

ಶಾಲೆಗಳು

- ಕ್ರೈಸ್ಟ್ ಪಬ್ಲಿಕ್ ಸ್ಕೂಲ್ - 700 ಮೀಟರ್
- ಶಾರದಾ ಪಬ್ಲಿಕ್ ಸ್ಕೂಲ್ - 2 ಕಿ.ಮೀ.
- ಹರಿ ವಿದ್ಯಾಲಯ - 2 ಕಿ.ಮೀ.
- ಚೈತನ್ಯ ಟೆಕ್ನೋ ಸ್ಕೂಲ್ - 3 ಕಿ.ಮೀ.
- ನೈಪುಣ್ಯ ಸ್ಕೂಲ್ - 4 ಕಿ.ಮೀ.
- ನ್ಯಾಷನಲ್ ಪಬ್ಲಿಕ್ ಸ್ಕೂಲ್ - 4.5 ಕಿ.ಮೀ.
- ಮರಿಮಲ್ಲಪ್ಪ ಸ್ಕೂಲ್ - 5 ಕಿ.ಮೀ.
- ಡೆಮಾನ್ಸ್ಟ್ರೇಷನ್ ಮಲ್ಟಿಪರ್ಪಸ್ ಸ್ಕೂಲ್ - 5.3 ಕಿ.ಮೀ.

ಕಾಲೇಜುಗಳು

- ಅಮೃತ ವಿಶ್ವ ವಿದ್ಯಾ ಪೀಠ - 4 ಕಿ.ಮೀ.
- ಮಾನಸ ಗಂಗೋತ್ರಿ ವಿಶ್ವವಿದ್ಯಾಲಯ - 6 ಕಿ.ಮೀ.
- ಸೇಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು - 7.5 ಕಿ.ಮೀ.
- ಕ್ರೈಸ್ಟ್ ಕಾಲೇಜು - 7.6 ಕಿ.ಮೀ.
- ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು - 6 ಕಿ.ಮೀ
- NIE ಪ್ರಥಮ ದರ್ಜೆ ಇಂಜಿನಿಯರಿಂಗ್ ಕಾಲೇಜು - 8.2 ಕಿ.ಮೀ.
- ಮಹಾರಾಜ ಕಾಲೇಜು - 9 ಕಿ.ಮೀ.

ಆಸ್ಪತ್ರೆಗಳು

- ಅಮೃತ ಕೃಪಾ - 800 ಮೀಟರ್
- ನಯನ ಕುಮಾರ್ ಮಲ್ಟಿ-ಸ್ಪೆಷಾಲಿಟಿ - 3 ಕಿ.ಮೀ.
- ಆದಿತ್ಯ ಸಂಜೀವಿನಿ ಮಲ್ಟಿ-ಸ್ಪೆಷಾಲಿಟಿ - 3.5 ಕಿ.ಮೀ.
- ಅವಂತ್ 8 KG ಆಸ್ಪತ್ರೆ - 3.9 ಕಿ.ಮೀ.
- AR ಆಸ್ಪತ್ರೆ - 4 ಕಿ.ಮೀ.
- ಭಾನವಿ ಆಸ್ಪತ್ರೆ - 6 ಕಿ.ಮೀ.
- ಕಾಮಾಕ್ಷಿ ಆಸ್ಪತ್ರೆ - 6.7 ಕಿ.ಮೀ.
- ಅಪೋಲೋ BGS ಆಸ್ಪತ್ರೆಗಳು - 6.4 ಕಿ.ಮೀ.
- ISS ಆಸ್ಪತ್ರೆ - 10 ಕಿ.ಮೀ.

ಕಾರ್ಪೊರೇಟ್‌ಗಳು

- ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ - 9 ಕಿ.ಮೀ.
- L&T ಟೆಕ್ನಾಲಜಿ ಸರ್ವೀಸಸ್ - 10 ಕಿ.ಮೀ.
- BEML ಲಿಮಿಟೆಡ್ - 10.2 ಕಿ.ಮೀ.
- ಇನ್ಫೋಸಿಸ್ - 11 ಕಿ.ಮೀ.
- JK ಟೈರ್ & ಇಂಡಸ್ಟ್ರೀಸ್ ಲಿಮಿಟೆಡ್ - 13 ಕಿ.ಮೀ.
- ವಿಪ್ರೋ ಲಿಮಿಟೆಡ್ - 14 ಕಿ.ಮೀ.

ಜಿ ಸ್ಕ್ವೇರ್ - ಸಂತೃಪ್ತ ಗ್ರಾಹಕರ ಒಂದು ನೋಟ



* T & C apply

PRM/KA/RERA/1268/378/PR/020125/007342

98849 00037
www.gsquarehousing.com

ಈಗಲೇ ಸ್ಕ್ಯಾನ್ ಮಾಡಿ ₹2L ವರೆಗೆ ಉಳಿಸಿ & ಗಳಿಸಿ

ಬೆಂಗಳೂರಿನಿಂದ ಮೈಸೂರು
ಸುತ್ತಮುತ್ತಲಿನ ಪ್ರದೇಶದಲ್ಲಿ ಭೂಮಿ ಬೇಕಾಗಿದೆ
3 ರಿಂದ 300 ಎಕರೆ | ಸಂಪೂರ್ಣ | ಸಹಭಾಗಿತ್ವ
ಅನುಮೋದಿತ ಅಥವಾ ಅನುಮೋದನೆಗಾಗಿ ಇರುವ ಲೇಔಟ್‌ಗಳು

G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಏಪ್ರಿಲ್ 27 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 12 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪಾಕ್‌ನೊಂದಿಗೆ ಯುದ್ಧದ ಅನಿವಾರ್ಯತೆ ಇಲ್ಲ

●ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ ●ಸರ್ವಪಕ್ಷ ಸಭೆಗೆ ಪ್ರಧಾನಿ ಮೋದಿ ಗೈರಿಗೆ ಆಕ್ಷೇಪ



ಮೈಸೂರು, ಏ.26(ಬಿಎಲ್‌ಯು)–ಪಹಲ್ಗಾಮ್ ಪ್ರಕರಣದ ಸಂಬಂಧ ಪಾಕಿಸ್ತಾನದ ಜೊತೆ ಯುದ್ಧದ ಅನಿವಾರ್ಯತೆ ಇಲ್ಲ. ನಾವು ಯಾವತ್ತೂ ಯುದ್ಧದ ಪರ ಇಲ್ಲ. ಹಾಗಾಗಿ ಭಾರತ ಮತ್ತು ಪಾಕಿಸ್ತಾನ ನಡುವಿನ ವೈಮನಸ್ಸು ಯುದ್ಧಕ್ಕೆ ಅಣಿಯಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಟಿ.ಕೆ.ಬಡಾವಣೆಯ ತಮ್ಮ ಮನೆಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರವಾಸಿಗರಿಗೆ ಬಿಗಿ ಭದ್ರತೆಯ ನಂಬಿಕೆ ಮೂಡಿಸಿದ್ದ ಕೇಂದ್ರ ಸರ್ಕಾರ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸದೆ ದೇಶದ ಜನರಿಗೆ ಈಗ ಟೋಪಿ ಹಾಕಿದೆ ಎಂದು ಗಂಭೀರ ಆರೋಪ ಮಾಡಿದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಸೂಕ್ತ ಭದ್ರತೆ ಇದೆ ಎಂದು ಈ ತನಕ ಬರೀ ಭಾಷಣ ಬಿಗಿದಿದ್ದರು ಎಂಬುದು ಈಗ ಮನವರಿಕೆ ಆಗುತ್ತಿದೆ. ನಾವು ಜಮ್ಮು–ಕಾಶ್ಮೀರದಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಮಾಡಿದ್ದೇವೆ ಎಂದು ಈಗ ಹೇಳುತ್ತಿದ್ದಾರೆ. ಹಾಗಾದರೆ 26 ಅಮಾಯಕ ಜನರ ಜೀವ ವಾಪಸು ತರಲು ಸಾಧ್ಯವೆ? ಎಂದು ಪ್ರಶ್ನಿಸಿದರು.

ಭದ್ರತಾ ಲೋಪವಾಗಿದೆ ಎಂದು ಸ್ವತಃ ಕೇಂದ್ರ ಸರ್ಕಾರವೇ ಈಗ ಒಪ್ಪಿಕೊಂಡಿದೆ. ಭದ್ರತಾ ಲೋಪದ ಬಗ್ಗೆ ನಾನು ಈ ಮೊದಲೇ ಹೇಳಿದ್ದೆ. ಈಗ ನನ್ನ ಮಾತು ನಿಜವಾಗಿದೆ ಎಂದರು. ಪಹಲ್ಗಾಮ್ ಪ್ರಕರಣ ಸಂಬಂಧ ■6ನೇ ಪುಟಕ್ಕೆ

ಕರ್ನಾಟಕದಲ್ಲಿರುವ ಪಾಕಿಸ್ತಾನಿ ಪ್ರಜೆಗಳನ್ನು ವಾಪಸು ಕಳುಹಿಸುತ್ತೇವೆ

ರಾಜ್ಯದಲ್ಲಿ ವಾಸವಿರುವ ಪಾಕಿಸ್ತಾನಿ ಪ್ರಜೆಗಳನ್ನು ವಾಪಸು ಕಳುಹಿಸುವ ಸಂಬಂಧ ಕೇಂದ್ರ ಸರ್ಕಾರದ ಸೂಚನೆಯನ್ನು ಪಾಲಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಪಹಲ್ಗಾಮ್ ಪ್ರಕರಣ ಸಂಬಂಧ ಕೇಂದ್ರ ಸರ್ಕಾರ ಕೈಗೊಂಡಿರುವ ನಿರ್ಧಾರಕ್ಕೆ ನಾವು ಸಹಕಾರ ನೀಡುತ್ತೇವೆ. ರಾಜ್ಯದಲ್ಲಿ ಎಷ್ಟು ಮಂದಿ ಪಾಕಿಸ್ತಾನಿ ಪ್ರಜೆಗಳಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಲೀಸ್ ಅಧಿಕಾರಿಗಳು ನೀಡಿರುವ ಮೌಖಿಕ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಅತಿ ಹೆಚ್ಚು ಪಾಕಿಸ್ತಾನಿ ಪ್ರಜೆಗಳು ವಾಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ನೀಡಿರುವ ಸೂಚನೆಯಂತೆ ಈಗ ಪಾಕಿಸ್ತಾನದ ಪ್ರಜೆಗಳನ್ನು ಅವರ ದೇಶಕ್ಕೆ ವಾಪಸು ಕಳುಹಿಸಲು ಕ್ರಮ ಕೈಗೊಳ್ಳುತ್ತೇವೆ ಎಂದರು. ಚಾಮರಾಜನಗರಕ್ಕೆ ಹೋದ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೌಢ್ಯತೆಯನ್ನು ನಾನು ಕಳಚಿದ್ದೇನೆ. ಇದೂವರೆಗೆ 20 ಬಾರಿ ಚಾಮರಾಜನಗರಕ್ಕೆ ಹೋಗಿದ್ದೇನೆ. ಈ ಮೂಲಕ ಚಾ.ನಗರಕ್ಕೆ ಅಂಟಿದ್ದ ಮೌಢ್ಯತೆ ದೂರವಾಗಿದೆ ಎಂದರು.

ಸಿದ್ಧಾಂತವೇ ಇಲ್ಲದ ಸಿದ್ದರಾಮಯ್ಯ



ಬೆಂಗಳೂರು, ಏ.26–ಸಿದ್ಧಾಂತವೇ ಇಲ್ಲದ ಸಿದ್ದರಾಮಯ್ಯ ಇಂದು ನಮ್ಮ ಮುಂದೆ ಇದ್ದಾರೆ. ದೇಶಕ್ಕೆ ಏನಾದರೂ ಪರವಾಗಿಲ್ಲ, ಮತ ಬಿದ್ದರೆ ಸಾಕು ಎಂಬ ಮನಸ್ಥಿತಿಗೆ ಸಿಎಂ ಬಂದಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.

ಪಹಲ್ಗಾಮ್ ಉಗ್ರರ ದಾಳಿ ಪ್ರಕರಣದಲ್ಲಿ ಯುದ್ಧದ ಅನಿವಾರ್ಯತೆ ಇಲ್ಲವೆಂಬ ಸಿಎಂ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, ಸಿದ್ದರಾಮಯ್ಯ ಮಾನಸಿಕ ಸ್ಥಿತಿ ಪೂರ್ತಿ ಮುಸ್ಲಿಮರ ಮತದ ಬಗ್ಗೆಯೇ ಯೋಚಿಸುವ ರೀತಿ ಆಗಿರುವುದು ದುರದೃಷ್ಟಕರ. ಹಾಗಾದರೆ ಸತ್ತಿರುವವರ ಪ್ರಾಣಕ್ಕೆ ಬೆಲೆಯೇ ಇಲ್ಲವೇ? ಹಮಾಸ್ ಉಗ್ರರು ಬಂದು ತರಬೇತಿ ನೀಡಿ ಕಳುಹಿಸಿದ್ದರು ಎಂಬುದು ಮಾಹಿತಿಗಳ ಮೂಲಕ ಹೊಂದಾಣಿಕೆ ಆಗುತ್ತಿದೆ. ಅದನ್ನು ಸಿದ್ದರಾಮಯ್ಯ ಅವರು ಮಾತ್ರ ಕ್ಷಮಿಸಬಹುದಷ್ಟೇ. ದೇಶಕ್ಕೆ ಏನು ಆದರೂ ಪರವಾಗಿಲ್ಲ, ತಮಗೆ ಮತ ಬಿದ್ದರೆ ಸಾಕು ■6ನೇ ಪುಟಕ್ಕೆ

ಪೋಪ್ ಫ್ರಾನ್ಸಿಸ್‌ಗೆ ವಿದಾಯ

ಅಂತ್ಯಸಂಸ್ಕಾರದಲ್ಲಿ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು, ಟ್ರಂಪ್ ಅಲ್ಲದೆ ವಿದೇಶಿ ಗಣ್ಯರೂ ಸೇರಿ 4 ಲಕ್ಷ ಮಂದಿ ಭಾಗಿ





ವ್ಯಾಟಿಕನ್ ಸಿಟಿಯ ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಶನಿವಾರ 'ಜನರ ಪೋಪ್' ಎಂದೇ ಖ್ಯಾತರಾಗಿದ್ದ ಪೋಪ್ ಫ್ರಾನ್ಸಿಸ್ ಅವರ ಅಂತ್ಯಸಂಸ್ಕಾರ ಲಕ್ಷಾಂತರ ಜನರ ಸಮ್ಮುಖದಲ್ಲಿ ನೆರವೇರಿತು.

ವ್ಯಾಟಿಕನ್ ಸಿಟಿ, ಏ.26– ಕಡು ಸಂಪ್ರದಾಯಸ್ಥರ ತೀವ್ರ ವಿರೋಧ, ಟೀಕೆಗಳ ಮಧ್ಯೆಯೂ ಹಲವು ಸುಧಾರಣಾವಾದಿ ಕ್ರಾಂತಿಕಾರಕ ಕ್ರಮಗಳನ್ನು ತೆಗೆದುಕೊಂಡಿದ್ದ, 'ಜನರ ಪೋಪ್' ಎಂದೇ ಕರೆಸಿಕೊಳ್ಳುತ್ತಿದ್ದ ಪೋಪ್ ಫ್ರಾನ್ಸಿಸ್ ಅವರಿಗೆ ಇಲ್ಲಿನ ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಶನಿವಾರ ಅಂತಿಮ ವಿದಾಯ ಹೇಳಲಾಯಿತು.

ಪೋಪ್ ಅವರ ಅಂತ್ಯಸಂಸ್ಕಾರದ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಜಗತ್ತಿನ ವಿವಿಧ ಭಾಗಗಳ ಸುಮಾರು 4 ಲಕ್ಷ ಜನರು ಸೇರಿದ್ದರು. ಇವರಲ್ಲಿ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಅಂತಿಮ ವಿಧಿ ವಿಧಾನಗಳನ್ನು ಹತ್ತಿರದಿಂದ ನೋಡಬೇಕು ಎಂದು ಬಯಸಿ ವಿವಿಧ ದೇಶಗಳಿಂದ ಪುಟ್ಟ ಮಕ್ಕಳೊಂದಿಗೆ ಬಂದಿದ್ದ ಕುಟುಂಬಗಳು ಶುಕ್ರವಾರ ರಾತ್ರಿಯಿಂದಲೇ ಸ್ಕ್ವೇರ್‌ನಲ್ಲಿ ಸೇರಿದ್ದವು. ಸಾರ್ವಜನಿಕರಿಗಾಗಿ ಸಿದ್ಧಪಡಿಸಿದ್ದ ಆಸನಗಳಲ್ಲಿ ಕೆಲವರು ಕುಳಿತುಕೊಂಡಿದ್ದರೆ, ಕೆಲವರು ಅಲ್ಲೇ ಮಲಗಿದ್ದರು. ಮತ್ತೆ ಕೆಲವರು ಕಾರುಗಳಲ್ಲೇ ರಾತ್ರಿ ಕಳೆದು ಬೆಳಗಿನ ಜಾವ ಸೇಂಟ್ ಪೀಟರ್ಸ್ ಸ್ಕ್ವೇರ್‌ಗೆ ಬಂದರು. ಅಂತಿಮ ವಿದಾಯ ಬಳಿಕ ಪೋಪ್ ಅವರ ಇಚ್ಛೆಯಂತೆಯೇ ಅವರ ಮೃತದೇಹವನ್ನು ರೋಮ್‌ನ ಸೇಂಟ್ ಮೇರಿ ಚರ್ಚ್‌ಗೆ ಕೊಂಡೊಯ್ಯಲಾಯಿತು. ಅಲ್ಲಿಯೇ ಅವರ ಅಂತ್ಯಸಂಸ್ಕಾರ ಮಾಡಲಾಯಿತು ಎಂದು 'ಕ್ಯಾಥೊಲಿಕ್ ನ್ಯೂಸ್ ಸರ್ವೀಸ್ ರೋಮ್' ಎಂಬ ಚರ್ಚ್‌ನ 'ಎಕ್ಸ್' ಖಾತೆಯು ಪೋಸ್ಟ್ ಹಂಚಿಕೊಂಡಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ವಿಶ್ವ ನಾಯಕರು ಸೇರಿದ್ದರಿಂದ ವ್ಯಾಟಿಕನ್ ಸಿಟಿಯ ಸುತ್ತ ಭಾರಿ ಭದ್ರತೆ ನಿಯೋಜಿಸಲಾಗಿತ್ತು. ಸುಮಾರು 2,500 ಪೊಲೀಸರು, 1,500 ಸೈನಿಕರು ಭದ್ರತೆಗೆ ನಿಯೋಜನೆಗೊಂಡಿದ್ದರು. ಉಕ್ರೇನ್ ಪ್ರಧಾನಿ ವೊಲೊಡಿಮಿರ್ ಝೆಲೆನ್‌ಸ್ಕಿ ದಂಪತಿ ಜೊತೆಯಲ್ಲಿ ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಆಸನ ವ್ಯವಸ್ಥೆ ಕಲ್ಪಿಸಲಾಗಿತ್ತು

ವಿಶ್ವ ನಾಯಕರು ಭಾಗಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಬ್ರಿಟನ್‌ನ ರಾಜಕುಮಾರ ವಿಲಿಯಮ್ಸ್, ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ ಸುಮಾರು 50 ದೇಶಗಳ ನಾಯಕರು ಪೋಪ್ ಫ್ರಾನ್ಸಿಸ್ ಅವರ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿದ್ದರು. ■6ನೇ ಪುಟಕ್ಕೆ

ಪ್ರಿಯ ಓದುಗರೆ....



'ಮೈಸೂರು ಮಿತ್ರ'ನಲ್ಲಿ ಜಿ.ಎಲ್. ತ್ರಿಪುರಾಂತಕ ಅವರ 'ಅರಿವು' ಹೊಸ ಅಂಕಣ ಈ ಸೋಮವಾರದಿಂದ ಪ್ರಾರಂಭವಾಗಲಿದೆ. ಈಗಾಗಲೇ ಇವರ ಮೈತ್ರಿ, ಲಹರಿ, ಸುಪ್ರಭ, ಬೆರಗು ಜನಪ್ರಿಯ ಅಂಕಣಗಳ 300ಕ್ಕೂ ಅಧಿಕ ಲೇಖನಗಳು ಪ್ರಕಟಗೊಂಡು, ಓದುಗರ ಅತೀವ ಮೆಚ್ಚುಗೆಗೆ ಪಾತ್ರವಾಗಿದ್ದವು. –ಸಂಪಾದಕ

ಮಹದೇಶ್ವರ ಬೆಟ್ಟದಲ್ಲಿ ಸಾರಿಗೆ ಬಸ್ ಉರುಳಿ 14 ಮಂದಿಗೆ ಗಾಯ



ಹನೂರು, ಏ. 26– ಕೆಎಸ್‌ಆರ್‌ಟಿಸಿ ಬಸ್ ಉರುಳಿ ಬಿದ್ದು, ಚಾಲಕ–ನಿರ್ವಾಹಕ ಸೇರಿ 14 ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಶನಿವಾರ ರಾತ್ರಿ 8 ಗಂಟೆ ಸಮಯದಲ್ಲಿ ಸಂಭವಿಸಿದೆ. ನಾಲ್ವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಮಲೆ ಮಹದೇಶ್ವರ ಬೆಟ್ಟದಿಂದ ಮೈಸೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ಕೆಎ 09–ಎಫ್ 5111) ಬೆಟ್ಟದ ಆನೆಹೊಲ ಎಂಬಲ್ಲಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಉರುಳಿ ಬಿದ್ದಿದೆ. ಈ ಅಪಘಾತದಲ್ಲಿ ಚಾಲಕ ಅನಿಲ್ ಕುಮಾರ್, ನಿರ್ವಾಹಕ ಜಗದೀಶ್ ಸೇರಿದಂತೆ 14 ಮಂದಿ ಗಾಯಗೊಂಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ದೌಡಾಯಿಸಿದ ಮಲೆ ಮಹದೇಶ್ವರ ಬೆಟ್ಟ ಠಾಣೆಯ ಇನ್ಸ್‌ಪೆಕ್ಟರ್ ಜಗದೀಶ್ ನೇತೃತ್ವದ ಪೊಲೀಸರ ತಂಡವು ಗಾಯಾಳುಗಳನ್ನು ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಸಿಇಟಿ ವೇಳೆ ವಿದ್ಯಾರ್ಥಿಗಳ ಜನಿವಾರ ತುಂಡರಿಸಿದ ಪ್ರಕರಣ

ರಾಜ್ಯ ಸರ್ಕಾರ, ಕೆಇಎಗೆ ಹೈಕೋರ್ಟ್ ನೋಟಿಸ್



ಬೆಂಗಳೂರು,ಏ.26(ಕೆಎಂಶಿ)–ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯುವ ಮುನ್ನ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ), ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ಪೀಠ ನೋಟಿಸ್ ಜಾರಿ ಮಾಡಿ ಜೂನ್ 9ಕ್ಕೆ ಮುಂದೂಡಿತು.

ವಿವಿಧ ವೃತ್ತಿಶಿಕ್ಷಣ ಪ್ರವೇಶಕ್ಕಾಗಿ ಏಪ್ರಿಲ್ 16 ಮತ್ತು 17ರಂದು ರಾಜ್ಯದ ವಿವಿಧೆಡೆ ಪರೀಕ್ಷೆ ನಡೆಸಲಾಗಿತ್ತು. ಈ ವೇಳೆ ಪರೀಕ್ಷಾ ಕೊಠಡಿ ಪ್ರವೇಶಿಸುವ ಮುನ್ನ ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸುವ ಸಂದರ್ಭದಲ್ಲಿ ಬಲವಂತವಾಗಿ ಜನಿವಾರವನ್ನು ಕತ್ತರಿಸಿ ತೆಗೆಯಲಾಯಿತು. ಜನಿವಾರ ತೆಗೆಯಲು ನಿರಾಕರಿಸಿದವರು ಪರೀಕ್ಷೆ ಬರೆಯುವುದರಿಂದ ■6ನೇ ಪುಟಕ್ಕೆ

ಮೇ 20ರೊಳಗೆ ಸಿಇಟಿ ಫಲಿತಾಂಶ

ಬೆಂಗಳೂರು,ಏ.26(ಕೆಎಂಶಿ)–ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಫಲಿತಾಂಶ ಮೇ 20ರ ವೇಳೆಗೆ ಪ್ರಕಟಗೊಳ್ಳಲಿದೆ. ಏಪ್ರಿಲ್ 16 ಮತ್ತು 17ರಂದು ನಡೆದ ಪರೀಕ್ಷೆಯಲ್ಲಿ ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಬಯಸಿ 3.30 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪೂರ್ಣಗೊಂಡು, 11.50 ಲಕ್ಷ ಓಎಂಆರ್ ಶೀಟ್‌ಗಳನ್ನು ಪರೀಕ್ಷಾ ಪ್ರಾಧಿಕಾರ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದೆ. ಪರೀಕ್ಷೆ ಬರೆದಿರುವ ಕೇಂದ್ರ, ವಿದ್ಯಾರ್ಥಿಯ ಕೋಡ್ ಹಾಕಿದರೆ ಉತ್ತರ ಪತ್ರಿಕೆಗಳು ದೊರೆಯಲಿವೆ. ಪರೀಕ್ಷೆಯಲ್ಲಿ ಗೊಂದಲಗಳು ನಡೆದಿವೆ ಎಂಬ ಸಂಶಯಗಳ ನಿವಾರಣೆಗೆ ಪರೀಕ್ಷಾ ಪ್ರಾಧಿಕಾರ ಇದೇ ಮೊದಲ ಬಾರಿಗೆ ಓಎಂಆರ್ ಶೀಟ್‌ಗಳನ್ನು ಬಹಿರಂಗಪಡಿಸುತ್ತಿದೆ. ಮೌಲ್ಯಮಾಪನ ಕಾರ್ಯ ಪೂರ್ಣಗೊಂಡಿದ್ದರೂ ಪಿಯುಸಿ 2ನೇ ಪರೀಕ್ಷೆ ಫಲಿತಾಂಶ ಪ್ರಕಟಗೊಳ್ಳುವವರೆಗೂ ಪ್ರಾಧಿಕಾರ ಫಲಿತಾಂಶ ಪ್ರಕಟಿಸಲು ಸಾಧ್ಯವಿಲ್ಲ.

ಮಹಿಳಾ ಎಸ್‌ಐ ಮೇಲೆ ಲಾರಿ ಚಾಲಕ ಹಲ್ಲೆ; ರಾಜೀ ಸಂಧಾನದ ಮೂಲಕ ಪ್ರಕರಣಕ್ಕೆ ತೆರೆ!

ಮೂರ್ನಾಡು (ಕೊಡಗು), ಏ.26– ಶಂಕಿತ ಆರೋಪಿಯನ್ನು ಪೊಲೀಸ್ ವಾಹನದಲ್ಲಿ ಕರೆತರುತ್ತಿದ್ದ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಮೇಲೆ ನಡುರಸ್ತೆಯಲ್ಲೇ ಲಾರಿ ಚಾಲಕ ಹಲ್ಲೆ ಮಾಡಿರುವ ಘಟನೆ ಮೂರ್ನಾಡುವಿನಲ್ಲಿ ಶನಿವಾರ ನಡೆದಿದೆ.

ವಿರಾಜಪೇಟೆ ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್ ಲತಾ ಅವರ ಮೇಲೆ ಲಾರಿ ಚಾಲಕ ಹ್ಯಾರಿಸ್, ಹಲ್ಲೆ ನಡೆಸಿದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ವಿವರ: ವಿರಾಜಪೇಟೆ ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶಂಕಿತ ಆರೋಪಿಯನ್ನು ವಶಕ್ಕೆ ಪಡೆದು ಪೊಲೀಸ್ ಜೀಪ್‌ನಲ್ಲಿ ಮಡಿಕೇರಿಯತ್ತ ತೆರಳುತ್ತಿದ್ದ ವೇಳೆ ಮೂರ್ನಾಡುವಿನಲ್ಲಿ ಹ್ಯಾರೀಸ್ ತನ್ನ ಲಾರಿಯನ್ನು ಅಡ್ಡಾದಿಡ್ಡಿ ನಿಲ್ಲಿಸಿದ್ದರಿಂದ ಪೊಲೀಸ್ ವಾಹನ ಹೋಗಲು ದಾರಿಯಿಲ್ಲದಂತಾಗಿದೆ.

▶ ರಸ್ತೆ ಸಂಚಾರ ವಿಚಾರವಾಗಿ ಸಣ್ಣ ಮಾತಿನ ಚಕಮಕಿ ನಡೆದಿದೆಯಷ್ಟೇ. ಅದೇನೂ ಅಂತಹ ದೊಡ್ಡ ವಿಚಾರವೇನಲ್ಲ. ಹೀಗಾಗಿ ಲಾರಿ ಚಾಲಕನಿಗೆ ಎಚ್ಚರಿಕೆ ನೀಡಿ ಕಳುಹಿಸಿ ಕೊಡಲಾಗಿದೆ.
–ಸೂರಜ್, ಮಡಿಕೇರಿ ಡಿವೈಎಸ್ಪಿ

ಈ ಸಂಬಂಧ ಹ್ಯಾರೀಸ್‌ನನ್ನು ಲತಾ ಅವರು ಪ್ರಶ್ನಿಸಿದ ವೇಳೆ ಇಬ್ಬರ ನಡುವೆಯೂ ಮಾತಿನ ಚಕಮಕಿ ನಡೆದಿದೆ. ಈ ಸಂದರ್ಭದಲ್ಲಿ ಹ್ಯಾರಿಸ್ ಹದ್ದು ಮೀರಿ ಮಾತನಾಡಿದ್ದರಿಂದ ಕೋಪಗೊಂಡ ಲತಾ, ಆತನಿಗೆ ಒಂದು ಏಟು ಹೊಡೆದಿದ್ದಾರೆ. ಇದರಿಂದ ಸಿಟ್ಟಿಗೆದ್ದ ಆತ, ಲತಾ ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ಇದನ್ನು ನೋಡಿದ ಅಂಗಡಿಯೊಂದರಿಂದ ಹೊರಬಂದ ವ್ಯಕ್ತಿ ಹ್ಯಾರೀಸ್‌ನನ್ನು ತನ್ನ ಅಂಗಡಿಯೊಳಗೆ ಎಳೆದೊಯ್ದಿದ್ದು, ಸಬ್ ಇನ್ಸ್‌ಪೆಕ್ಟರ್ ಲತಾ ಅವರು ಜೀಪ್‌ನಲ್ಲಿದ್ದ ತಮ್ಮ ಮಹಿಳಾ ಸಿಬ್ಬಂದಿಯನ್ನು ಕರೆದು ಹ್ಯಾರಿಸ್‌ನನ್ನು ಹಿಡಿಯಲು ಅಂಗಡಿಯೊಳಗೆ ತೆರಳುತ್ತಿರುವ ದೃಶ್ಯವನ್ನು ಸಾರ್ವಜನಿಕರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಅದು ವೈರಲ್ ಆಗಿದೆ.

ಆನಂತರ ಲತಾ ಅವರು ಲಾರಿ ಚಾಲಕ ಹ್ಯಾರೀಸ್‌ನನ್ನು ಮೂರ್ನಾಡು ಉಪ ಠಾಣೆಗೆ ಕರೆದೊಯ್ದು, ■6ನೇ ಪುಟಕ್ಕೆ

ಬಿಜೆಪಿ–ಜೆಡಿಎಸ್‌ನವರ ಮಾತುಗಳ ನೀವು ನಂಬಬೇಡಿ; ರಾಜ್ಯದಲ್ಲಿ ಯಾವ ಆರ್ಥಿಕ ಸಂಕಷ್ಟವೂ ಇಲ್ಲ

■ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ■ಪಿರಿಯಾಪಟ್ಟಣದಲ್ಲಿ 439 ಕೋಟಿಯ ವಿವಿಧ ಅಭಿವೃದ್ಧಿ ಯೋಜನೆಗೆ ಚಾಲನೆ



ಪಿರಿಯಾಪಟ್ಟಣ ತಾಲೂಕಿನಲ್ಲಿ 439 ಕೋಟಿ ರೂ. ವೆಚ್ಚದ 122 ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಚಿತ್ರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಭೈರತಿ ಸುರೇಶ್, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಶಾಸಕ ರವಿಶಂಕರ್ ಇದ್ದಾರೆ.

ಬೈಲಕುಪ್ಪೆ,ಏ.26–ರಾಜ್ಯದಲ್ಲಿ ಯಾವುದೇ ಆರ್ಥಿಕ ಸಂಕಷ್ಟವಿಲ್ಲ. ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರು ಮಾಡುತ್ತಿರುವ ಸುಳ್ಳು ಆರೋಪಗಳಿಗೆ ಕಿವಿಗೊಡಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನಲ್ಲಿ 439 ಕೋಟಿ ರೂ. ವೆಚ್ಚದ, ವಿವಿಧ ಇಲಾಖೆ 122 ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಮ್ ಅವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡುತ್ತಿದ್ದರು.

ಬಿಜೆಪಿ ಮತ್ತು ಜೆಡಿಎಸ್‌ನವರು ಸುಳ್ಳು ಹೇಳಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ರಾಜ್ಯ ಸರ್ಕಾರ ಪಾಪರ್ ಆಗಿದ್ದರೆ, ಅಭಿವೃದ್ಧಿ ಕೆಲಸಗಳಿಗೆ ಶಿಲಾನ್ಯಾಸ ಮಾಡಲಾಗುತ್ತಿತ್ತೇ? ಅದರಲ್ಲೂ ಒಂದೇ ಕ್ಷೇತ್ರಕ್ಕೆ 439 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುತ್ತಿದ್ದೆನಾ. ಇದರ ಬಗ್ಗೆ ಜನರು ಯೋಚಿಸಬೇಕಿದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ರೈತರ, ಕಾರ್ಮಿಕರ ಮತ್ತು ಮಹಿಳೆಯರ ಸಬಲೀಕರಣ ಮಾಡುವುದರೊಂದಿಗೆ ರಾಜ್ಯದ ಅಭಿವೃದ್ಧಿಗೆ ಒತ್ತು ನೀಡುತ್ತಿದೆ ಎಂದು ತಿಳಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಅವರು ಶೋಷಿತರಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಇವರು ತಮ್ಮ ಹೋರಾಟಗಳ ಮೂಲಕ ಇಂದಿಗೂ ಪ್ರಸ್ತುತವಾಗಿದ್ದಾರೆ. ನಮ್ಮ ಸರ್ಕಾರ ಕೂಡ ಸಾಮಾಜಿಕ ನ್ಯಾಯ ಮತ್ತು ಪ್ರತಿ ಸಮುದಾಯದ ಅಭಿವೃದ್ಧಿಯ ನಿಟ್ಟಿನಲ್ಲಿ ಆಡಳಿತ ನಡೆಸುತ್ತಿದೆ. ಇಂದು ಅನೇಕ ಇಲಾಖೆಗಳ ಮೂಲಕ ಸವಲತ್ತು ವಿತರಿಸಿ ರೈತರ, ವಿಶೇಷಚೇತನರ ಮತ್ತು ಮಹಿಳೆಯರ ಸಬಲೀಕರಣ ಮಾಡುತ್ತಿದೆ ಎಂದರು.

ಸುಳ್ಳುಗಳಿಗೆ ಕಿವಿಗೊಡಬೇಡಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಹುಟ್ಟು–ಸಾವು ನಡುವೆ ಮಾಡುವ ಕಾರ್ಯ ಮುಖ್ಯ. ಕೆ.ವೆಂಕಟೇಶ್ ಮತದಾರರ ಋಣ ತೀರಿಸಲು ನಮ್ಮ ಮೇಲೆ ಪ್ರಭಾವ ಬೀರಿ ಅನುದಾನ ತಂದಿದ್ದಾರೆ. ಎಲ್ಲಾ ವರ್ಗದ ಜನರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ರೈತರ ಹಿತ ಕಾಯುವ ಖಾತೆ ಪಡೆದು ರೈತರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ನಾವು ಅಂಬೇಡ್ಕರ್ ಸಂವಿಧಾನ ರಕ್ಷಣೆ ಮಾಡುತ್ತಿದ್ದೇವೆ. ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಮ್ ಅವರು ನೀಡಿದ ಕೊಡುಗೆ ಅಪಾರ. ಇವರಿಬ್ಬರು ಸಮುದಾಯದ ಎರಡು ಕಣ್ಣುಗಳು. ಇವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ನಮ್ಮಲ್ಲಿ ಅನುದಾನಕ್ಕೆ ಕೊರತೆ ಇಲ್ಲ. ಇತರರು ಹೇಳುವ ಸುಳ್ಳುಗಳಿಗೆ ಕಿವಿಕೊಡಬೇಡಿ. ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಮಹಿಳಾ ಸಬಲೀಕರಣ, ರೈತರ ಉಪಯುಕ್ತ ಯೋಜನೆ ಜಾರಿ, ಜನಸಾಮಾನ್ಯರ ಆರ್ಥಿಕ ಸದೃಢತೆಗೆ ಸರ್ಕಾರ ಬದ್ಧವಿದೆ ಹಾಗೂ ಈ ಯೋಜನೆಗಳು ಸಾಕಾರಗೊಳ್ಳಲು ರಾಜ್ಯದ ಜನತೆ ಬಹುಮತ ನೀಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಆರ್ಥಿಕ ಶಕ್ತಿ ನೀಡಿದ್ದೇವೆ: ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, ಪ್ರತಿಯೊಬ್ಬರಿಗೂ ಆರ್ಥಿಕ ಮತ್ತು ಸ್ವಾವಲಂಬನೆ ಬದುಕಿಗೆ ಆರ್ಥಿಕತೆ ಶಕ್ತಿ ನೀಡಿದ ಕೀರ್ತಿ ನಮ್ಮ ಸರ್ಕಾರಕ್ಕಿದೆ. ಸಮೃದ್ಧ ಭಾರತ ನಿರ್ಮಾಣ ಮತ್ತು ಕೋಮುವಾದ ಕೊನೆಗಾಣಿಸುವ ಮತ್ತು ರಾಜ್ಯವನ್ನು ಅಭಿವೃದ್ಧಿ ಕಡೆ ಕೊಂಡೊಯ್ಯುವ ಕಾರ್ಯ ಮಾಡುತ್ತಿದ್ದೇವೆ. ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಅವರು ಕಂಡ ಸಮ ಸಮಾಜದ ನಿರ್ಮಾಣಕ್ಕೆ ಪಣ ತೊಟ್ಟಿದ್ದೇವೆ. ಆದ್ದರಿಂದ ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಕೆಲಸದವಳ ಹತ್ತಿರ ಏನಾದ್ರೂ ತರ್ಲೆ ಮಾಡಿದ್ರಾ..?
ಗಂಡ : ಯಾಕೆ ಏನಾಯ್ತು...?
ಹೆಂಡತಿ : ಇಷ್ಟು ದಿನ ಅಮ್ಮ ಎಂದು ಕರೆಯುತ್ತಿದ್ದವಳು... ಈಗ 'ಅಕ್ಕ' ಎಂದು ಕರೆಯುತ್ತಿದ್ದಾಳೆ...!!

ಮೈಸೂರು ಮಿತ್ರ

ಭಾನುವಾರ, 27 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ
ನೀ ಕನ್ನಡವಾಗಿರು... – ಕುವೆಂಪು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಯಿ ಬೊಗಳಿದರೆ ಭೂಲೋಕ ಹಾಳಾಗುತ್ತಾ?

ನಿಮ್ಮ ಪತ್ರಗಳು

ಮಂಟೇಸ್ವಾಮಿ ಪ್ರಾಧಿಕಾರ ರಚನೆ ಸಲ್ಲದು

ಮಾನ್ಯರೆ,

ಮಹದೇಶ್ವರ ಬೆಟ್ಟದಲ್ಲಿ ಜರುಗಿದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಹಳೆ ಮೈಸೂರು ಭಾಗದ ನೀಲಗಾರ ಪರಂಪರೆ ಹಿಂದೂ ಧಾರ್ಮಿಕ ಕೇಂದ್ರವಾದ ಹಿಂದುಳಿದ ವರ್ಗಗಳು ಹಾಗೂ ತಳಸಮುದಾಯಗಳ ಆರಾಧ್ಯ ದೈವವಾಗಿರುವ ಮಂಟೇಸ್ವಾಮಿ ಪರಂಪರೆಗೆ ಸೇರಿದ ಮಠಗಳನ್ನು ಸ್ವಾಧೀನಪಡಿಸಿಕೊಂಡು ಕೊಳ್ಳೇಗಾಲದ ಚಿಕ್ಕಲೂರಿನಲ್ಲಿ ರಾಜ್ಯ ಸರ್ಕಾರವು ಮಂಟೇಸ್ವಾಮಿ ರಾಚಪ್ಪಾಜಿ, ಸಿದ್ದಪ್ಪಾಜಿ ಪ್ರಾಧಿಕಾರ ರಚನೆ ಮಾಡಲು ತೀರ್ಮಾನ ಮಾಡಿದೆ. ಜಾತ್ಯಾತೀತ, ಜಾನಪದ ಪರಂಪರೆಯ ಉಸಿರಾಗಿರುವ ಮಂಟೇಸ್ವಾಮಿ ಪರಂಪರೆ ಹಳೆ ಮೈಸೂರು ಭಾಗದಲ್ಲಿ, ತಮಿಳುನಾಡಿನ ಕೆಲವು ಭಾಗಗಳನ್ನು ಒಳಗೊಂಡಂತೆ ಲಕ್ಷಾಂತರ ಭಕ್ತರನ್ನು ಹೊಂದಿದ್ದು ಸರ್ಕಾರ ಇದರ ಮೇಲೆ ಹಿಡಿತ ಸಾಧಿಸಲು ಹೊರಟಿರುವುದು ಖಂಡನೀಯ. 15ನೇ ಶತಮಾನದ ಸಾಮಾಜಿಕ ಹರಿಕಾರರಾದ ಮಂಟೆಸ್ವಾಮಿಯವರು ಈ ಮಠವನ್ನು ಸ್ಥಾಪಿಸಿದ್ದು ಅವರ ಮಕ್ಕಳು ಮಠಾಧಿಪತಿಗಳಾಗಿ ನೀಲಗಾರ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ ಹಾಗೂ ಮಠದಲ್ಲಿ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಮಾಡಿದ್ದಾರೆ, ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಮುನ್ನಡೆಸುತ್ತಿದ್ದಾರೆ. ತಳಸಮುದಾಯಗಳ ಹಾಗೂ ಹಿಂದುಳಿದ ವರ್ಗಗಳ ಭಕ್ತರು ಅತೀ ಹೆಚ್ಚು ಇರುವ ಈ ಮಠವನ್ನು ಏಕಾಏಕಿ ಸರ್ಕಾರ ಸ್ವಾಧೀನಪಡಿಸಿಕೊಂಡು ಪ್ರಾಧಿಕಾರ ರಚನೆ ಮಾಡಲು ಹೊರಟಿರುವ ಈ ಧೈರ್ಯವನ್ನು ರಾಜ್ಯದ ದೊಡ್ಡ ದೊಡ್ಡ ಮಠಗಳಿಗೆ ಹಾಗೂ ದೇವಸ್ಥಾನಗಳಿಗೋ ಇದೇ ರೀತಿ ಪ್ರಾಧಿಕಾರ ರಚನೆ ಮಾಡಿ ವಶಪಡಿಸಿಕೊಳ್ಳುತ್ತಾರೆಯೆ ಎಂಬ ಪ್ರಶ್ನೆ ಮೂಡುತ್ತದೆ. ಹಾಗೆ ಮಾಡದಿದ್ದ ಮೇಲೆ ಮಂಟೇಸ್ವಾಮಿ ಪಾರಂಪರಿಕ ಮಠಗಳು ಹಾಗೂ ಆಸ್ತಿಗಳ ಮೇಲೆ ಮಾತ್ರವೇಕೆ ಸರ್ಕಾರದ ಕಣ್ಣು.

–ಲಕ್ಷ್ಮಿ ಕಿಶೋರ್ ಅರಸ್, ಲೇಖಕರು, ಮೈಸೂರು

ಅಪಾಯಕಾರಿ ರಸ್ತೆ



ಮಾನ್ಯರೆ,

ಶಾಂತಲಾ ಟಾಕೀಸ್ ಸರ್ಕಲ್‌ನಿಂದ ಸಿದ್ದಪ್ಪ ಸ್ಕ್ವೇರ್ ಸರ್ಕಲ್ ಮಧ್ಯೆ ಇರುವ ನಾರಾಯಣ ಶಾಸ್ತ್ರಿ ರಸ್ತೆಯನ್ನು ಅಂದರೆ ಮಹದೇಶ್ವರ ಸ್ವಾಮಿಯ ದೇವಸ್ಥಾನ ದಿಂದ ಸುಮಾರು ಇನ್ನೂರು ಮೀಟರ್ ರಸ್ತೆಯನ್ನು ದೊಡ್ಡ ಪೈಪ್‌ಗಳನ್ನು ಹೂಳಲು ಅಗೆದು ಮುಚ್ಚಲಾಗಿದೆ. ಆದರೆ ಮುಚ್ಚಿದ ನಂತರ ರಸ್ತೆಗೆ ಡಾಂಬರೀಕರಣ ಮಾಡಲಾಗಿಲ್ಲ. ಮಣ್ಣಿನ ಗುಡ್ಡೆಯನ್ನು ಹಾಗೆಯೇ ಉಳಿಸಿದ್ದಾರೆ. ಇದರಿಂದ ಅರ್ಧ ಭಾಗದ ರಸ್ತೆಯು ವಾಹನಗಳ ಚಾಲನೆಗೆ ಅಯೋಗ್ಯ ಮತ್ತು ಅಪಾಯಕಾರಿಯಾಗಿವೆ. ಕೆಲವು ಚಾಲಕರು ಅಪಾಯವನ್ನು ಮೈಮೇಲೆಳೆದುಕೊಂಡು ಚಲಿಸಿದರೆ ಆಯತಪ್ಪಿ ಬಿದ್ದು ಅಪಘಾತವಾಗುವ ಸಾಧ್ಯತೆಗಳೇ ಹೆಚ್ಚಾಗಿವೆ. ಹಾಗೇನಾದರೂ ಜೀವಹಾನಿ ಉಂಟಾದಲ್ಲಿ ಅದಕ್ಕೆ ನಗರಪಾಲಿಕೆ ಮತ್ತು ಗುತ್ತಿಗೆದಾರನೇ ನೇರ ಹೊಣೆಯಾಗುತ್ತಾರೆ. ಈ ಕೂಡಲೇ ಸಂಬಂಧಪಟ್ಟವರು ಮಣ್ಣಿನ ಗುಡ್ಡೆಯನ್ನು ಸರಿಪಡಿಸಿ ರಸ್ತೆ ಸಮತಟ್ಟುಗೊಳಿಸಿ ಡಾಂಬರೀಕರಣ ಮಾಡಿಸತಕ್ಕದ್ದು.

–ಎಸ್.ರವಿ, ವಕೀಲ, ಮೈಸೂರು

ಉಗ್ರರ ನಿರ್ನಾಮ ಮಾಡಲು ಭಾರತ ಬೆಂಬಲಿಸಿ

ಮಾನ್ಯರೆ,

ಜಮ್ಮು – ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಪಾಕಿಸ್ತಾನಿ ಪ್ರೇರಿತ ಭಯೋತ್ಪಾದಕರು ಹಿಂದೂಗಳನ್ನೇ ಗುರಿಯಾಗಿಸಿಕೊಂಡು ಗುಂಡಿನ ದಾಳಿ ನಡೆಸಿದ್ದು, ಪ್ರತೀಕಾರವಾಗಿ ಭಾರತ ಸರ್ಕಾರ ಪಾಕಿಸ್ತಾನದೊಂದಿಗೆ ಇದ್ದ ಎಲ್ಲಾ ಸಂಬಂಧಗಳನ್ನು ಕಡಿದುಕೊಂಡಿರುವುದು ಭಾರತದ ದಿಟ್ಟ ಕ್ರಮ. 1960ರ ಸಿಂಧೂ ಮತ್ತು ಅದರ ಉಪನದಿಗಳ ನೀರು ಹಂಚಿಕೆ ಒಪ್ಪಂದವನ್ನು ಹಿಂತೆಗೆದು ಕೊಂಡಿರುವುದು, ಅಟ್ಟಾರಿ–ವಾಘಾ ಗಡಿಯ ರಸ್ತೆ ಸಂಚಾರವನ್ನು ಸಂಪೂರ್ಣವಾಗಿ ಬಂದ್ ಮಾಡಿರುವುದು, ಮುಂದಿನ 72 ಗಂಟೆಗಳಲ್ಲಿ ಪಾಕಿಸ್ತಾನದ ಪ್ರಜೆಗಳೆಲ್ಲರೂ ದೇಶ ತೊರೆಯುಂತೆ ಸೂಚನೆ ನೀಡಿರುವುದು ಭಾರತ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ದೇಶದ ರಕ್ಷಣೆಗಾಗಿ ಎಲ್ಲಾ ರಾಜಕೀಯ ಪಕ್ಷಗಳು ಕೇಂದ್ರ ಸರ್ಕಾರದ ಬೆಂಬಲಕ್ಕೆ ನಿಂತಿವೆ. ಉಗ್ರಗಾಮಿ ಸಂಘಟನೆಗಳು ಮತ್ತು ಅವರನ್ನು ಪೋಷಿಸುತ್ತಿರುವವರನ್ನು ಮಟ್ಟ ಹಾಕಲು ಭಾರತಕ್ಕೆ ಇದೊಂದು ಅವಕಾಶ. ಈಗ ಕೇವಲ ವೀರಾವೇಷದ ಭಾಷಣ ಮಾಡಿ ಪ್ರಯೋಜನವಿಲ್ಲ. ಇಡೀ ವಿಶ್ವವೇ ಉಗ್ರರ ನಿರ್ನಾಮ ಮಾಡಲು ಭಾರತವನ್ನು ಬೆಂಬಲಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ವಿಶಾಲವಾಗಿ ಹರಡಿಕೊಂಡಿರುವ ಮರದ ಕೊಂಬೆ ಕಡಿಯಿರಿ



ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಸಾಯಿಬಾಬಾ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ 17ನೇ ಮುಖ್ಯ ರಸ್ತೆಯಲ್ಲಿ ಜೆ.ಪಿ.ನಗರ 3ನೇ ಹಂತ 8ನೇ ಕ್ರಾಸ್ ಎಂಬ ಮಾರ್ಗಸೂಚಿ ಫಲಕದ ಪಕ್ಕದಲ್ಲಿ ನಾಲ್ಕು ಸಾಲು ಮರಗಳಿದ್ದು ಈ ಮರಗಳ ಕೊಂಬೆಗಳು ವಿಶಾಲವಾಗಿ ಹರಡಿಕೊಂಡಿವೆ. ಇದರಿಂದ ಈ ರಸ್ತೆಯಲ್ಲಿ ಸಂಚರಿಸುವ ಪಾದಚಾರಿಗಳಿಗೆ ಮತ್ತು ದ್ವಿಚಕ್ರ ವಾಹನ ಸವಾರರಿಗೆ ಕೊಂಬೆಗಳು ತಗಲುತ್ತವೆ. ದಿನಾಂಕ 24.04.2025 ರ ಶುಕ್ರವಾರದಂದು ಬೆಳಿಗ್ಗೆ ನಾನು ಆಟೋದಲ್ಲಿ ಮನೆಗೆ ತೆರಳುತ್ತಿದ್ದಾಗ ಈ ಮರದ ಕೊಂಬೆಯೊಂದು ನನ್ನ ಕಣ್ಣಿಗೆ ತಗುಲಿತು. ಆದಕಾರಣ ಅನಾಹುತಗಳು ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಈ ಮರದ ಕೊಂಬೆಗಳನ್ನು ಕಡಿಯಲು ಕ್ರಮ ಕೈಗೊಳ್ಳಬೇಕೆಂದು ಮನವಿ.

–ಕೆ.ಎನ್.ಅಶ್ವತ್ಥನಾರಾಯಣ, ಜೆ.ಪಿ.ನಗರ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಭಾರತೀಯರು ಮರೆಯಲೇಬಾರದವರು!



ವಿನಾಯಕ ದಾಮೋದರ ಸಾವರ್ಕರ್

❝ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಎದ್ದು ತೋರುವ ಒಬ್ಬ ವ್ಯಕ್ತಿ ಎಂದರೆ ಅವರು ವಿನಾಯಕ ದಾಮೋದರ ಸಾವರ್ಕರ್ ಅವರು. ಜನರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿದ ಅಗ್ರಗಣ್ಯ ಅವರು. ಬಹುಶಃ ಅಂದು ಅತ್ಯಂತ ಕಠಿಣ ಶಿಕ್ಷೆ ಎಂದೇ ಹೆಸರು ಪಡೆದಿದ್ದ ಕಾಲಾಪಾನಿ ಅಥವಾ ಅಂಡಮಾನಿನ ಕರಿನೀರಿನ ಶಿಕ್ಷೆಯನ್ನು ಒಂದೇ ಬದುಕಿನಲ್ಲಿ ಎರಡು ಬಾರಿ ಪಡೆದ ಏಕೈಕ ದೇಶಭಕ್ತ ಆತ. ಅದಕ್ಕಾಗಿ ಅಳುಕಿದರೇ? ಖಂಡಿತಾ ಇಲ್ಲ. ಅವರನ್ನು ಎಲ್ಲೇ ಇಟ್ಟರೂ ಅಲ್ಲಿ ದೇಶಾಭಿಮಾನ ಉಕ್ಕಿಸುವಂತಹ ಕೆಲಸ ಮಾಡಿ, ನೂರಾರು, ಸಹಸ್ರಾರು ಮಂದಿಯನ್ನು ಸ್ವಾತಂತ್ರ್ಯದ ಹೋರಾಟಕ್ಕೆ ತಯಾರು ಮಾಡುತ್ತಿದ್ದ ಅದ್ಭುತ ವಾಗ್ಮಿ ಆತ. ಅವರ ಬಳಿಗೆ ಬಂದ ಯಾರೇ ಆದರೂ ಅವರ ಮಾತಿನ ಮೋಡಿಗೆ ಮರುಳಾಗಿ, ಎದೆಯಲ್ಲಿ ಸ್ವಾತಂತ್ರ್ಯದ ಕಿಡಿ ಹಚ್ಚಿಸಿಕೊಂಡೇ ತೆರಳುತ್ತಿದ್ದುದು. ತಮ್ಮ ಬದುಕಿನ ಗುರಿ ಭಾರತಮಾತೆಯೇ ಎಂಬುದನ್ನು ಎದೆಯಲ್ಲಿ ಬರೆದುಕೊಂಡಿದ್ದ ಮಹಾಪುರುಷ ಅವರು.

ಸ್ವಾತಂತ್ರ್ಯ ಸಿಕ್ಕಿದ ನಂತರ ಹುಟ್ಟಿರುವ ಇಂದಿನ ಭಾರತೀಯ ಯುವಕರಿಗೆ ಭಾರತದ ಸ್ವಾತಂತ್ರ್ಯ ಹೋರಾಟದ ಕತೆಯನ್ನು ತಿಳಿಸಿ, ದೇಶವನ್ನು ಬ್ರಿಟಿಷರ ಕಪಿಮುಷ್ಟಿಯಿಂದ ಬಿಡಿಸಲು ಅದೆಷ್ಟು ಜನ ದೇಶಭಕ್ತರು ತಮ್ಮ ತನು–ಮನ–ಧನಗಳನ್ನಷ್ಟೇ ಅಲ್ಲದೆ ಪ್ರಾಣವನ್ನೂ ಅರ್ಪಣೆ ಮಾಡಿದ್ದಾರೆ ಎಂಬುದರ ನೈಜ ಚಿತ್ರವನ್ನು, ಸರಿಯಾದ ತಿಳುವಳಿಕೆಯನ್ನು ನೀಡುವುದರಲ್ಲಿ ನಾವು ಎಲ್ಲಿಯೋ ಸೋತಿದ್ದೇವೆಯೇನೋ ಎಂದು ನನಗೆ ಹಲವು ಬಾರಿ ಅನ್ನಿಸಿರುವುದುಂಟು.

ಕೇವಲ ಅಂಕ(ಮಾರ್ಕ್ಸ್)ಗಳನ್ನು ಗಳಿಸುವುದೇ ಬದುಕಿನ ಗುರಿಯೇನೋ ಎಂಬಂತೆ ಅದರ ಹಿಂದೆ ಓಡುವುದಷ್ಟನ್ನೇ ಕಲಿಸಿ, ಭಾರತೀಯ ಮೌಲ್ಯಗಳನ್ನು ಬಿತ್ತುವುದರ ಕಡೆಗೆ ಲಕ್ಷ್ಯ ಕಡಿಮೆ ಆಯಿತೇನೋ ಎಂದು ನಿಮಗೆ ಅನ್ನಿಸುವುದಿಲ್ಲವೇ ? ನಿಜ. ಇಂದಿನ ಬದುಕು ಸ್ಪರ್ಧಾತ್ಮಕವಾದುದು ಹೌದು. ಆದರೆ ಮಾನವೀಯತೆಯನ್ನು ಳಿದುದು ಖಂಡಿತಾ ಆಗಬಾರದು ಅಲ್ಲವೇ ? ವಿದ್ಯಾರ್ಥಿ ಜೀವನದಲ್ಲಿ ಕಲಿಕೆಯ ಜೊತೆಗೆ ದೇಶದ ಬಗ್ಗೆ ಅಭಿಮಾನವೂ ಸೇರಿದರೆ, ಅದು ಮುಂದಿನ ಆತ್ಮಗೌರವದ ಬದುಕಿಗೆ ತಳಪಾಯ ಆಗುತ್ತದೆ ಅಲ್ಲವೇ?

'ಭಾರತಮಾತೆ' ಎಂಬ ಕಲ್ಪನೆಯೇ ಚೇತೋಹಾರಿಯಾದುದು. ಅಷ್ಟೇ ಅಲ್ಲ, ಭಾರತೀಯರೆಲ್ಲರನ್ನೂ ಒಂದುಗೂಡಿಸುವ ಮಹಾ ಚೈತನ್ಯ ಅದು. ಅವಳನ್ನು ಬಂಧಿಸಿ ಇರಿಸಿದ್ದ ಬ್ರಿಟಿಷರ ಕರಾಳ ಕಪಿಮುಷ್ಟಿಯಿಂದ ಬಿಡಿಸುವುದಕ್ಕಿಂತ ಮಿಗಿಲಾದ ಕಾರ್ಯವೇ ಇಲ್ಲ ಎಂದು ನಂಬಿದ್ದ ಜನತೆ, ಅದಕ್ಕಾಗಿ ಪಟ್ಟ ಕಷ್ಟವನ್ನು, ಸಹಿಸಿದ ನೋವು–ಹಿಂಸೆಗಳನ್ನು, ಪಟ್ಟ ಪಾಡನ್ನು ನಾವು ಮರೆತುಬಿಡುವುದು ಅದೆಷ್ಟು ಸರಿ. 'ದೇಶಕ್ಕಾಗಿ ನೀಡಿದ ಅವರ ಬಲಿದಾನವನ್ನು ಸ್ಮರಿಸುವಷ್ಟಾದರೂ ಕೃತಜ್ಞತೆ ನಮಗೆ ಬೇಕಲ್ಲವೇ'. ಇಂದಿನ ಯುವಕರಲ್ಲಿ ಈ ಮಹಾನ್ ದೇಶದ ಬಗ್ಗೆ ಗೌರವ, ಪ್ರೀತಿ, ಭಕ್ತಿ ಉಂಟುಮಾಡುವಂತೆ ಅದರ ಇತಿಹಾಸವನ್ನು ತಿಳಿಸಬೇಕಾದುದು ಹಿರಿಯರೆಲ್ಲರ ಆದ್ಯ ಕರ್ತವ್ಯ. ಬೀಜವನ್ನು ಬಿತ್ತದೇ ಫಲವೇ ಇಲ್ಲ ಅಂದರೆ, ಅದು ಹೇಗೆ ಸರಿಯಾಗುತ್ತದೆ?

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ, ಸ್ವಾರ್ಥವನ್ನು ಸಂಪೂರ್ಣವಾಗಿ ತೊರೆದು, ದೇಶ ಸೇವೆಗಾಗಿ ಇಡೀ ಬದುಕನ್ನು ಸವೆಸಿದ, ನಗುನಗುತ್ತಲೇ ನೇಣಿನ ಉರುಳಿಗೆ ಕೊರಳನ್ನು ಒಡ್ಡಿದ ಕೋಟ್ಯಾಂತರ ದೇಶಭಕ್ತರಿಗೆ, ದೇಶ ಸೇವಕರಿಗೆ ಕೋಟಿ ಕೋಟಿ ನಮನಗಳು ಸಲ್ಲಲೇಬೇಕು. ಅವರ ಬಲಿದಾನದಿಂದಲ್ಲವೇ ನಾವು ಇಂದು ಇಷ್ಟು ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವುದು. ಅವರ ಚರಿತೆಯನ್ನಲ್ಲವೇ ನಮ್ಮ ಮಕ್ಕಳು ಅಭ್ಯಸಿಸಬೇಕಾದುದು. ಇತಿಹಾಸವನ್ನು ತಿರುಚಿ, ನಮ್ಮ ದೇಶದ ಮಹಾನ್ ನಾಯಕರ ತ್ಯಾಗ–ಬಲಿದಾನವನ್ನು ಮರೆಮಾಚಿ, ದಂಗೆಕೋರರ, ಆಕ್ರಮಣಕಾರರನ್ನು ವೈಭವೀಕರಿಸುವ ಮಟ್ಟಕ್ಕೆ ನಾವು ಬಂದುದೇ ದೊಡ್ಡ ದುರಂತ. ಇನ್ನಾದರೂ ಎಚ್ಚೆತ್ತುಕೊಳ್ಳುವ, ನಮ್ಮ ನಾಡಿನ ನೈಜ ಇತಿಹಾಸವನ್ನು ಮುಂದಿನ ಪೀಳಿಗೆಗೆ ತಿಳಿಸುವ ಬುದ್ಧಿ ನಮಗೆ ಬರಲಿ.

ಝಾನ್ಸಿರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ವೀರ ಸಾವರ್ಕರ್, ಭಗತ್ ಸಿಂಗ್, ಅನಂತ ಲಕ್ಷ್ಮಣ ಕಾನ್ಹೇರೆ, ಲಾಲಾ ಹರದಯಾಳ್, ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ, ಸುಭಾಷ್ ಚಂದ್ರ ಬೋಸ್, ಚಂದ್ರಶೇಖರ ಆಝಾದ್, ರಾಜಗುರು, ಮದನ್‌ಲಾಲ್ ಡಿಂಗ್ರ, ತಾತ್ಯಾ ಟೋಪೆ, ಸುಖದೇವ, ದಾಮೋದರ ಛಾಫೇಕರ, ಲಾಲಾ ಲಜಪತರಾಯ್, ಮಂಗಳಪಾಂಡೆ ಹೀಗೆ ಹೆಸರಿಸುತ್ತಾ ಹೋದಲ್ಲಿ, ಲಕ್ಷಾಂತರ ಮಂದಿಯನ್ನು ಸೇರಿಸಬೇಕಾಗುತ್ತದೆ. ಅವರೆಲ್ಲರ ಋಣ ನಮ್ಮ ಮೇಲಿದೆ. ಅವರಲ್ಲಿದ್ದ ದೇಶಭಕ್ತಿಯ ಒಂದಂಶವಾದರೂ ನಮಗೆ ಬರಲಿ. ನಮ್ಮ ದೇಶಕ್ಕೆ ವ್ಯಾಪಾರದ ಸೋಗಿನಲ್ಲಿ ಬಂದು, ನಮ್ಮನ್ನೇ ಅಡಿಯಾಳಾಗಿ ಮಾಡಿಕೊಂಡದ್ದಲ್ಲದೆ, ಸ್ವಾತಂತ್ರ್ಯ ಹೋರಾಟಗಾರರನ್ನು ಅತೀ ಅಮಾನುಷವಾಗಿ ಚಿತ್ರಹಿಂಸೆ ನೀಡಿ ಶಿಕ್ಷಿಸುತ್ತಿದ್ದ ಬ್ರಿಟಿಷರ ಕ್ರೌರ್ಯಕ್ಕೆ ಸಾಟಿ ಏನಾದರೂ ಇದೆಯೇ?


ಒಬ್ಬೊಬ್ಬ ದೇಶಭಕ್ತರೂ ಸಿಡಿಲ ಮರಿಗಳಂತಿದ್ದವರು. ಅವರ ನರನಾಡಿಗಳಲ್ಲಿ ತಾಯಿ ಭಾರತ ಮಾತೆಯನ್ನು ಬಂಧನದಿಂದ ವಿಮುಕ್ತಿಗೊಳಿಸುವ ಅಚಲ ನಿರ್ಧಾರದ ಹೊರತು ಬೇರೇನೂ ಇಲ್ಲ. ಅದಕ್ಕಾಗಿ ಅದೆಂತಹ ಶಿಕ್ಷೆಯನ್ನೂ ಅನುಭವಿಸಲು ಅವರು ಸದಾ ಸಿದ್ಧರಾಗಿರುತ್ತಿದ್ದರು. ಈ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಎದ್ದು ತೋರುವ ಒಬ್ಬ ವ್ಯಕ್ತಿ ಎಂದರೆ ಅವರು ವಿನಾಯಕ ದಾಮೋದರ ಸಾವರ್ಕರ್ ಅವರು. ಜನರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿದ ಅಗ್ರಗಣ್ಯ ಅವರು. ಬಹುಶಃ ಅಂದು ಅತ್ಯಂತ ಕಠಿಣ ಶಿಕ್ಷೆ ಎಂದೇ ಹೆಸರು ಪಡೆದಿದ್ದ ಕಾಲಾಪಾನಿ ಅಥವಾ ಅಂಡಮಾನಿನ ಕರಿನೀರಿನ ಶಿಕ್ಷೆಯನ್ನು ಒಂದೇ ಬದುಕಿನಲ್ಲಿ ಎರಡು ಬಾರಿ ಪಡೆದ ಏಕೈಕ ದೇಶಭಕ್ತ ಆತ. ಅದಕ್ಕಾಗಿ ಅಳುಕಿದರೇ? ಖಂಡಿತಾ ಇಲ್ಲ.

ಅವರನ್ನು ಎಲ್ಲೇ ಇಟ್ಟರೂ ಅಲ್ಲಿ ದೇಶಾಭಿಮಾನ ಉಕ್ಕಿಸುವಂತಹ ಕೆಲಸ ಮಾಡಿ, ನೂರಾರು, ಸಹಸ್ರಾರು ಮಂದಿಯನ್ನು ಸ್ವಾತಂತ್ರ್ಯದ ಹೋರಾಟಕ್ಕೆ ತಯಾರು ಮಾಡುತ್ತಿದ್ದ ಅದ್ಭುತ ವಾಗ್ಮಿ ಆತ. ಅವರ ಬಳಿಗೆ ಬಂದ ಯಾರೇ ಆದರೂ ಅವರ ಮಾತಿನ ಮೋಡಿಗೆ ಮರುಳಾಗಿ, ಎದೆಯಲ್ಲಿ ಸ್ವಾತಂತ್ರ್ಯದ ಕಿಡಿ ಹಚ್ಚಿಸಿಕೊಂಡೇ ತೆರಳುತ್ತಿದ್ದುದು. ತಮ್ಮ ಬದುಕಿನ ಗುರಿ ಭಾರತಮಾತೆಯೇ ಎಂಬುದನ್ನು ಎದೆಯಲ್ಲಿ ಬರೆದುಕೊಂಡಿದ್ದ ಮಹಾಪುರುಷ ಅವರು. ಅವರಲ್ಲಿ ಮನೆ ಮಾಡಿದ್ದ ಸಾಹಸ, ಧೈರ್ಯ, ದೇಶಭಕ್ತಿ ಎಲ್ಲವೂ ಮಿಳಿತವಾಗಿ ಅವರನ್ನು ಒಬ್ಬ ಮಹಾನ್ ಕ್ರಾಂತಿಕಾರರನ್ನಾಗಿ ರೂಪಿಸಿದ್ದುವು. ಜಗತ್ತಿನ ಇತಿಹಾಸಗಳ ಪರಿಚಯ ಅವರಿಗೆ ಚೆನ್ನಾಗಿಯೇ ಇತ್ತು. ಅದನ್ನೂ ತಮ್ಮ ಹೋರಾಟಕ್ಕಾಗಿ ಬಳಸಿಕೊಂಡ ತೀಕ್ಷ್ಣಮತಿ. ಬಡಿದೆಬ್ಬಿಸಬಲ್ಲಂಥ ಮೊನಚು ಮಾತಿನ ಬರಹಗಾರ. ಬಹುಶಃ ಪುಸ್ತಕ ಪ್ರಕಟವಾಗುವ ಮೊದಲೇ ಎರಡು ದೇಶಗಳಲ್ಲಿ ನಿಷೇಧಿಸಲ್ಪಟ್ಟ ಏಕೈಕ ಬರಹಗಾರ ಆತ!

ಅಹಿಂಸೆ, ಉಪವಾಸ ಇವುಗಳಿಂದ ದೇಶದ ಸ್ವಾತಂತ್ರ್ಯ ದೊರಕುವುದು ಅಸಾಧ್ಯ ಎಂದು ದೃಢವಾಗಿ ನಂಬಿದ್ದ ಆತ, ನಿರ್ವೀರ್ಯರಂತಿದ್ದ ಜನರಲ್ಲಿ ಸ್ವಾಭಿಮಾನದ ಮಿಂಚಿನ ಸಂಚಾರವನ್ನು ಉಂಟುಮಾಡಿ, ದೇಶದ ಹೋರಾಟಕ್ಕೆ ಸಜ್ಜುಗೊಳಿಸುತ್ತಿದ್ದ ಮಹಾನ್ ಹೋರಾಟಗಾರ ಅವರು. ಅವರ ಸಾಮೀಪ್ಯಕ್ಕೆ ಬಂದವರು ಯಾರೂ ಅವರ ಪ್ರಭಾವಕ್ಕೆ ಒಳಗಾಗದೇ ಇರಲು ಸಾಧ್ಯವೇ ಇರಲಿಲ್ಲ.

ಬ್ರಿಟಿಷ್ ಸರಕಾರಕ್ಕೆ ದೊಡ್ಡ ತಲೆನೋವಾಗಿದ್ದ ಅವರನ್ನು ಮಟ್ಟ ಹಾಕಲು ಕಾದಿದ್ದ ಬ್ರಿಟಿಷ್ ಸರಕಾರವು ಅಂಡಮಾನಿನ ಕಾರಾಗೃಹಕ್ಕೆ ಕಳಿಸಿತೇನೋ ಸರಿ. ಆದರೆ ಅವರ ಎದೆಯಲ್ಲಿ ಧಗಧಗಿಸುತ್ತಿದ್ದ ಸ್ವಾತಂತ್ರ್ಯದ ಕಿಚ್ಚನ್ನು ನಂದಿಸಲು ಸಾಧ್ಯವಾಯಿತೇ? ಸರಕಾರಕ್ಕೆ ತನ್ನ ಮಿತಿಯ ಬಗ್ಗೆ ಅರಿವಿತ್ತು ಆ ಹತಾಶ ಭಾವದಿಂದಲೇ ಅವರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ನೀಡಿ ತನ್ನನ್ನು ಸಮಾಧಾನಗೊಳಿಸಿಕೊಳ್ಳುತ್ತಿತ್ತು. ಇದೆಲ್ಲವನ್ನೂ ಗೆದ್ದು ಬಂದ ಮೃತ್ಯುಂಜಯನಂತೆ ಪ್ರಕಾಶಿಸಿದ ಸಾವರ್ಕರ್ ಅವರನ್ನು ಬಿಡುಗಡೆ ಸಿಕ್ಕ ನಂತರ ದೇಶದ ಅಧಿಕಾರದ ಚುಕ್ಕಾಣಿ ಹಿಡಿದ ಭಾರತೀಯರೇ ಅರ್ಥ ಮಾಡಿಕೊಳ್ಳದಿದ್ದುದು ದೊಡ್ಡ ದುರಂತವೇ ಸರಿ. ಸ್ವಾತಂತ್ರ್ಯ ಹೋರಾಟಗಾರರಲ್ಲಿ ಬಹುಶಃ ಅವರಿಗೆ ಮಾಡಿದಷ್ಟು ಅವಮಾನ, ತಿರಸ್ಕಾರ ಮತ್ಯಾರಿಗೂ ಮಾಡಿರಲಿಕ್ಕಿಲ್ಲ. ಯಾರ ತ್ಯಾಗ, ಬಲಿದಾನ ಆತ್ಮಾಹುತಿ ದೇಶಕ್ಕಾಗಿಯೇ ಆಯಿತೋ ಅಂತಹ ದೇಶಭಕ್ತನಿಗೆ ಸಿಕ್ಕ ಬಳುವಳಿ ಇಡೀ ಭಾರತೀಯರು ನಾಚಿಕೆಯಿಂದ ತಲೆ ತಗ್ಗಿಸುವಂತಹುದು. ನಮ್ಮ ದೇಶ ಮತ್ತು ಹಿಂದೂ ಧರ್ಮದ ರಕ್ಷಣೆಗಾಗಿ ಅಹರ್ನಿಶಿ ದುಡಿದ ಆ ಮಹಾತ್ಮನಿಗೆ ಇಗೋ ನಮ್ಮದೊಂದು ಅಶ್ರುತರ್ಪಣ, ಕೋಟಿ ನಮನ.

ಮೈಸೂರು ಕ್ರಿಕೆಟ್ ಸ್ಟೇಡಿಯಂಗೆ ಭೂಮಿ ದಕ್ಕಿದ್ದಕ್ಕೆ ಸಂಸದ ಯದುವೀರ್ ಸಂಭ್ರಮ



ಸಂಸದ ಯದುವೀರ್ ಒಡೆಯರ್ ಅವರು ಜನವರಿ 6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಮಾಲೋಚನೆ ನಡೆಸಿ, ಕ್ರಿಕೆಟ್ ಸ್ಟೇಡಿಯಂಗೆ ಭೂ ಹಸ್ತಾಂತರ ಪ್ರಕ್ರಿಯೆ ವಿಳಂಬದ ಕುರಿತು ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಿದ್ದರು.

ಮೈಸೂರು,ಏ.26(ಪಿಎಂ)– ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಮೈಸೂರಿನ ಇಲವಾಲ ಹೋಬಳಿಯ ಹುಯಿಲಾಳು ಗ್ರಾಮದಲ್ಲಿ ಅಗತ್ಯ ಜಮೀನು ನೀಡಲು ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿರುವುದು ಮೈಸೂರಿಗೆ ಅತ್ಯಂತ ಖುಷಿಯ ವಿಚಾರವಾಗಿದೆ ಎಂದು ಮೈಸೂರು ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಂಸದರು, ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯ ವೀಕ್ಷಿಸಬೇಕೆಂಬ ಮೈಸೂರಿಗರ ಕನಸು ನನಸು ಮಾಡಬೇಕೆಂಬ ತುಡಿತವಿತ್ತು. ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಕ್ರಿಕೆಟ್ ಮೈದಾನ ನಿರ್ಮಿಸಬೇಕೆಂಬ ಪ್ರಕ್ರಿಯೆ ಕಳೆದ ಕೆಲ ವರ್ಷದಿಂದ ಸ್ಥಗಿತಗೊಂಡಿತ್ತು. ಇದಕ್ಕೆ ಮರು ಚಾಲನೆ ನೀಡಲು ನಿರ್ಧರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕಂದಾಯ ಸಚಿವ ಕೃಷ್ಣ ಭೈರೇಗೌಡ ಹಾಗೂ ಮುಖ್ಯ ಕಾರ್ಯದರ್ಶಿಗಳಾದ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ ಮನವರಿಕೆ ಮಾಡಿ, ಮನವಿ ಸಲ್ಲಿಸಿದ್ದೆ.

ಇದೀಗ ನನೆಗುದಿಗೆ ಬಿದ್ದಿದ್ದ ಕ್ರೀಡಾಂಗಣ ನಿರ್ಮಾಣ ಪ್ರಕ್ರಿಯೆ ಚುರುಕುಗೊಂಡಿದೆ. ಜಮೀನು ಮಂಜೂರಾತಿಯ ಮೊದಲ ಹಂತ ಪೂರ್ಣಗೊಂಡಿದೆ. ಭೂ ಸ್ವಾಧೀನ ಹಾಗೂ ಇನ್ನಿತರ ಕಾರ್ಯಗಳು ತ್ವರಿತಗತಿಯಲ್ಲಿ ಕೈಗೊಳ್ಳಲು ಕ್ರಮ ಕೈಗೊಳ್ಳುತ್ತೇನೆ. ಮೈಸೂರಿಗರ ಕನಸು ಈಡೇರಿಸಬೇಕೆಂಬುದೇ ನನ್ನ ಮುಖ್ಯ ಗುರಿ. ಈ ನಿಟ್ಟಿನಲ್ಲಿ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲು ನಾನು ಬದ್ಧನಾಗಿದ್ದೇನೆ. ಸಾಂಸ್ಕೃತಿಕ ರಾಜಧಾನಿಯಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಗೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕೈ ಜೋಡಿಸಿ ಶ್ರಮಿಸೋಣ ಎಂದು ಸಂಸದ ಯದುವೀರ್ ಕೋರಿದ್ದಾರೆ.

ಪಹಲ್ಗಾಮ್ ಹತ್ಯಾಕಾಂಡ ಖಂಡಿಸಿದ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕ



ಮೈಸೂರು, ಏ.26(ಎಸ್‌ಪಿಎನ್)– ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ಹತ್ಯಾಕಾಂಡವನ್ನು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ಘಟಕದ ಪದಾಧಿಕಾರಿಗಳು ತೀವ್ರವಾಗಿ ಖಂಡಿಸಿ, ಘಟನೆಯಲ್ಲಿ ಮೃತಪಟ್ಟವರಿಗೆ ಮೊಂಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಕೋರಿದರು.

ಈ ವೇಳೆ ಜಿಲ್ಲಾಧ್ಯಕ್ಷ ಮೊಸಿನ್ ಖಾನ್ ಮಾತನಾಡಿ, ಉಗ್ರಗಾಮಿಗಳು ಅಮಾಯಕ ಪ್ರವಾಸಿಗರ ಮೇಲೆ ಗುಂಡಿಕ್ಕಿರುವುದು ಅಮಾನವೀಯವಾದದ್ದು. ಈ ಘಟನೆಯನ್ನು ಪ್ರತಿಯೊಬ್ಬ ನಾಗರಿಕರು ಖಂಡಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ನಾಸೀರ್ ಖಾನ್, ಪ್ರಧಾನ ಕಾರ್ಯದರ್ಶಿ ಕಡಕೊಳ ರಫೀಕ್ ಪಾಷ, ಚಾಮುಂಡೇಶ್ವರಿ ಬ್ಲಾಕ್ ಅಧ್ಯಕ್ಷ ಆರೀಫ್ ಪಾಷ, ಶಫಿಕೋಟಿ, ಅಬುನಜರ್, ಹಿನಕಲ್ ಉದಯ್, ಸಮೀವುಲ್ಲಾ, ಚೇತನ್ ಕಾಂತರಾಜು ಉಪಸ್ಥಿತರಿದ್ದರು.

ಔಷಧಿ ವ್ಯಾಪಾರಿಗಳ ಸಮಸ್ಯೆಗೆ ಪರಿಹಾರ ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ

• ಶಾಸಕ ಕೆ.ಹರೀಶ್‌ಗೌಡ ಭರವಸೆ • ಜೈನ್ ಮೆಡಿಕಲ್ಸ್, ಆನ್‌ಲೈನ್ ಔಷಧಿ ಮಾರಾಟದ ಬಗ್ಗೆಯೂ ಸರ್ಕಾರದ ಗಮನ ಸೆಳೆಯುವ ವಿಶ್ವಾಸ

ಮೈಸೂರು, ಏ.26(ಎಂಕೆ)– ಜೈನ್ ಮೆಡಿಕಲ್ ಸ್ಟೋರ್ ಹಾಗೂ ಆನ್‌ಲೈನ್ ಔಷಧಿ ವ್ಯಾಪಾರದಿಂದಾಗುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಔಷಧಿ ವ್ಯಾಪಾರಿಗಳ ಪರವಾಗಿ ರಾಜ್ಯ ಸರ್ಕಾರ ಕ್ರಮಕೈಗೊಳ್ಳಲಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಭರವಸೆ ನೀಡಿದರು.

ಮೈಸೂರಿನ ಲಕ್ಷ್ಮಿಪುರಂನಲ್ಲಿರುವ ನಿತ್ಯೋತ್ಸವ ಸಭಾಂಗಣದಲ್ಲಿ ಶನಿವಾರ ನಡೆದ ಮೈಸೂರು ಜಿಲ್ಲೆ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್, ಸುವರ್ಣ ಕರ್ನಾಟಕ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಒಂದೂವರೆ ಸಾವಿರ ಲೈಸೆನ್ಸ್ ಪಡೆದ ಔಷಧಿ ವ್ಯಾಪಾರಿಗಳಿದ್ದು, ಜೈನ್ ಮೆಡಿಕಲ್ ಸ್ಟೋರ್‌ಗಳಿಂದ ತೊಂದರೆಯಾಗುತ್ತಿದೆ ಎಂಬ ತಮ್ಮ ಮನವಿ ಕುರಿತು ಸರ್ಕಾರದ ಜೊತೆಗೆ ಮಾತನಾಡುವುದರ ಜೊತೆಗೆ ವೈಯಕ್ತಿಕವಾಗಿಯೂ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು.

ಔಷಧಿ ವ್ಯಾಪಾರಿಗಳಲ್ಲಿ ಇರುವ ಒಗ್ಗಟ್ಟು ನೋಡಿದರೆ ಖುಷಿಯಾಗುತ್ತದೆ. ಇವತ್ತು ನಮ್ಮ ದೇಶದ ಜನಸಂಖ್ಯೆಯ ಶೇ.60 ರಷ್ಟು ಜನರು ಔಷಧಿಗಳನ್ನು ಬಳಸುತ್ತಿದ್ದಾರೆ. ಈ ದೇಶದಲ್ಲಿ ಔಷಧಿಗಳು ಇಲ್ಲದೆ ಬದುಕುವವರ ಸಂಖ್ಯೆ ಬಹಳ ಕಡಿಮೆ. ಸರಿಸುಮಾರು 100 ಜನರಲ್ಲಿ 70–80 ಮಂದಿ ಒಂದಲ್ಲ ಒಂದು ಬಗೆಯ ಔಷಧಿ–ಮಾತ್ರೆಗಳನ್ನು ಬಳಸುತ್ತಾರೆ. ಇದಕ್ಕೆ ನಮ್ಮ ಜೀವನ ಶೈಲಿಯೂ ಕಾರಣವಾಗಿದೆ ಎಂದು ತಿಳಿಸಿದರು.

ಕೊರೊನಾ ಸಂದರ್ಭದಲ್ಲಿ ಇಡೀ ದೇಶವೇ ಬಂದ್ ಆಗಿದ್ದರೂ ಮೆಡಿಕಲ್ ಸ್ಟೋರ್‌ಗಳು ಬಾಗಿಲು ತೆರೆದಿರುತ್ತಿದ್ದವು. ಔಷಧಿ ವ್ಯಾಪಾರಿಗಳ ಸೇವೆ ಶ್ಲಾಘನೀಯ. ಸಂಘಟಿತರಾಗಿರುವ ಔಷಧಿ ವ್ಯಾಪಾರಿಗಳು ತಮ್ಮದೇ ಸಹಕಾರ ಬ್ಯಾಂಕ್ ಸ್ಥಾಪಿಸಿದರೆ, ಕಷ್ಟದಲ್ಲಿರುವವರಿಗೆ ಆರ್ಥಿಕ ನೆರವು ನೀಡಬಹುದು. ಈ ಸಂಬಂಧ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದರು.

ಮೈಸೂರು ಜಿಲ್ಲೆ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಮಂಜುನಾಥ್ ಮಾತನಾಡಿ, ಜಿಲ್ಲೆಯಲ್ಲಿ ಸಾವಿರಾರು ಕುಟುಂಬಗಳು ಔಷಧಿ ವ್ಯಾಪಾರವನ್ನೇ ನಂಬಿಕೊಂಡಿದೆ. ಮೆಡಿಕಲ್ ಸ್ಟೋರ್ ಆರಂಭಿಸಲು ಟ್ರೇಡ್ ಲೈಸೆನ್ಸ್ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ಪಾಲಿಕೆ ಅಧಿಕಾರಿಗಳು ಲೈಸೆನ್ಸ್ ಮಾಡಿಸಿಕೊಳ್ಳುವಂತೆ ಪೀಡಿಸುತ್ತಿದ್ದಾರೆ. ಅಲ್ಲದೆ ಜೈನ್ ಮೆಡಿಕಲ್ ಸ್ಟೋರ್‌ಗಳು ಹಾಗೂ ಆನ್‌ಲೈನ್ ಮೂಲಕ ಔಷಧಿಗಳ ವ್ಯಾಪಾರದಿಂದ ಮೆಡಿಕಲ್ ಸ್ಟೋರ್ ಮಾಲೀಕರಿಗೆ ತೀವ್ರ ತೊಂದರೆಯಾಗುತ್ತಿದ್ದು, ಸರ್ಕಾರ ಔಷಧಿ ವ್ಯಾಪಾರಿಗಳ ಕಡೆಗೂ ಗಮನಹರಿಸಬೇಕು ಎಂದು ಮನವಿ ಮಾಡಿದರು.



ಮೈಸೂರು ಜಿಲ್ಲೆ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಸಮಾವೇಶವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ನಂತರ ಲೆಕ್ಕ ಪರಿಶೋಧಕ ವಿಶ್ವಾಸ್ ಕೀರ್ತಿ ಕುಮಾರ್, ಜಿಎಸ್‌ಟಿ ಕುರಿತು ವಿಶೇಷ ಉಪನ್ಯಾಸ ನೀಡಿದರು. ಸಹಾಯಕ ಔಷಧಿ ನಿಯಂತ್ರಕರಾದ ಆಶಾಲತಾ, ಹರೀಶ್, ಔಷಧಿ ಪರಿವೀಕ್ಷಕ ರಮೇಶ್ ನಿಡವಾಣಿ, ಸುವರ್ಣ ಕರ್ನಾಟಕ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಹೆಚ್.ಮಂಜುನಾಥ್, ಖಜಾಂಚಿ ಶಿವಾನಂದ್, ಅಶ್ವತ್ಥಪ್ಪ, ಎನ್.ಜಿ.ಕುಲಕರ್ಣಿ, ಅಶೋಕ್ ಸ್ವಾಮಿ ಹೆರೂರ್, ಡಾ.ಮಂಜುನಾಥ್, ನಂದೀಶ್ ಮಂಡ್ಯ, ರಾಜಶೇಖರ್, ಶಿವಶಂಕರ್ ಕೊಳ್ಳೇಗಾಲ, ವೆಂಕಟೇಶ್ ಬಾಬು, ಅತೀಕ್ ರಾಮನಗರ, ಹರ್ಷವರ್ಧನ ಹಾಸನ, ಶಾಂತರಾಮ್ ಗುಂಡ್ಲುಪೇಟೆ, ಸತ್ಯನಾಥ, ಶಿವಣ್ಣ ಹೆಚ್.ಡಿ. ಕೋಟೆ, ನಾಗೇಶ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಗುಂಪು ವಸತಿ ಯೋಜನೆಗೆ ಎಳ್ಳು–ನೀರು ಬಿಟ್ಟ ಮುಡಾ

● ನಿವೇಶನ ಕೋರಿ 80,000 ಮಂದಿ ಅರ್ಜಿ ಸಲ್ಲಿಸಿ 30 ವರ್ಷದಿಂದ ಕಾಯುತ್ತಿದ್ದಾರೆ ● ಗುಂಪು ಮನೆ ಬೇಡಿಕೆ ಸಮೀಕ್ಷೆಯಲ್ಲಿ 26,000 ಮಂದಿ ಆಸಕ್ತಿ ತೋರಿದ್ದಾರೆ ● ಕೈಗೆಟಕುವ ದರದ ಮನೆಗೆ ಡಿಪಿಆರ್ ತಯಾರಿಸಿದ್ದ ಮುಡಾ

ಎಸ್.ಟಿ. ರವಿಕುಮಾರ್

ಮೈಸೂರು, ಏ. 26– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ ಸಾಂಸ್ಕೃತಿಕ ನಗರಿ ಮೈಸೂರು ಸುತ್ತಮುತ್ತ ನಿವೇಶನ ಅಥವಾ ಮನೆ ಪಡೆದು ವಾಸ ಮಾಡುತ್ತೇವೆಂದು ಮಹದಾಸೆಯಿಂದ ಕಾಯುತ್ತಿರುವ ನಾಗರಿಕರಿಗೆ ನಿರಾಸೆಯಾಗಿದೆ.

ರೈತರಿಂದ ಭೂಮಿ ಸ್ವಾಧೀನಪಡಿಸಿಕೊಂಡು ರಸ್ತೆ, ನೀರು, ವಿದ್ಯುತ್, ಒಳಚರಂಡಿ ಸಂಪರ್ಕ, ಉದ್ಯಾನವನ, ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ), ಸ್ಮಶಾನ ಸೇರಿದಂತೆ ಎಲ್ಲಾ ಅಗತ್ಯ ಮೂಲಭೂತ ಸೌಲಭ್ಯಗಳೊಂದಿಗೆ ಯೋಜನಾಬದ್ಧವಾಗಿ ವಸತಿ ಬಡಾವಣೆ ಅಭಿವೃದ್ಧಿಪಡಿಸಿ ಅಲ್ಲಿ ಲಭ್ಯವಾಗುವ ನಿವೇಶನ (ಸಿಎ, ಮೂಲೆ ನಿವೇಶನ ಹೊರತುಪಡಿಸಿ)ಗಳನ್ನು ಹಲವು ವರ್ಷಗಳಿಂದ ಅರ್ಜಿ ಸಲ್ಲಿಸಿ, ಕನಸಿನ ಸೂರು ನಿರ್ಮಿಸಿಕೊಳ್ಳಲು ಕಾಯುತ್ತಿರುವ ಅರ್ಹ ಫಲಾನುಭವಿಗಳಿಗೆ ಜೇಷ್ಠತೆ (ಪ್ರಯತ್ನಗಳ ಸಂಖ್ಯೆ ಪರಿಗಣಿಸಿ) ಆಧರಿಸಿ ನಿಯಮಾನುಸಾರ ಹಂಚಿಕೆ ಮಾಡುವುದು ಜೊತೆ ಜೊತೆಗೆ ನಗರವನ್ನು ಅಭಿವೃದ್ಧಿಪಡಿಸುವುದು ನಗರಾಭಿವೃದ್ಧಿ ಪ್ರಾಧಿಕಾರಗಳ ಮುಖ್ಯ ಉದ್ದೇಶ.

ಮುಖ್ಯ ಧ್ಯೇಯ ಮರೆತ ಮುಡಾ: ಅರ್ಜಿದಾರರ ಮಾಹಿತಿ ಪಡೆದು ಅರ್ಹರು ಎಂಬುದನ್ನು ಖಚಿತಪಡಿಸಿಕೊಂಡು ಅಂತಹವರಿಗೆ ನಿವೇಶನ ಮಂಜೂರು ಮಾಡುವ ಮೂಲ ಉದ್ದೇಶವನ್ನೇ ಮುಡಾ ಮರೆತಿದೆ.

ಭೂ ಸ್ವಾಧೀನ ಪ್ರಕ್ರಿಯೆ ಕಷ್ಟ: ಈ ಹಿಂದೆ ವಸತಿ ಬಡಾವಣೆಗೆ ಭೂಮಿ ಸ್ವಾಧೀನ ಪ್ರಕ್ರಿಯೆ ಸುಲಭವಾಗಿತ್ತು. ಭೂಮಿ ಬೆಲೆಯೂ ಕಡಿಮೆ ಇತ್ತು. ಭೂಸ್ವಾಧೀನ ಕಾಯ್ದೆಗೆ 2013ರಲ್ಲಿ ತಿದ್ದುಪಡಿ ಮಾಡಿದ ನಂತರ ಭೂಸ್ವಾಧೀನ ಪ್ರಕ್ರಿಯೆ ಕಷ್ಟವಾಗಿದೆ. ಪ್ರಸ್ತುತ ಕಾಯ್ದೆಯನ್ವಯ ಭೂ ಮಾಲೀಕರಿಗೆ ನೀಡಬೇಕಾದ ಪರಿಹಾರ ಮೊತ್ತ ಹಾಗೂ ಬಡಾವಣೆ ನಿರ್ಮಾಣಕ್ಕೆ ತಗಲುವ ವೆಚ್ಚ ಭರಿಸಿ ವಸತಿ ಬಡಾವಣೆ ನಿರ್ಮಿಸಿದಲ್ಲಿ ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ನಿವೇಶನ ಕಲ್ಪಿಸಲು ಸಾಧ್ಯವಿಲ್ಲ ಎಂದು ಮುಡಾ ಅಧಿಕಾರಿಗಳು ಅಸಹಾಯಕರಾಗಿ ಕೈಚೆಲ್ಲಿ ಕುಳಿತಿದ್ದಾರೆ.

ಗುಂಪು ಮನೆ ಯೋಜನೆ: ಭೂಮಿ ಬೆಲೆ ಗಗನಕ್ಕೇರಿರುವುದರಿಂದ ಮೈಸೂರು ಸುತ್ತಮುತ್ತ ಒಂದಿಂಚೂ ಜಾಗ ಖರೀದಿಸಲಾಗದ ಮುಡಾ, ಕಡೆಗೆ ಪ್ರಾಧಿಕಾರವು ನಿರ್ಮಿಸಿರುವ ಬಡಾವಣೆಗಳಲ್ಲಿ ಕಾಯ್ದಿರಿಸಿರುವ 5, 10, 12 ಎಕರೆಗಳಷ್ಟು



ಭೂಮಿಯಲ್ಲೇ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ ಪ್ರತೀ ಕಟ್ಟಡದಲ್ಲಿ 1, 2 ಮತ್ತು ಕೊಠಡಿಗಳ 300 ರಿಂದ 400 ಗುಂಪು ಮನೆಗಳನ್ನು ವಸತಿ ರಹಿತರಿಗೆ ಲಾಭ–ನಷ್ಟವಿಲ್ಲದೇ ಕೈಗೆಟಕುವ ದರದಲ್ಲಿ ಹಂಚಿಕೆ ಮಾಡಲು ನಿರ್ಧರಿಸಿತ್ತು.

ಅನುಮೋದನೆಗೊಂಡಿದ್ದ ಡಿಪಿಆರ್: ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಲು ರೂಪಿಸಿದ್ದ ಯೋಜನೆಗೆ ಕೋಟಿಗಟ್ಟಲೆ ಸಾರ್ವಜನಿಕರ ತೆರಿಗೆ ಹಣ ಖರ್ಚು ಮಾಡಿ ತಯಾರಿಸಿದ ಸಮಗ್ರ ಯೋಜನಾ ವರದಿ (ಡಿಪಿಆರ್)ಗೆ ಮುಡಾ ಸಾಮಾನ್ಯ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಅಂಗೀಕರಿಸಿ ಸರ್ಕಾರವೂ ಆಡಳಿತಾತ್ಮಕ ಅನುಮೋದನೆ ನೀಡಿತ್ತು.

ಬೇಡಿಕೆ ಸಮೀಕ್ಷೆಯಲ್ಲಿ 26,000 ಅರ್ಜಿ: ವರ್ಟಿಕಲ್ ಮಾದರಿ ನಿರ್ಮಿಸಲುದ್ದೇಶಿಸಿದ್ದ ಬಹುಮಹಡಿ ಕಟ್ಟಡದ ಗುಂಪು ವಸತಿ ಮನೆಗಳಿಗಾಗಿ ಪ್ರಾಧಿಕಾರ ಬೇಡಿಕೆ ಸಮೀಕ್ಷೆ ನಡೆಸಿದಾಗ ಮನೆ ಕೋರಿ 26,000 ಮಂದಿ ಅರ್ಜಿ ಸಲ್ಲಿಸಿದ್ದರು.

ವಿಜಯನಗರ 4ನೇ ಹಂತದಲ್ಲಿ 560 ಮನೆ: ಜನರಿಂದ ಉತ್ತಮ ಪ್ರತಿಕ್ರಿಯೆ ಬಂದ ಹಿನ್ನೆಲೆಯಲ್ಲಿ ಮೈಸೂರಿನ ವಿಜಯನಗರ 4ನೇ ಹಂತ, 2ನೇ ಘಟ್ಟ ಬಡಾವಣೆಯಲ್ಲಿ 12 ಮಹಡಿಗಳ ಕಟ್ಟಡವನ್ನು ಶಿಯರವಾಲ್ ಟೆಕ್ನಾಲಜಿ ಅಳವಡಿಸಿಕೊಂಡು 250 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಿ 560 ಮನೆ ಹಂಚಿಕೆ ಮಾಡಲು ನಿರ್ಧರಿಸಲಾಗಿತ್ತು. ಈ ಯೋಜನೆಗಾಗಿ ಕಳೆದ ವರ್ಷ (2024–25)ದ ಆಯ–ವ್ಯಯದಲ್ಲಿ 4,000 ಲಕ್ಷ ರೂ. ಅನುದಾನವನ್ನೂ ಪ್ರಾಧಿಕಾರ ಮೀಸಲಿರಿತ್ತು.

30 ವರ್ಷಗಳಿಂದ 80,000 ಅರ್ಜಿ ಬಾಕಿ: ಮನೆಗಳಿಗಾಗಿ 26,000 ಮಂದಿ ಅರ್ಜಿ ಸಲ್ಲಿಸಿದ್ದರೆ, ಮುಡಾ ನಿವೇಶನ ಕೋರಿ 80,000 ಮಂದಿ ಅರ್ಜಿ ಸಲ್ಲಿಸಿ ಕಳೆದ 30 ವರ್ಷಗಳಿಂದ ಕಾಯುತ್ತಿದ್ದು, ಆ ಪೈಕಿ ಮೈಸೂರಲ್ಲಿ ಸ್ವಂತ ಸೂರು ಕಟ್ಟಿಕೊಳ್ಳಬೇಕೆಂಬ ಕನಸು ಕಂಡ ಹಲವರು ಇಹಲೋಕವನ್ನೇ ತ್ಯಜಿಸಿದ್ದಾರೆ.

ಗುಂಪು ಮನೆ ಯೋಜನೆಗೆ ಗ್ರಹಣ: ಪ್ರಸ್ತುತ, ರೈತರಿಂದ ಭೂಮಿ ಖರೀದಿಸುವುದಾಗಲೀ, ಶೇ. 50:50ರ ಅನುಪಾತದಡಿ ಬಡಾವಣೆ ನಿರ್ಮಿಸಿ ಕೈಗೆಟಕುವ ದರದಲ್ಲಿ ಫಲಾನುಭವಿಗಳಿಗೆ ನಿವೇಶನ ಮಂಜೂರು ಮಾಡುವುದು ಕಷ್ಟಸಾಧ್ಯ ಎಂಬುದನ್ನು ಮನಗಂಡ ಮುಡಾ, ತಾನು ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ ಲಭ್ಯವಿರುವ ಭೂಮಿಯಲ್ಲಿ ಬಹುಮಹಡಿಗಳ ಕಟ್ಟಡ ನಿರ್ಮಿಸಿ ಗುಂಪು ಮನೆ ಮಂಜೂರು ಮಾಡುವ ಮಹತ್ವಾಕಾಂಕ್ಷಿ ಯೋಜನೆಗೂ ಈಗ ಎಳ್ಳು–ನೀರು ಬಿಟ್ಟಿದ್ದು, ಪ್ರಸಕ್ತ ಸಾಲಿನ ಆಯ–ವ್ಯಯದಲ್ಲಿ ಅದರ ಬಗ್ಗೆ ಪ್ರಸ್ತಾಪವನ್ನೇ ಮಾಡದೇ ಅಧಿಕಾರಿಗಳು ಯೋಜನೆಯನ್ನೇ ಹಳ್ಳ ಹಿಡಿಸಿದ್ದಾರೆ.

ದಸರಾದಲ್ಲಿ ರಾರಾಜಿಸಿದ್ದ ಸ್ತಬ್ಧಚಿತ್ರ: ಉದ್ದೇಶಿತ ಬಹುಮಹಡಿ ಕಟ್ಟಡಗಳ ಗುಂಪು ಮನೆ ಯೋಜನೆಯನ್ನು ಬಿಂಬಿಸುವ ಸ್ತಬ್ಧಚಿತ್ರವನ್ನು ದಸರಾ ಮಹೋತ್ಸವದ ವಿಜಯದಶಮಿ ಮೆರವಣಿಗೆಯಲ್ಲಿ ಪ್ರದರ್ಶಿಸಿದ್ದ ಮುಡಾ, ಜೆಎಲ್‌ಬಿ ರಸ್ತೆಯಲ್ಲಿರುವ ಕಚೇರಿ ಆವರಣದಲ್ಲಿ ಈಗಲೂ ಅದರ ಮಾದರಿಯನ್ನು ಪ್ರದರ್ಶಿಸುತ್ತಿರುವುದು ಅಚ್ಚರಿ ಎನಿಸಿದೆ.

ಈ ಯೋಜನೆ ರೂಪಿಸುವ ಮೊದಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ಬಹುಮಹಡಿ ಕಟ್ಟಡಗಳಿಗೆ ಭೇಟಿ ನೀಡಿ, ವೀಕ್ಷಿಸಿ ಅಗತ್ಯ ಮಾಹಿತಿ ಪಡೆದು ಅದೇ ಮಾದರಿಯಲ್ಲೇ ಮೈಸೂರಲ್ಲೂ ಯೋಜನೆ ಜಾರಿಗೆ ಅಧಿಕಾರಿಗಳು ಯೋಜಿಸಿದ್ದರು.

ದೇಶದ ಭದ್ರತೆ ದೃಷ್ಟಿಯಿಂದ ಒಗ್ಗಟ್ಟು ಮುಖ್ಯ



ಮೈಸೂರು, ಏ.26– ದೇಶದ ಭದ್ರತೆ ವಿಷಯದಲ್ಲಿ ಯಾವುದೇ ರಾಜಕೀಯ ಮಾಡದೆ ಏಕತೆಗೆ ಸಹಕರಿಸಬೇಕು ಎಂದು ಸಂಸದ ಯದುವೀರ್ ಒಡೆಯರ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಹಲ್ಗಾಮ್ ಘಟನೆ ಯಾವ ರೀತಿಯಲ್ಲಿ ನಡೆದಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಈ ಘಟನೆಯಿಂದ ಭಾರತೀಯರೆಲ್ಲರೂ ಒಗ್ಗಟ್ಟಾಗಿ ದೇಶದ ರಕ್ಷಣೆಗೆ ನಿಲ್ಲಬೇಕಿದೆ ಎಂದರು.

ಪಹಲ್ಗಾಮ್‌ನಲ್ಲಿ ಭದ್ರತಾ ವೈಫಲ್ಯದ ಕುರಿತು ಪರಿಶೀಲನೆ ನಡೆಸಿದ ನಂತರ ತಿಳಿಯಲಿದೆ. ಆದರೆ ದುಷ್ಕೃತ್ಯಕ್ಕೆ ನಾವು ಕಠಿಣವಾದ ಪ್ರತಿಕ್ರಿಯೆ ನೀಡಬೇಕಿದೆ. ಭದ್ರತೆ ಕುರಿತು ಯಾವುದೇ ರಾಜಿ ಇಲ್ಲ. ಕಾಂಗ್ರೆಸ್ ಆಡಳಿತಾವಧಿಯಲ್ಲೂ ಸಾಕಷ್ಟು ಭಯೋತ್ಪಾದಕ ಚಟುವಟಿಕೆಗಳು ನಡೆದಿವೆ. ಇದರಲ್ಲಿ ಯಾವುದೇ ರಾಜಕೀಯ ಮಾಡುವುದು ಬೇಡ. ಭಾರತೀಯರೆಲ್ಲರೂ ದೇಶದ ಏಕತೆಗೆ ಸಹಕರಿಸಬೇಕು. ಪಾಕಿಸ್ತಾನ ಭಯೋತ್ಪಾದಕರನ್ನು ರಕ್ಷಿಸುವ ತಾಣವಾಗಿದೆ. ಪಾಕಿಸ್ತಾನಿ ಪ್ರಜೆಗಳನ್ನು ವಾಪಸ್ ಕಳುಹಿಸುವ ಕೇಂದ್ರದ ನಿರ್ಧಾರ ಸರಿಯಾಗಿದೆ ಎಂದು ಹೇಳಿದರು.

ಚಿಂತಕರ ಸಭೆ

ಮೈಸೂರು, ಏ. 26– ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಅನುಷ್ಠಾನದಲ್ಲಿ ಅಗತ್ಯ ಕ್ರಮ ಕೈಗೊಂಡಿರುವ ಹಿನ್ನೆಲೆಯಲ್ಲಿ ಮೈಸೂರು ಸ್ತ್ರೀಶಕ್ತಿ ಮಹಿಳಾ ವೇದಿಕೆ ವತಿಯಿಂದ ಏ. 28 ರಂದು ಬೆಳಗ್ಗೆ 11 ಗಂಟೆಗೆ ನಟರಾಜ ಛತ್ರದಲ್ಲಿ ಚಿಂತಕರ ಸಭೆ ಕರೆಯಲಾಗಿದೆ. ಮಹಿಳಾ ಚಿಂತಕರು, ಹೋರಾಟಗಾರರು ಭಾಗವಹಿಸಿ ತಮ್ಮ ಸಲಹೆ–ಸೂಚನೆ ನೀಡಬಹುದಾಗಿದೆ.



ರೋಟರಿ ಇನ್ನರ್‌ವೀಲ್‌ನಿಂದ ಶ್ರದ್ಧಾಂಜಲಿ



ಜಮ್ಮು-ಕಾಶ್ಮೀರದ ಪಹಲ್ಗಾಮ್ ಬಳಿ ಉಗ್ರರ ದಾಳಿಗೆ ಮೃತಪಟ್ಟ ಪ್ರವಾಸಿಗರಿಗೆ ರೋಟರಿ ಇನ್ನರ್‌ವೀಲ್ ಕ್ಲಬ್ ವತಿಯಿಂದ ಮೊಂಬತ್ತಿ ಬೆಳಗಿ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅಧ್ಯಕ್ಷೆ ಶಿಲ್ಪ, ಕಾರ್ಯದರ್ಶಿ ಶ್ವೇತಾ, ಖಜಾಂಚಿ ಮಾಧುರಿ, ಶ್ವೇತಾ ಸಂತೋಷ್ ಮತ್ತಿತರರಿದ್ದರು.

ಮೂರನೇ ಪುಟದಿಂದ

ಯುದ್ಧದ ಅನಿವಾರ್ಯತೆ ಇಲ್ಲ

ಕೇಂದ್ರ ಸರ್ಕಾರ ತೆಗೆದುಕೊಳ್ಳುವ ಕ್ರಮಗಳ ಕುರಿತು ಚರ್ಚಿಸಲು ಸರ್ವಪಕ್ಷ ಸಭೆ ಕರೆಯಲಾಗಿತ್ತು. ಆದರೆ ಅಂದಿನ ಸಭೆಗೆ ಪ್ರಧಾನಮಂತ್ರಿ ಮೋದಿ ಗೈರಾಗಿದ್ದರು. ದೇಶದ ಭದ್ರತೆಯ ಮಹತ್ವದ ವಿಚಾರಕ್ಕಿಂತ ಚುನಾವಣಾ ಪ್ರಚಾರವೇ ಮೋದಿಗೆ ಮುಖ್ಯವಾಯಿತೆ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಪರಿಸ್ಥಿತಿ ಗಂಭೀರತೆ ತಿಳಿಯದವರು ಈ ರೀತಿ ಮಾಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪಹಲ್ಗಾಮ್ ಪ್ರಕರಣದ ನಂತರ ಭಾರತ ಮತ್ತು ಪಾಕಿಸ್ತಾನದ ನಡುವಿನ ವೈಮನಸ್ಸು ಯುದ್ಧಕ್ಕೆ ಅಣಿಯಾಗಬಾರದು. ಪಾಕಿಸ್ತಾನದ ಜೊತೆ ಯುದ್ಧದ ಅನಿವಾರ್ಯತೆ ಇಲ್ಲ. ನಾವು ಯಾವತ್ತೂ ಯುದ್ಧದ ಪರ ಇಲ್ಲ. ಯುದ್ಧದ ಬದಲು ಇಡೀ ಜಮ್ಮು -ಕಾಶ್ಮೀರದಲ್ಲಿ ಬಿಗಿ ಭದ್ರತಾ ಕ್ರಮ ಕೈಗೊಳ್ಳಬೇಕು. ಈ ಮೂಲಕ ಪಹಲ್ಗಾಮ್ ನಂತಹ ಘಟನೆ ಮರುಕಳುಹಿಸದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ನಾವು ಶಾಂತಿ ಪ್ರಿಯರಾಗಿದ್ದೇವೆ. ಯುದ್ಧದ ಬಗ್ಗೆ ಚಿಂತೆ ಮಾಡಬಾರದು. ಯುದ್ಧದ ಬದಲು ಬಿಗಿ ಭದ್ರತೆ ವ್ಯವಸ್ಥೆ ಮಾಡಲಿ ಎಂದು ಕೇಂದ್ರ ಸರ್ಕಾರಕ್ಕೆ ಸಿದ್ದರಾಮಯ್ಯ ಹೇಳಿದರು.

ಪೋಪ್ ಫ್ರಾನ್ಸಿಸ್‌ಗೆ ವಿದಾಯ

ವ್ಯಾಟಿಕನ್ ಸಿಟಿಯೊಂದಿಗೆ ಯಾವುದೇ ಸಂಬಂಧ ಇಟ್ಟುಕೊಳ್ಳದ ಕಾರಣ ಚೀನಾ ತನ್ನ ಪ್ರತಿನಿಧಿಯನ್ನು ಕಳುಹಿಸಿರಲಿಲ್ಲ. ಗಾಜಾ ವಿರುದ್ಧ ಯುದ್ಧ ನಡೆಸುತ್ತಿರುವ ಇಸ್ರೇಲ್ ಕುರಿತು ಪೋಪ್ ಫ್ರಾನ್ಸಿಸ್ ಅವರು ತೀವ್ರ ಟೀಕೆ ಮಾಡಿದ್ದರಿಂದ ಇಸ್ರೇಲ್ ತನ್ನ ಅತ್ಯುನ್ನತ ಚರ್ಚ್‌ನ ಪ್ರತಿನಿಧಿಯೊಬ್ಬರನ್ನು ಮಾತ್ರ ಕಳುಹಿಸಿಕೊಟ್ಟಿತ್ತು.

ಸೇತುವೆ ನಿರ್ಮಿಸಿ ಗೋಡೆಯಲ್ಲ: ಜನರ ಮಧ್ಯೆ ಸೇತುವೆ ನಿರ್ಮಿಸದೆ ಗೋಡೆಗಳನ್ನು ಕಟ್ಟುವವನು ಎಲ್ಲೇ ಇದ್ದರೂ ಯಾರೇ ಆಗಿದ್ದರೂ ಆತ ಕ್ರಿಶ್ಚಿಯನ್ ಆಗಲಾರ. ಪೋಪ್ ಅವರು 2016ರಲ್ಲಿ ಆಡಿದ ಮಾತಿದು. ಮೊದಲ ಬಾರಿಗೆ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದಾಗ ಅಮೆರಿಕ-ಮೆಕ್ಸಿಕೊ ಗಡಿಗೆ ಅತ್ಯಂತ ಉದ್ದದ ಗೋಡೆಯನ್ನು ನಿರ್ಮಿಸಿದ್ದರು. ಈ ಬಗ್ಗೆ ಪೋಪ್ ಫ್ರಾನ್ಸಿಸ್ ಅವರು ಟ್ರಂಪ್ ಅವರ ವಿರುದ್ಧ ಕಟು ಟೀಕೆ ವ್ಯಕ್ತಪಡಿಸಿದ್ದರು. ಪೋಪ್ ಅವರ ಅಂತಿಮ ವಿದಾಯದ ಸಮಯದಲ್ಲಿ ಇಟಲಿಯ ಕಾರ್ಡಿನಲ್ ಜೊವಾನ್ನಿ ಬತ್ತೀಸ್ತ ರೆ ಅವರು ಟ್ರಂಪ್ ಅವರ ಸಮ್ಮುಖದಲ್ಲಿಯೇ ಪೋಪ್ ಅವರ ಈ ಹೇಳಿಕೆಯನ್ನು ನೆನಪಿಸಿಕೊಂಡರು. ಟ್ರಂಪ್ ಎರಡನೇ ಬಾರಿಗೆ ಅಧ್ಯಕ್ಷರಾದ ಸಂದರ್ಭದಲ್ಲಿ ಅವರು ಕೈಗೊಂಡ ವಲಸೆ ನೀತಿ ಬಗ್ಗೆ ಜಗತ್ತಿನಾದ್ಯಂತ ಟೀಕೆಗಳು ವ್ಯಕ್ತವಾಗಿವೆ. ವಲಸಿಗರ ಬಗ್ಗೆ ಅನುರಾಗಿಗಳಾಗಿರುವಂತೆ ಪೋಪ್ ಅವರು ಹೇಳುತ್ತಿದ್ದರು. ಈ ಬಗ್ಗೆಯೂ ಕಾರ್ಡಿನಲ್ ರೆ ನೆನಪಿಸಿಕೊಂಡರು.

ಟ್ರಂಪ್-ಝೆಲೆನ್‌ಸ್ಕಿ ಮಾತುಕತೆ: ಒಂದೆಡೆ ಪೋಪ್ ಅವರ ಅಂತಿಮ ವಿದಾಯದ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಮತ್ತೊಂದೆಡೆ ಅಮೆರಿಕ ಅಧ್ಯಕ್ಷ ಟ್ರಂಪ್ ಹಾಗೂ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರು ಸೇಂಟ್ ಬೆಸಿಲಿಕಾದಲ್ಲಿ ಮಾತುಕತೆ ನಡೆಸಿದರು. ಮಾತುಕತೆಯು ಫಲಪ್ರದವಾಗಿತ್ತು ಎಂದು ಶ್ವೇತಭವನ ಹೇಳಿದೆ. ಮಾತುಕತೆಯು ಅಲ್ಪ ಕಾಲದ್ದಾಗಿತ್ತು ಎಂದು ಝೆಲೆನ್‌ಸ್ಕಿ ಅವರ ವಕ್ತಾರರು ಹೇಳಿದರು. ಅಂತ್ಯಸಂಸ್ಕಾರದ ಬಳಿಕ ಮತ್ತೊಮ್ಮೆ ಮಾತುಕತೆ ನಡೆಯಬಹುದು ಎಂದು ಟ್ರಂಪ್ ಹೇಳಿದರು.

ಹೈಕೋರ್ಟ್ ನೋಟಿಸ್

ವಂಚಿತರಾದರು ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ. ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರವನ್ನು ಬಲವಂತವಾಗಿ ಯಾವ ಪರೀಕ್ಷಾ ಕೇಂದ್ರಗಳಲ್ಲಿ ತೆಗೆಸಲಾಯಿತು ಎಂಬ ಬಗ್ಗೆ ಮಾಹಿತಿ ನೀಡಿರುವ ಮಹಾಸಭಾ ಧಾರ್ಮಿಕ ವಿಧಿ-ವಿಧಾನಗಳ ಮೂಲಕ ಶ್ರದ್ಧಾ-ಭಕ್ತಿಯಿಂದ ಬ್ರಾಹ್ಮಣರು, ಕ್ಷತ್ರಿಯರು ಮತ್ತು ಶೆಟ್ಟರು ಧರಿಸುವ ಜನಿವಾರವನ್ನು ಬಲವಂತವಾಗಿ ತೆಗೆಸಿರುವುದು ಅವರುಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗಿದೆ ಎಂದು ಅರ್ಜಿದಾರರ ಪರ ವಕೀಲ ಎಸ್.ಶ್ರೀರಂಗ ವಾದ ಮಂಡಿಸಿದರು. ಯಾರು ಪರೀಕ್ಷೆಯಿಂದ ವಂಚಿತರಾಗಿದ್ದಾರೋ ಅಂತಹ ವಿದ್ಯಾರ್ಥಿಗಳಿಗಾಗಿ ಮತ್ತೊಮ್ಮೆ ಸಿಇಟಿ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು. ಪ್ರಾಧಿಕಾರ ನಡೆಸುವ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ತಪಾಸಣೆಗೆ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸುವಂತೆಯೂ ನಿರ್ದೇಶಿಸಬೇಕು. ಜನಿವಾರ ಧರಿಸಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಿರಾಕರಿಸಿದ ಕ್ರಮವನ್ನು ಅಸಂವಿಧಾನಿಕ, ಏಕಪಕ್ಷೀಯ ಮತ್ತು ಅಕ್ರಮ ಎಂದು ಘೋಷಿಸುವಂತೆ ಮನವಿ ಮಾಡಿದ್ದಾರೆ. ಧಾರ್ಮಿಕ ಆಚರಣೆ ಹಕ್ಕಿನಲ್ಲಿ ಮಧ್ಯೆ ಪ್ರವೇಶ ಮಾಡದಂತೆ ಸೂಕ್ತ ಆದೇಶ ಹೊರಡಿಸಬೇಕು ಎಂದು ಮಹಾಸಭಾ ಕೋರಿದೆ.

ಸಿದ್ಧಾಂತವೇ ಇಲ್ಲದ ಸಿದ್ದರಾಮಯ್ಯ

ಎಂಬ ಮನಸ್ಥಿತಿಗೆ ಬಂದಿದ್ದಾರೆ. ಸಿದ್ಧಾಂತವೇ ಇಲ್ಲದ ಸಿದ್ದರಾಮಯ್ಯ ಇಂದು ನಮ್ಮ ಮುಂದೆ ಇದ್ದಾರೆ ಎಂದು ಕಿಡಿಕಾರಿದರು. ಮಲ್ಲಿಕಾರ್ಜುನ ಖರ್ಗೆ ಎಲ್ಲರೂ ಒಟ್ಟಾಗಿ ಹೋರಾಡೋಣ ಎಂದಿದ್ದಾರೆ. ಇಲ್ಲಿ ಸಿದ್ದರಾಮಯ್ಯ ಮನೆ ಮುರಿಯುವ ಮಾತಾಡಿದ್ದಾರೆ. ಯಾವುದೇ ಪಾಕಿಸ್ತಾನಿ ಭಾರತದಲ್ಲಿ ಇರಬಾರದು ಎಂದು ಕೇಂದ್ರ ಸರ್ಕಾರ ಸೂಚನೆ ಕೊಟ್ಟಿದೆ. ಭಟ್ಕಳದಲ್ಲಿ 10ಕ್ಕಿಂತ ಹೆಚ್ಚು ಪಾಕಿಸ್ತಾನದವರು ಇದ್ದಾರೆ. ಆದರೆ ಪಾಕಿಸ್ತಾನದಲ್ಲಿ ಈಗಾಗಲೇ ಭಾರತೀಯರನ್ನು ಹೊರ ಹಾಕಿದ್ದಾರೆ. ಇದರ ಬಗ್ಗೆ ಸಿದ್ದರಾಮಯ್ಯ ಯಾಕೆ ಮಾತನಾಡುತ್ತಿಲ್ಲ. ಕೂಡಲೇ ಭಟ್ಕಳದಲ್ಲಿರುವ ಪಾಕಿಸ್ತಾನದವರನ್ನು ಒದ್ದು ಹೊರ ಹಾಕಬೇಕು. ಮೀರ್ ಸಾದಿಕ್‌ನಂತವರು ನಮ್ಮಲ್ಲೇ ಇದ್ದಾರೆ ಎಂದರು. ಕಾಶ್ಮೀರದಲ್ಲಿ ಇರುವುದು ಐಎನ್‌ಡಿಐ ಮೈತ್ರಿ ಸರ್ಕಾರ, ಯಾವುದೇ ಸೆಕ್ಯುರಿಟಿ ಬಗ್ಗೆ ಅಲ್ಲಿನ ರಾಜ್ಯ ಸರ್ಕಾರ ಕೊಡುವ ಸಲಹೆ ಮೇರೆಗೆ ಆಗುತ್ತದೆ. ದೇಶದ ಪ್ರಶ್ನೆ ಬಂದಾಗ ಎಲ್ಲರೂ ಒಂದೇ ವಾಯ್ಸ್‌ನಲ್ಲಿ ಮಾತಾಡಬೇಕು. ಆದರೆ ಸಿದ್ದರಾಮಯ್ಯ ವೋಟ್ ವಾಯ್ಸ್‌ನಲ್ಲಿ ಮಾತಾಡುತ್ತಾರೆ. ಕಲಬುರ್ಗಿಯ ರಸ್ತೆಯಲ್ಲಿ ಪಾಕಿಸ್ತಾನದ ಧ್ವಜ ಹಾಕಿದ್ದರೆ ಮುಸ್ಲಿಂ ಮಹಿಳೆಯರು ಅದಕ್ಕೆ ಗೌರವ ತೋರಿಸಿದ್ದಾರೆ. ದೇಶದ ಒಳಗೆ ಇರುವ ದೇಶ ದ್ರೋಹಿಗಳನ್ನು ಮಟ್ಟ ಹಾಕಬೇಕು. ಸಿದ್ದರಾಮಯ್ಯ ಹೇಳಿಕೆ ಮೃತಪಟ್ಟವರಿಗೆ ಅವಮಾನವಾಗುವಂತಹದ್ದು, ಕೂಡಲೇ ಜನರ ಮುಂದೆ ಕ್ಷಮೆ ಕೇಳಬೇಕು ಎಂದರು.

ಆರ್ಥಿಕ ಸಂಕಷ್ಟವೂ ಇಲ್ಲ

ಪ್ರತಿಯೊಬ್ಬರು ಸಾಮರಸ್ಯದಿಂದ ಜೀವಿಸಬೇಕು ಎಂದರು.

ನನ್ನ ಅಭಿವೃದ್ಧಿ ಸಾಕಷ್ಟು ಸಾಕ್ಷಿಗಳಿವೆ: ಸಚಿವ ಕೆ.ವೆಂಕಟೇಶ್ ಮಾತನಾಡಿ, ಡಾ.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಅವರು ದೇಶದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ.ಇಂದು ವಿವಿಧ ಅಭಿವೃದ್ಧಿ ಯೋಜನೆಗೆ ಚಾಲನೆ ನೀಡುವ ಐತಿಹಾಸಿಕ ಕಾರ್ಯಕ್ರಮ ಇದಾಗಿದೆ.ಈ ಹಿಂದೆ ಅನೇಕ ಅಭಿವೃದ್ಧಿ ಯೋಜನೆ ನೀಡಿದ್ದೇನೆ. ಆದರೆ ಇಂದು ವಿಶಿಷ್ಟ ಕಾರ್ಯಕ್ರಮಗಳು ಚಾಲನೆಯಾಗುತ್ತಿರುವುದು ಸಂತೋಷವಾಗಿದೆ. ನನ್ನ ಅಧಿಕಾರಾವಧಿಯಲ್ಲಿನ ಅಭಿವೃದ್ಧಿ ಬಗ್ಗೆ ನಿಮ್ಮ ಮುಂದೆ ಸಾಕಷ್ಟು ಸಾಕ್ಷಿಗಳಿವೆ ಎಂದರು. ಕಾಲು ಬಾಯಿ ರೋಗದ ನಿಯಂತ್ರಣಕ್ಕೆ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಗೋವಿಗೆ ಲಸಿಕೆ ಹಾಕಿ ಚಾಲನೆ ನೀಡಿದರು.ಈ ಮೂಲಕ ಜಾನುವಾರುಗಳಿಗೆ ಬರುವ ಇತರೆ ಖಾಯಿಲೆಗಳನ್ನು ತಡೆಗಟ್ಟಬಹುದು ಎಂದರು.

ಪಶುಪಾಲನಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಇಲಾಖೆ, ರೇಷ್ಮೆ ಇಲಾಖೆ, ಸಂಚಾರಿ ಅರೋಗ್ಯ ಘಟಕ ಸೇರಿದಂತೆ ಇತರೆ ಇಲಾಖೆಗಳಿಂದ ದೊರಕುವ ಸವಲತ್ತುಗಳ ಬಗ್ಗೆ ವಸ್ತುಪ್ರದರ್ಶನ ಏರ್ಪಡಿಸಿ, ಜಾಗೃತಿ ಮೂಡಿಸಲಾಗಿತ್ತು. ಸಚಿವರಾದ ಭೈರತಿ ಸುರೇಶ್, ಡಾ.ಎಂ.ಸಿ. ಸುಧಾಕರ್, ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ, ಶಾಸಕ ಡಿ.ರವಿಶಂಕರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ವಿಜಯಕುಮಾರ್, ಪುರಸಭೆ ಅಧ್ಯಕ್ಷ ಪ್ರಕಾಶ್ ಸಿಂಗ್, ಉಪಾಧ್ಯಕ್ಷೆ ಸುವರ್ಣ, ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಮುಖಂಡರಾದ ಲಕ್ಷ್ಮಣ್, ತಹಸೀಲ್ದಾರ್ ನಿಸರ್ಗ ಪ್ರಿಯಾ, ತಾಪಂ ಕಾರ್ಯನಿರ್ವಾಹಣಾಧಿಕಾರಿ ಸುನೀಲ್‌ಕುಮಾರ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಚಂದ್ರಶೇಖರ ಸೇರಿದಂತೆ ಇತರೆ ಇಲಾಖೆ ಅಧಿಕಾರಿಗಳು ಮತ್ತು ಸಾರ್ವಜನಿಕರು ಹಾಜರಿದ್ದರು.

ಸಂಧಾನದ ಮೂಲಕ ಪ್ರಕರಣಕ್ಕೆ ತೆರೆ!

ಹಿರಿಯ ಅಧಿಕಾರಿಗಳಿಗೆ ವಿಷಯ ತಿಳಿಸಿ ಮಡಿಕೇರಿ ಗ್ರಾಮಾಂತರ ಠಾಣೆಗೆ ಕರೆದೊಯ್ದರು ಎಂದು ಹೇಳಲಾಗಿದ್ದು, ಹಿರಿಯ ಅಧಿಕಾರಿಗಳು ಇಬ್ಬರ ನಡುವೆ ರಾಜೀ ಪಂಚಾಯ್ತಿ ನಡೆಸಿ, ಹ್ಯಾರಿಸ್‌ನನ್ನು ಬಿಟ್ಟು ಕಳುಹಿಸಿದ್ದಾರೆ ಎಂಬ ಮಾತುಗಳು ಸಾರ್ವಜನಿಕರಿಂದ ಕೇಳಿಬರುತ್ತಿದೆ. ಕರ್ತವ್ಯನಿರತ ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ನಡೆಸಿರುವ ವ್ಯಕ್ತಿ ವಿರುದ್ಧ ಕರ್ತವ್ಯಕ್ಕೆ ಅಡ್ಡಿ ಆರೋಪದಡಿ ಪ್ರಕರಣ ದಾಖಲಿಸುವುದನ್ನು ಬಿಟ್ಟು, ಹಾಗೇ ಬಿಟ್ಟು ಕಳುಹಿಸಿರುವುದು ಚರ್ಚೆಗೆ ಗ್ರಾಸವಾಗಿದೆ.

ಚಾ.ನಗರ ಆಕ್ಸಿಜನ್ ದುರಂತ: ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಕಡೆಗಣನೆ, ಸಿಎಂ ನಿರ್ಲಕ್ಷ್ಯ

ಹಿಂದೆ ಕಾಂಗ್ರೆಸ್ ನೀಡಿದ್ದ ಪರಿಹಾರ ಹಿಂದಿರುಗಿಸಲು ಸಂತ್ರಸ್ತರ ನಿರ್ಧಾರ

ಚಾಮರಾಜನಗರ ಏ.26- ನಾಲ್ಕು ವರ್ಷಗಳ ಹಿಂದೆ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಸಂಭವಿಸಿದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರು, ರಾಜ್ಯ ಸರ್ಕಾರದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುವ ಜೊತೆಗೆ ಕಾಂಗ್ರೆಸ್ ಪಕ್ಷ ಸಂತ್ರಸ್ತ ಕುಟುಂಬಗಳಿಗೆ ಹಿಂದೆ ನೀಡಿದ್ದ ತಲಾ ಲಕ್ಷ ರೂ. ಪರಿಹಾರವನ್ನು ಹಿಂದಿರುಗಿಸಲು ನಿರ್ಧರಿಸಿದ್ದಾರೆ.



ಚಾಮರಾಜನಗರಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ ಆಕ್ಸಿಜನ್ ದುರಂತದ ಸಂತ್ರಸ್ತರು

ಮಹದೇಶ್ವರ ಬೆಟ್ಟದ ಸಂಪುಟ ಸಭೆಯಲ್ಲಿ ಆಕ್ಸಿಜನ್ ದುರಂತ ಸಂತ್ರಸ್ತರಿಗೆ ಸರ್ಕಾರಿ ನೌಕರಿ ನೀಡುವ ಭರವಸೆ ಬಗ್ಗೆ ಪ್ರಸ್ತಾಪವಾಗದ ಕಾರಣ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಮಹನೀಯರ ಪ್ರತಿಮೆಗಳ ಶಿಲಾನ್ಯಾಸಕ್ಕೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಂತ್ರಸ್ತ ಕುಟುಂಬಗಳ 14 ಮಂದಿ ಭೇಟಿಯಾಗಿ, ಮನವಿ ಸಲ್ಲಿಸಿದರು. ಆದರೆ ಮುಖ್ಯಮಂತ್ರಿಗಳು ಮನವಿ ಸ್ವೀಕರಿಸಿದರಾದರೂ ಒಂದೇ ಒಂದು ಭರವಸೆ ನೀಡದೆ ಮುಂದೆ ಸಾಗಿದರು. ಅವರ ಈ ವರ್ತನೆ ನೋವು ತಂದಿತು. ಕಾಂಗ್ರೆಸ್ ಪಕ್ಷ, ಕೊಟ್ಟ ಮಾತಿನಂತೆ ನಮಗೆ ಉದ್ಯೋಗವನ್ನೂ ಕಲ್ಪಿಸಲಿಲ್ಲ, ಸೂಕ್ತ ಪರಿಹಾರವನ್ನೂ ನೀಡಲಿಲ್ಲ. ಮನವಿ ಸಲ್ಲಿಸಿದ ನಮಗೆ ಕನಿಷ್ಠ ಸಾಂತ್ವನವನ್ನೂ ಹೇಳಲಿಲ್ಲ. ಅರ್ಜಿ ಪಡೆದು ನಮ್ಮನ್ನು ನಿರ್ಲಕ್ಷಿಸಿ, ಮುಂದೆ ಹೋಗಿದ್ದು ಅತ್ಯಂತ ನೋವು ತಂದಿದೆ ಎಂದು ಸಂತ್ರಸ್ತರು 'ಮೈಸೂರು ಮಿತ್ರ'ನೊಂದಿಗೆ ನೊಂದು ನುಡಿದಿದ್ದಾರೆ.

ಭಾರತ್ ಜೋಡೋ ಯಾತ್ರೆ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುಂಡ್ಲುಪೇಟೆಯಲ್ಲಿ ಸಂತ್ರಸ್ತ ಕುಟುಂಬದವರಿಗೆ ಸಾಂತ್ವನ ಹೇಳಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸಂತ್ರಸ್ತ 36 ಕುಟುಂಬಗಳ ತಲಾ ಒಬ್ಬರಿಗೆ ಸರ್ಕಾರಿ ನೌಕರಿ, ಸೂಕ್ತ ಪರಿಹಾರ, ಘಟನೆಗೆ ಕಾರಣರಾದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಅಧಿಕಾರಕ್ಕೆ ಬಂದು ಎರಡು ವರ್ಷಗಳಾದರೂ ಭರವಸೆ ಈಡೇರಿಲ್ಲ. ಸಚಿವ ಸಂಪುಟ ಸಭೆಯಲ್ಲಿ ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸಂತ್ರಸ್ತರಿಗೆ ಸರ್ಕಾರಿ ಉದ್ಯೋಗ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಹೆಚ್.ಸಿ.ಮಹದೇವಪ್ಪ ಹಿಂದಿನ ಪ್ರಗತಿ ಪರಿಶೀಲನಾ ಸಭೆಯಲ್ಲೂ ಭರವಸೆ ನೀಡಿದ್ದರು. ಆದರೆ ಗುರುವಾರ ಬೆಟ್ಟದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆಯೇ ನಡೆದಿಲ್ಲ. 3647 ಕೋಟಿ ರೂ. ಯೋಜನೆಗಳನ್ನು ಪ್ರಕಟಿಸಿದ ಸರ್ಕಾರ, 36 ಮಂದಿ ಸಂತ್ರಸ್ತರ ನೋವಿಗೆ ಸ್ಪಂದಿಸಿಲ್ಲ ಎಂದು ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.

ಒಂದೆಡೆ ಬಿಜೆಪಿ ಸರ್ಕಾರ ಆಕ್ಸಿಜನ್ ಪೂರೈಕೆ ಮಾಡದೇ, ಪರಿಹಾರವನ್ನೂ ನೀಡದೇ ನಮ್ಮ ಕುಟುಂಬದ 36 ಜನರ ಸಾವಿಗೆ ಕಾರಣವಾಯಿತು. ನ್ಯಾಯ ಕೊಡಿಸುವುದಾಗಿ ಭರವಸೆ ನೀಡಿದ್ದ ಕಾಂಗ್ರೆಸ್ ಇದೀಗ ಆಡಳಿತ ನಡೆಸುತ್ತಿದ್ದರೂ ನೆರವಾಗುತ್ತಿಲ್ಲ. ಇನ್ನು ನಮಗೆ ನ್ಯಾಯ ದೊರಕುವ ಭರವಸೆಯೇ ಇಲ್ಲವಾಗಿದೆ. ಆದ್ದರಿಂದ ದುರ್ಘಟನೆ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸಂತ್ರಸ್ತ ಕುಟುಂಬಗಳಿಗೆ ನೀಡಿದ್ದ ತಲಾ 1 ಲಕ್ಷ ರೂ. ಪರಿಹಾರವನ್ನು ಕಾಂಗ್ರೆಸ್ ಪಕ್ಷಕ್ಕೆ ಹಿಂದಿರುಗಿಸಲು ನಿರ್ಧರಿಸಿದ್ದೇವೆ ಎಂದು ಹತಾಶೆಯಿಂದ ತಿಳಿಸಿದ್ದಾರೆ.

ಸಿದ್ದರಾಮಯ್ಯನವರೇ ಕಾರಣರಾಗುತ್ತಾರೆ...

ನಾಲ್ಕು ವರ್ಷಗಳಿಂದ ತಿರುಗಿ ತಿರುಗಿ ಸಾಕಾಗಿದೆ. ನಾವೆಲ್ಲಾ ಸಾಯುವುದಕ್ಕೆ ಸಿದ್ಧರಾಗಿದ್ದೇವೆ. ಬಿಜೆಪಿ ಸರ್ಕಾರ ಆಕ್ಸಿಜನ್ ನೀಡದೆ ನನ್ನ ಗಂಡನನ್ನು ಬಲಿ ಪಡೆದರೆ, ಈ ಕಾಂಗ್ರೆಸ್ ಸರ್ಕಾರ ನನ್ನ ಸಾವಿಗೆ ಕಾರಣವಾಗುತ್ತದೆ. ಮನವಿ ಕೊಡಲು ಹೋದರೆ ಮುಖ್ಯಮಂತ್ರಿಯವರು ಏನಮ್ಮ ಏತಕ್ಕೆ ಬಂದಿದ್ದೀರಾ ಎಂದೂ ಕೇಳಲಿಲ್ಲ. ಮೇ 2ರೊಳಗೆ ನಮಗೆ ನ್ಯಾಯ ಸಿಗದಿದ್ದರೆ ನನ್ನ ಸಾವಿಗೆ ಸಿದ್ದರಾಮಯ್ಯನವರೇ ಕಾರಣ ಎಂದು ಬರೆದಿಟ್ಟು, ಸಾಯುತ್ತೇನೆ.

-ನಾಗರತ್ನ, ಆಕ್ಸಿಜನ್ ದುರಂತ ಸಂತ್ರಸ್ತೆ.

ಕಾಂಗ್ರೆಸ್ ಸುರಿಸಿದ್ದು ಮೊಸಳೆ ಕಣ್ಣೀರು

ಚಾ.ನಗರ: ಆಕ್ಸಿಜನ್ ದುರಂತ ನಡೆದು ಮೇ 4ಕ್ಕೆ ನಾಲ್ಕು ವರ್ಷವಾಗುತ್ತಿದೆ. ಅಷ್ಟರೊಳಗೆ ಸರ್ಕಾರ ನಮ್ಮ ಬೇಡಿಕೆ ಈಡೇರಿಸದಿದ್ದಲ್ಲಿ ಕಾಂಗ್ರೆಸ್ ಪಕ್ಷ ಸಂತ್ರಸ್ತ ಕುಟುಂಬಗಳಿಗೆ ನೀಡಿದ್ದ ಲಕ್ಷ ರೂ. ಹಣವನ್ನು ಗೌರವಯುತವಾಗಿ ಹಿಂದಿರುಗಿಸಿ ನಮ್ಮ ಹೋರಾಟ ವನ್ನು ಮುಕ್ತಾಯಗೊಳಿಸುತ್ತೇವೆ ಎಂದು ನಲ್ಲೂರು ಗ್ರಾಮದ ಸಂತ್ರಸ್ತ ಮಂಜುನಾಥ್ ಹತಾಶೆ ವ್ಯಕ್ತಪಡಿಸಿದ್ದಾರೆ.

ನ್ಯಾಯಕ್ಕಾಗಿ ನಾವು ನಾಲ್ಕು ವರ್ಷದಿಂದಲೂ ಹೋರಾಟ ನಡೆಸಿಕೊಂಡು ಬಂದಿದ್ದೇವೆ. ಸಿದ್ದರಾಮಯ್ಯನವರು ವಿಪಕ್ಷ ನಾಯಕರಾಗಿದ್ದಾಗ ನಮ್ಮ ಹೋರಾಟವನ್ನು ಬೆಂಬಲಿಸಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸರ್ಕಾರಿ ಉದ್ಯೋಗದ ಭರವಸೆಯನ್ನು ಸ್ಪಷ್ಟಪಡಿಸಿದ್ದರು. ಆದರೆ ತಾವೇ ಮುಖ್ಯಮಂತ್ರಿಯಾದರೂ ನಮ್ಮತ್ತ ಗಮನಹರಿಸಿಲ್ಲ. ಅವರೇ ನೀಡಿದ್ದ ಆಶ್ವಾಸನೆ ಈಡೇರಿಸುವತ್ತ ಆಸಕ್ತಿ ತೋರುತ್ತಿಲ್ಲ.

ಮಹದೇಶ್ವರ ಬೆಟ್ಟದ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚಿಸಿ, ಸೂಕ್ತ ನಿರ್ಧಾರ ಪ್ರಕಟಿಸಬಹುದೆಂಬ ಆಶಾಭಾವನೆಯಲ್ಲಿದ್ದೆವು. ಆದರೆ ಅದೂ ಸಂಪೂರ್ಣವಾಗಿ ಹುಸಿಯಾಯಿತು. ನಿನ್ನೆ ನಗರದಲ್ಲಿ ಮುಖ್ಯಮಂತ್ರಿಯವರು ಕೇವಲ ಮನವಿ ಸ್ವೀಕರಿಸಿದ್ದನ್ನು ಬಿಟ್ಟರೆ ನಮ್ಮೊಂದಿಗೆ ಮುಖ ಕೊಟ್ಟು ಮಾತನಾಡಲಿಲ್ಲ. ಭಾರತ್ ಜೋಡೋ ಯಾತ್ರೆ ವೇಳೆ ಗುಂಡ್ಲುಪೇಟೆಗೆ ಬಂದಿದ್ದ ರಾಹುಲ್‌ಗಾಂಧಿ, ಡಿ.ಕೆ.ಶಿವಕುಮಾರ್ ನಮ್ಮ ಸಮಸ್ಯೆ ಕೇಳಿ ಕೇವಲ ಮೊಸಳೆ ಕಣ್ಣೀರು ಹಾಕಿದ್ದರೆಂಬುದು ಈಗ ಅರ್ಥವಾಗುತ್ತಿದೆ. ನಾಲ್ಕು ವರ್ಷದಿಂದ ನಮಗೆ ನ್ಯಾಯಯುತ ಪರಿಹಾರವನ್ನೂ ನೀಡಲಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯೂ ಆಗಲಿಲ್ಲ. ಸರ್ಕಾರಿ ಉದ್ಯೋಗವನ್ನೂ ನೀಡಲಿಲ್ಲ. ನಮಗೂ ಸಾಕಾಗಿ ಹೋಗಿದೆ. ಅದಕ್ಕೆ ಮೇ 4ರ ನಂತರ ನಮ್ಮ ಹೋರಾಟವನ್ನು ನಿಲ್ಲಿಸುವ ನಿರ್ಧಾರ ತೆಗೆದುಕೊಂಡಿದ್ದೇವೆ ಎಂದು ತಿಳಿಸಿದರು.

ಪಾಕ್ ನಾಯಕರ ಪ್ರಲಾಪದ ಹೇಳಿಕೆ

ಮೈಸೂರು, ಏ.26-ಪಹಲ್ಗಾಮ್ ಹತ್ಯಾಕಾಂಡದ ನಂತರ ಭಾರತ ಕೈಗೊಂಡಿರುವ ಬಿಗಿ ನಿಲುವು ಹಾಗೂ ಪ್ರತೀಕಾರದ ನಿರ್ಧಾರದಿಂದ ಕಂಗೆಟ್ಟಿರುವ ಪಾಕಿಸ್ತಾನದ ನಾಯಕರು ಬಾಯಿಗೆ ಬಂದಂತೆ ಹೇಳಿಕೆ ನೀಡಲು ಆರಂಭಿಸಿದ್ದಾರೆ. ಪಾಕ್ ಪ್ರಧಾನಿ ಶೆಹಬಾಜ್ ಷರೀಫ್, ನಾವು ಯಾವುದೇ ದುಸ್ಸಾಹಸಕ್ಕೆ ಸಿದ್ಧವಿರುವುದಾಗಿ ಹೇಳುವ ಮೂಲಕ ಯುದ್ಧ ಅನಿವಾರ್ಯವಾದರೆ ಅದಕ್ಕೂ ಸಜ್ಜಾಗಿರುವ ಸುಳಿವು ನೀಡಿದ್ದಾರೆ.

ಹಾಗೆಯೇ ಪಾಕಿಸ್ತಾನದ ಪ್ರಮುಖ ಪಕ್ಷ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ಅಧ್ಯಕ್ಷ ಬಿಲಾಲ್ ಭುಟ್ಟೋ ಜರ್ದಾರಿ, ಸಿಂಧೂ ನದಿ ನೀರು ನಿಲ್ಲಿಸಿದರೆ, ಅಲ್ಲಿ ರಕ್ತವೇ ಹರಿಯಲಿದೆ ಎಂದು ನಾಲಿಗೆ ಹರಿಬಿಟ್ಟಿದ್ದಾರೆ.

ಸಿಂಧೂ ನಮ್ಮದು. ಅದು ಎಂದೆಂದಿಗೂ ನಮ್ಮದೇ ಆಗಿರುತ್ತದೆ. ನಮ್ಮ ನೀರು ಇಲ್ಲಿ ಸದಾ ಹರಿಯುತ್ತಿದೆ. ಇದಕ್ಕೆ ಯಾರಾದರೂ ತಡೆಯೊಡ್ಡಿದರೆ ಅಲ್ಲಿ ರಕ್ತಪಾತವಾಗುತ್ತದೆ ಎಂದು ಸಿಂಧ್ ಪ್ರಾಂತ್ಯದ ಸುಕ್ಕೂರ್ ಪ್ರದೇಶದಲ್ಲಿ ಸಾರ್ವಜನಿಕ ರ‍್ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಬೆದರಿಕೆ ಹಾಕಿದ್ದಾರೆ.

ಸಿಂಧೂ ನದಿ ಮತ್ತು ಸಿಂಧ್ ಪ್ರಾಂತ್ಯದ ಜನರ ನಡುವಿನ ಶತ-ಶತಮಾನದ ಬಾಂಧವ್ಯವನ್ನು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಎಂದೆಂದಿಗೂ ಮುರಿಯಲು ಸಾಧ್ಯವಿಲ್ಲ. ಭಾರತ ಸರ್ಕಾರ ಪಾಕಿಸ್ತಾನದ ನೀರಿನ ಮೇಲೆ ಕಣ್ಣಾಕಿದೆ. ನಮ್ಮ ನೀರನ್ನು ರಕ್ಷಿಸಿಕೊಳ್ಳಲು ನಾವು ಎಂತಹ ಹೋರಾಟಕ್ಕೂ ಸಿದ್ಧರಾಗಿರಬೇಕು ಎಂದು ತಿಳಿಸಿದ್ದಾರೆ.

ಮತ್ತೊಬ್ಬ ಉಗ್ರನ ಮನೆ ಧ್ವಂಸ

ಶ್ರೀನಗರ: ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಘಟನೆಗೆ ಸಂಬಂಧಿಸಿದಂತೆ ಐಇಡಿ ಸ್ಫೋಟಿಸಿ ಮತ್ತೊಬ್ಬ ಉಗ್ರನ ಮನೆಯನ್ನು ಭಾರತೀಯ ಸೇನೆ ಉಡೀಸ್ ಮಾಡಿದೆ. ಪಹಲ್ಗಾಮ್ ದಾಳಿಯ ನಂತರ ಪುಲ್ವಾಮಾ, ಶೋಪಿಯಾನ್, ಅನಂತನಾಗ್, ಕುಲ್ಗಾಮ್ ಮತ್ತು ಕುಪ್ವಾರಾ ಜಿಲ್ಲೆಗಳಲ್ಲಿ ಸ್ಫೋಟಕಗಳನ್ನು ಬಳಸಿ ಆರು ಭಯೋತ್ಪಾದಕರ ಮನೆಗಳನ್ನು ಕೆಡವಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.04.2025 ಭಾನುವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಶ್ರೀ ಉತ್ತರಾದಿ ಮಠ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ:** ಅಮಾವಾಸ್ಯೆ ಅಂಗವಾಗಿ ಲೋಕಕಲ್ಯಾಣಾರ್ಥವಾಗಿ ಬೆಳಗ್ಗೆ 7.30ಕ್ಕೆ ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ ಅವರಿಂದ ಗಯಾ ಗದಾಧರನಿಗೆ 21 ಎಳನೀರು ಅಭಿಷೇಕ, ಬೆಳಗ್ಗೆ 8.30ಕ್ಕೆ ವಿದ್ವಾನ್ ಶ್ರೀ ವಾದಿರಾಜಚಾರ್ಯ ಬಾಗೇವಾಡಿ ಅವರಿಂದ ನವಗ್ರಹ ಹೋಗಮ, ಸ್ಥಳ: ದೇವಸ್ಥಾನ, ಕೆ.ಆರ್.ಎಸ್. ರಸ್ತೆ, ಯಾದವಗಿರಿ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ

■ **ಶ್ರೀ ಗಾನಯೋಗಿ ಕಲಾ ಟ್ರಸ್ಟ್, ಶ್ರೀ ಅಮರೇಶ್ವರ ಸಂಗೀತ ಮತ್ತು ಸಾಂಸ್ಕೃತಿಕ ಕಲಾ ಸಂಸ್ಥೆ, ಕಂಬಳಿಹಾಳ, ಬಾಗಲಕೋಟೆ, ಮೈಸೂರು ಶಾಖೆ :** ಬೆಳಗ್ಗೆ 9.30ಕ್ಕೆ ಗಾನಯೋಗಿ ಪಂಡಿತ್ ಪಂಚಾಕ್ಷರಿ ಗವಾಯಿಗಳವರ 134ನೇ ಜಯಂತ್ಯೋತ್ಸವ ಹಾಗೂ ಸಂಗೀತೋತ್ಸವ, ಸಾನ್ನಿಧ್ಯ : ಶ್ರೀ ಶರತ್‌ಚಂದ್ರ ಸ್ವಾಮೀಜಿ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್, ನಗರ ಘಟಕ ಅಧ್ಯಕ್ಷ ಮ.ಗು.ಸದಾನಂದಯ್ಯ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಬೆಳಗ್ಗೆ 11.15ರಿಂದ ಸಂಗೀತೋತ್ಸವ, ಸ್ಥಳ: ಗಾನಭಾರತಿ (ವೀಣೆ ಶೇಷಣ್ಣ ಭವನ), ರಮಾಗೋವಿಂದ ಕಲಾ ವೇದಿಕೆ, ಕುವೆಂಪುನಗರ.

■ **ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ, ಕೊಯಮತ್ತೂರು ಕಣ್ಣಿನ ಆಸ್ಪತ್ರೆ :** ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಸರ್ಕಾರಿ ಆಸ್ಪತ್ರೆ, ಅಶೋಕಪುರಂ, ಬೆಳಗ್ಗೆ 9 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು :** 'ವಿದ್ಯುತ್-2025' ಸಾಂಸ್ಕೃತಿಕ ಉತ್ಸವ, ಬೆಳಗ್ಗೆ 10ಕ್ಕೆ ಡಾಗ್ ಶೋ, ಬೆಳಗ್ಗೆ 10.30ಕ್ಕೆ ಫೇಸ್ ಆಫ್, ಬೆಳಗ್ಗೆ 11ಕ್ಕೆ ಈಟಥಾನ್, ಡಬ್ ಚಾರಾಡೆಸ್, ಸೂಪರ್ ಮಿನಿಟ್, ಪಿಕ್ಸನರಿ, ಸಂಜೆ 6ಕ್ಕೆ ಕಲ್ಚರಲ್ ಇವೆಂಟ್ಸ್, ಸ್ಥಳ: ಕಾಲೇಜು ಆವರಣ.

■ **ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಗಳ ಸಂಘ, ನಿವೃತ್ತ ನೌಕರರ ಸಂಘ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಬೆಳಗ್ಗೆ 10.30 ರಿಂದ.

■ **ಮೈಸೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ :** ರಾಜ್ಯ ಮಟ್ಟದ ವಿಟಿಯು ಅಂತರ ಕಾಲೇಜು ಮಹಿಳಾ ವಾಲಿಬಾಲ್ ಪಂದ್ಯಾವಳಿ, ಮುಖ್ಯ ಅತಿಥಿಗಳು : ಅಂತರರಾಷ್ಟ್ರೀಯ ವಾಲಿಬಾಲ್ ಕ್ರೀಡಾಪಟು ಚೇತನ್‌ಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ದಿ ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸ್ಥಳ: ಸಂಘದ ಸಮುದಾಯ ಭವನ, ಗಾಂಧಿನಗರ, ಬೆಳಗ್ಗೆ 10ಕ್ಕೆ.

■ **ವ್ಯವಸ್ಥಾಪಕರು :** ಶ್ರೀ ಶಂಕರಭಗವತ್ಪಾದ ವಿರಚಿತ ಸೌಂದರ್ಯ ಲಹರೀ (ರಸ್ಯ ರಹಸ್ಯಾರ್ಥಗಳು), ಮಂಥನ (ಭಾರತೀಯ ಸಂಸ್ಕೃತಿ ರಸಪ್ರಶ್ನೋತ್ತರಗಳು) ಪುಸ್ತಕಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಮುಲುಕುನಾಡು ಸಭಾ ಅಧ್ಯಕ್ಷ ಕೆ.ಎನ್. ಗುರುಮೂರ್ತಿ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ (ಶ್ರೀ ವಾಸುದೇವಾಚಾರ್ಯ ಭವನ), ಜೆಎಲ್‌ಬಿ ರಸ್ತೆ, ನಂಜುಮಳಿಗೆ, ಬೆಳಗ್ಗೆ 10ಕ್ಕೆ.

■ **ಇಂಚರ ಸಾಂಸ್ಕೃತಿಕ ಪ್ರತಿಷ್ಠಾನ, ಸಾಹಿತ್ಯ ಮತ್ತು ಸಾಂಸ್ಕೃತಿಕ ಸೇವಾ ಸಂಸ್ಥೆ:** ಡಾ.ರಾಜ್ ಜನ್ಮ ದಿನೋತ್ಸವ, ಡಾ.ರಾಜ್ ಕಾವ್ಯ ನಮನ, ಡಾ.ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಡಾ.ಲತಾ ರಾಜಶೇಖರ್, ಅಧ್ಯಕ್ಷತೆ: ಡಾ.ಕೆ.ಲೀಲಾಪ್ರಕಾಶ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪುನಶ್ಚೇತನ (ರೆಜುವಿನೇಷನ್) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಡಾ.ವಿಷ್ಣು ದಾದಾ ರೆಬಲ್‌ಸ್ಟಾರ್ ಅಂಬರೀಶ್ ಕಲಾ ಬಳಗ :** ಡಾ.ವಿಷ್ಣು ನೆನಪಿನಾರ್ಥ ಜೂನಿಯರ್ ಕಲಾವಿದರಿಗೆ ಸನ್ಮಾನ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಡಾ.ಬಿ.ಜೆ.ವಿಜಯಕುಮಾರ್, ಸ್ಥಳ: ಡಾ.ವಿಷ್ಣುವರ್ಧನ್ ಸ್ಮಾರಕ ಭವನ, ಉದ್ಬೂರು, ಬೆಳಗ್ಗೆ 10.30ಕ್ಕೆ.

■ **ದಿ ಅನಾಥಾಲಯ:** ತಾತಯ್ಯ ಸ್ಮಾರಕ ಉಪನ್ಯಾಸ ಮಾಲೆ, ಅಧ್ಯಕ್ಷತೆ: ಅನಾಥಾಲಯ ಅಧ್ಯಕ್ಷ ಸಿ.ವಿ. ಗೋಪಿನಾಥ್, ವಿಜ್ಞಾನಿ ಎಂ.ವಿ.ರೂಪ ಅವರಿಂದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವ್ಯೋಮಯಾನ ವ್ಯವಸ್ಥೆಗಳು ಕುರಿತು ಉಪನ್ಯಾಸ, ಸ್ಥಳ: ಅನ್ನಪೂರ್ಣ ನಿಲಯ, ಅನಾಥಾಲಯ, ಬೆಳಗ್ಗೆ 11ಕ್ಕೆ

■ **ನಾದಹಂಸಿನಿ ಭಜನಾ ಸಂಘ:** ಸಂಘದ 12ನೇ ವಾರ್ಷಿಕೋತ್ಸವ ಸಮಾರಂಭ, ವೀರಾಗಿಣಿ ಅಕ್ಕ ಮಹಾದೇವಿ ಜಯಂತಿ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶರಣಸಾಹಿಯ ಪರಿಷತ್, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಉಪಸ್ಥಿತರು: ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಎಂ.ಪ್ರದೀಪ್‌ಕುಮಾರ್, ಶ್ರೀಮತಿ ಶಾರದಮ್ಮ ಈಶ್ವರ್, ನಾದಹಂಸಿನಿ ಭಜನಾ ಸಂಘದ ಅಧ್ಯಕ್ಷೆ ಶ್ರೀಮತಿ ಉಮಾಮಹದೇವಸ್ವಾಮಿ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ನಾಚನಹಳ್ಳಿ ಪಾಳ್ಯ, ಜೆ.ಪಿ.ನಗರ, ಸಂಜೆ 4ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ-ತಾಲ್ತಜೆ ವಸಂತಕುಮಾರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ-ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ಎಂ. ರಾಘವೇಂದ್ರ, ಡಿ.ಪುರುಷೋತ್ತಮ್, ವ್ಯಾಖ್ಯಾನ-ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, ವಿಷಯ: ಯೋಗ ಮತ್ತು ರೋಗನಿರೋಧಕತೆ, ಭಾಗವಹಿಸುತ್ತಾರೆ-ಡಾ.ಧನ್ವಂತರಿ ಎಸ್. ಒಡೆಯರ್, ನಿರ್ವಹಣೆ-ನಂದನ್‌ಕುಮಾರ್. ಎಲ್.ಒ., 8.35 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಲಭ್ಯವಿರುವ ವಿಶೇಷ ಆರೋಗ್ಯ ಸೌಲಭ್ಯಗಳು ಮತ್ತು ಆರೈಕೆ ಕುರಿತು, ಮೈಸೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಸಹನಿರ್ದೇಶಕರ ಕಛೇರಿಯಲ್ಲಿ ಉಪನಿರ್ದೇಶಕರಾಗಿರುವ ಡಾ.ಮಲ್ಲಿಕಾ. ಬಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ-ಅಮೃತ ವಿದ್ಯಾಲಯಂನ ಪುಟಾಣಿಗಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH-TRISH and Balty boy ನಾವು ಭಾರತೀಯರು-ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ-ಶ್ರೀರಂಗಪಟ್ಟಣ ತಾಲೂಕು ವಿದ್ಯಾಭಾರತಿ ಪಬ್ಲಿಕ್ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕೀ ಬಾತ್-ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮನದ ಮಾತು, 11.30 ಮನ್ ಕೀ ಬಾತ್-ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.05 ವನಿತಾ ವಿಹಾರ-ಮಹಿಳೆಯರಿಗೆ ಹಣಕಾಸಿನ ಅರಿವು, ಪ್ರಸ್ತುತಿ-ಚಂದ್ರ ಮುತಾಲಿಕ್ ಮತ್ತು ತಂಡ, ನಿರ್ವಹಣೆ-ಚಂದು, 12.35 ದೇವರನಾಮ, 12.45 ಜನಪದ ಸಂಗೀತ-ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿ ಕಯ್ಯಂಬಳ್ಳಿ ಗ್ರಾಮದ ಇಂದಿರಮ್ಮ ಮತ್ತು ಸಂಗಡಿಗರಿಂದ ಮಾದೇಶ್ವರನ ಹಾಡು, 1.00 ಪ್ರಗತಿಪಥ-ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ 'ಮಣ್ಣು ಆರೋಗ್ಯ ಕಾರ್ಡ್ ಯೋಜನೆ' ಈ ಕುರಿತು ಮಾಹಿತಿ ನೀಡುತ್ತಾರೆ ಬಿ.ಎಫ್. ಹೂಲ್ಲೂರ್, 1.20 ಭಾವಗೀತೆಗಳು-ಎ.ಜೆ.ದಿವ್ಯ., 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ-ಗೀತಾ, 3.00 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಲ್ಲಾಡಿ ಸಹೋದರರು-ಯುಗಳ ಹಾಡುಗಾರಿಕೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ-ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ:ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ರಮೇಶ್ ಪಿ. ರಂಗಸಮುದ್ರ, ಕೃಷಿಲೋಕ, ಕೃಷಿ ದರ್ಪಣ-ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಮನ್ ಕೀ ಬಾತ್-ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು-ತಾಯೂರು ಚನ್ನನಾಯಕ, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ-ರೇಡಿಯೋ ಸ್ಕೋಪ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಸಾಯಿ ಐಶ್ವರ್ಯ ಮಹಶಬ್ದೆ- ಖಯಾಲ್ ಗಾಯನ

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ:** ಚಾರುಮಂಜೂಷಾ-5, 3ನೇ ವರ್ಷದ ಆಡೋಣ ಬಾ... ಮಕ್ಕಳಿಗಾಗಿ ಬೇಸಿಗೆ ರಂಗ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು: ಹಿರಿಯ ರಂಗಕರ್ಮಿ ಜನ್ನಿ (ಜನಾರ್ಧನ್), ಸ್ಥಳ: ಪ್ರತಿಷ್ಠಾನದ ಆವರಣ, ಎಸ್.ಬಿ.ಎಂ. ಮತ್ತು ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ಸಂಜೆ 5ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಉತ್ತಿಷ್ಠ ಭಾರತ ಪ್ರತಿಷ್ಠಾನ:** ಡಾ.ರಾಜ್‌ಕುಮಾರ್ ನೆನಪಿನೋತ್ಸವ, ಗೀತಗಾಯನ ಕಾರ್ಯಕ್ರಮ, ಉದ್ಘಾಟನೆ : ಯೂನಿವರ್ಸಲ್ ಅಕಾಡೆಮಿ ಸಂಸ್ಥಾಪಕ ಪ್ರಕಾಶ್ ಎಸ್. ಹಳ್ಳಿ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅವರಿಂದ ಡಾ. ರಾಜ್‌ಕುಮಾರ್ ಕುರಿತು ಭಾಷಣ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಹಿರಿಯ ಯೋಗಾಚಾರ್ಯ ಎಸ್.ವಿ.ವೆಂಕಟೇಶಯ್ಯ ಶಿಕ್ಷಣ ತಜ್ಞ ರಘು ಕೌಟಿಲ್ಯ ಅವರಿಂದ ಡಾ.ಕೆ.ಲೀಲಾಪ್ರಕಾಶ್ (ಸಾಹಿತ್ಯ), ದೇವರಾಜ್ (ಯೋಗ), ಎನ್. ಶ್ರೀಧರ್ ದೀಕ್ಷಿತ್ (ಸಮಾಜ ಸೇವೆ), ಎಸ್.ಇ. ಗಿರಿಧರ್ (ವೈದ್ಯಕೀಯ ಸೇವೆ), ಶ್ರೀಮತಿ ನಾಗಮ್ಮ (ಕಾವ್ಯ) ಮತ್ತು ಕೃಷ್ಣಮೂರ್ತಿ (ಆಡಳಿತ) ಅವರಿಗೆ ಡಾ. ರಾಜ್‌ಕುಮಾರ್ ಸದ್ಭಾವನಾ ಪ್ರಶಸ್ತಿ ಪ್ರದಾನ, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ವಿ-ಕೇರ್:** ಪರಿಸರ ಬೆಸುಗೆ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಡಾ.ನಾಗಲಕ್ಷ್ಮಿ ಚೌದರಿ, ಹಿರಿಯ ರಂಗಕರ್ಮಿ ಡಾ.ರಾಮೇಶ್ವರಿ ವರ್ಮ, ಡಾ.ಎಂ.ಕಿಶೋರ್, ಬಿಇಓ ಎಂ.ಪ್ರಕಾಶ್, ವಿ-ಕೇರ್ ಸಂಸ್ಥೆ ಸಂಸ್ಥಾಪಕಿ ಡಾ.ಕುಮುದಿನಿ ಅಚ್ಚಿ, ಸ್ಥಳ: ಸರ್ಕಾರಿ ಹಿ.ಪ್ರಾ. ಶಾಲೆ ಆವರಣ, ಹೂಟಗಳ್ಳಿ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಬಿಎಸ್‌ಎಸ್ ವಿದ್ಯೋದಯ :** ಭಗಿನಿ ಸಂಗೀತೋತ್ಸವ, ವಿದುಷಿ ಸ್ಮೃತಿ ಭಾಸ್ಕರ್ ಮತ್ತು ತಂಡದಿಂದ ಗಾಯನ, ಸ್ಥಳ: ಶಾಲಾ ಸಭಾಂಗಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

■ **ದೇವ್‌ದಾನ್ ಫೌಂಡೇಷನ್ ಕಲಿಕಾ ಕೇಂದ್ರ, ಪಿಎಡಿಹೆಚ್‌ಎ ಟ್ರಸ್ಟ್ :** ವಿಶ್ವ ಆಟಿಸಂ ಜಾಗೃತಿ ದಿನದ ಅಂಗವಾಗಿ 'ಲೆಟ್ಸ್ ಅಕ್ಸೆಪ್ಟ್ ಆಟಿಸಂ - ವಾಕ್ ಆಫ್ ಹೋಪ್ : ಆಟಿಸಂ ಅಕ್ಸೆಪ್ಟನ್ಸ್ ವಾಕಥಾನ್', ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣ, ಬೆಳಗ್ಗೆ 6.30ಕ್ಕೆ

■ **ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ ಮಿಸ್ಟರ್ ಬೋಗೀಸ್ ನಾಟಕ ಪ್ರದರ್ಶನ, ನಿರ್ದೇಶನ : ಹೆಚ್.ಕೆ. ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಮೈಸೂರು ಪಾಲಿಕೆ ವಲಯ ಕಚೇರಿ-3ರ ನೂತನ ಕಟ್ಟಡ ಉದ್ಘಾಟನೆ



ಮೈಸೂರಿನ ಶಾರದಾದೇವಿನಗರದಲ್ಲಿ ನಿರ್ಮಿಸಿರುವ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ-3ರ ನೂತನ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಟೇಪು ಕತ್ತರಿಸುವ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಇತರರನ್ನು ಕಾಣಬಹುದು.

ಮೈಸೂರು,ಏ.26(ಆರ್‌ಕೆ)- ಮೈಸೂರಿನ ಶಾರದಾದೇವಿನಗರದಲ್ಲಿ ನಿರ್ಮಿಸಿರುವ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ-3ರ ನೂತನ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು.

ಟೇಪು ಕತ್ತರಿಸುವ ಮೂಲಕ ಉದ್ಘಾಟಿಸಿದ ಅವರು, ಪ್ರವೇಶ ದ್ವಾರದಲ್ಲಿ ಪವಿತ್ರ ಸಂವಿಧಾನ ಓದುತ್ತಿರುವ ಭಂಗಿಯ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ನೆಲ ಮಹಡಿಯಲ್ಲಿ ಒದಗಿಸಿರುವ ಸೌಲಭ್ಯಗಳು, ಉದ್ಯಾನ, ನೆಲಹಾಸು ವೀಕ್ಷಿಸಿದ ಮುಖ್ಯಮಂತ್ರಿಗಳಿಗೆ ಕಚೇರಿ ವಲಯ ಆಯುಕ್ತ ಬಿ.ಸತ್ಯಮೂರ್ತಿ, ನೆಲಮಹಡಿ, ಮೊದಲ ಮಹಡಿಯಲ್ಲಿ ಸಾರ್ವಜನಿಕರು, ಪಾಲಿಕೆ ಸಿಬ್ಬಂದಿ, ಅಧಿಕಾರಿಗಳು ಕೆಲಸ ಮಾಡಲು ಮಾಡಿರುವ ವ್ಯವಸ್ಥೆಗಳ ವಿವರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಮೇಯರ್‌ಗಳಾದ ಆಯೂಬ್ ಖಾನ್, ಆರಿಫ್ ಹುಸೇನ್, ಬಿ.ಕೆ.ಪ್ರಕಾಶ್, ಮಾಜಿ ಕಾರ್ಪೋರೇಟರ್‌ಗಳಾದ ಹೆಚ್.ಎಸ್. ನಂದೀಶ್ ಪ್ರೀತಂ, ಗೋಪಿ ಸೇರಿದಂತೆ ಹಲವು ಮುಖಂಡರು ಈ ಸಂದರ್ಭ ಉಪಸ್ಥಿತರಿದ್ದರು. ಮೈಸೂರು ಮಹಾನಗರಪಾಲಿಕೆ ಆಡಳಿತಾಧಿಕಾರಿಯಾದ ಮೈಸೂರು ಪ್ರಾದೇಶಿಕ ಆಯುಕ್ತ ರಮೇಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಎಡಿಸಿ ಪಿ.ಶಿವರಾಜ್, ಪಾಲಿಕೆ ಉಪ ಆಯುಕ್ತರಾದ ಸೋಮಶೇಖರ್, ದಾಸೇಗೌಡ, ಕೆ.ಜೆ.ಸಿಂಧೂ, ಬಲಯ ಕಚೇರಿ-3ರ ವಲಯಾಧಿಕಾರಿ ಸತ್ಯಮೂರ್ತಿ, ಕಂದಾಯಾಧಿಕಾರಿ ಬಸವಣ್ಣ ಹಾಗೂ ಇತರರು ಕಟ್ಟಡ ಉದ್ಘಾಟನೆ ವೇಳೆ ಉಪಸ್ಥಿತರಿದ್ದರು.

ಸಂಘ ಪರಿವಾರದ ಮನುವಾದ ಚಿಂತನೆಯಿಂದ ಸಂವಿಧಾನಕ್ಕೆ ಅಪಾಯ

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ



ಮೈಸೂರು ನಗರದ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಶನಿವಾರ ಕೆಪಿಸಿಸಿ ಯುವ ಕಾಂಗ್ರೆಸ್ ಘಟಕ ಆಯೋಜಿಸಿದ್ದ ಯುವ ಕಾಂಗ್ರೆಸ್ ಬುನಿಯಾದಿ ಶಿಬಿರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

- ಅಂಬೇಡ್ಕರ್ ಬಗ್ಗೆ ದಿಢೀರ್ ಪ್ರೀತಿ ಬಂದಿದೆ
- ಇದರ ಒಳಮರ್ಮ ಅರ್ಥ ಮಾಡಿಕೊಳ್ಳಿ
- ಬಿಜೆಪಿಗೆ ಈಗ ಎಲ್ಲಿಲ್ಲದ ದೇಶಭಕ್ತಿ
- ಯೋಗ್ಯತೆ ನೋಡದೆ ಜಾತಿ ನೋಡುತ್ತಾರೆ
- ಸಂವಿಧಾನ ರಕ್ಷಿಸಲು ಕ್ರಾಂತಿ ಮಾಡಬೇಕು

ಮೈಸೂರು, ಏ.26(ಬಿಎಲ್‌ಯು)- ಬಿಜೆಪಿ ಹಾಗೂ ಸಂಘ ಪರಿವಾರದವರ ಮನುವಾದದ ಚಿಂತನೆಯಿಂದ ಸಮಾಜದಲ್ಲಿ ಒಡಕು ಮೂಡುತ್ತಿದ್ದು, ಇದರಿಂದ ನಾವು ಜಾಗರೂಕರಾಗಬೇಕು. ಅಪಾಯದಲ್ಲಿರುವ ಸಂವಿಧಾನವನ್ನು ಸಂರಕ್ಷಿಸಲು ಹೋರಾಟ ಮಾಡಬೇಕು, ಕ್ರಾಂತಿ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ಸಲಹೆ ನೀಡಿದರು.

ನಗರದ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಶನಿವಾರ ಕೆಪಿಸಿಸಿ ಯುವ ಕಾಂಗ್ರೆಸ್ ಘಟಕ ಆಯೋಜಿಸಿದ್ದ ಯುವ ಕಾಂಗ್ರೆಸ್ ಬುನಿಯಾದಿ ಶಿಬಿರದಲ್ಲಿ ಮಾತನಾಡಿದ ಅವರು, ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಸಂಘ ಪರಿವಾರದವರ ಯಾವುದೇ ಪಾತ್ರ ಇಲ್ಲದಿದ್ದರೂ ಈಗ ದೇಶಭಕ್ತಿ ಬಗ್ಗೆ ಪ್ರೀತಿಯ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಇತ್ತೀಚೆಗೆ ಸಂಘ ಪರಿವಾರದವರಿಗೆ ದೇಶಭಕ್ತಿ ಹಾಗೂ ಅಂಬೇಡ್ಕರ್ ಬಗ್ಗೆ ದಿಢೀರ್ ಪ್ರೀತಿ ಬಂದಿದೆ. ಇದರ ಒಳಮರ್ಮವನ್ನು ಅರ್ಥಮಾಡಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಮಹಾತ್ಮ ಗಾಂಧಿ ಅವರು ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದರೆ, ಅಂಬೇಡ್ಕರ್ ಅವರು ಸಂವಿಧಾನಕ್ಕೆ ಭದ್ರ ಬುನಾದಿ ಹಾಕಿದರು, ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರು ಆಧುನಿಕ ಭಾರತ ನಿರ್ಮಾಣಕ್ಕೆ ಕಾರಣರಾದರು. ಆದರೆ ಈ ಯಾವುದೇ ವಿಚಾರದಲ್ಲಿ ಪಾತ್ರ ವಹಿಸದ ಸಂಘ ಪರಿವಾರದವರು ಕಾಂಗ್ರೆಸ್ ವಿರುದ್ಧ ಜನರಿಗೆ ದಾರಿ ತಪ್ಪಿಸುವಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರು ಮನುವಾದದ ಬಗ್ಗೆ ಮಾತನಾಡುತ್ತಾರೆ. ಜಾತಿಗಳ ನಡುವೆ ಒಡಕು ಮೂಡಿಸಿ ಅದರ ಲಾಭ ಪಡೆಯುತ್ತಾರೆ. ಯೋಗ್ಯತೆ ನೋಡಿ ಪ್ರತಿಭೆ ನಿರ್ಧಾರ ಮಾಡುವ ಬದಲು ಜಾತಿ ನೋಡಿ ಪ್ರತಿಭೆ ನಿರ್ಧರಿಸುತ್ತಾರೆ ಎಂದರು.

ಸಾರ್ವಕರ್ ಹಾಗೂ ಗೋಲ್ವಾಲ್ಕರ್ ಅವರು ಅಂಬೇಡ್ಕರ್ ರಚಿಸಿದ ಸಂವಿಧಾನದ ವಿರುದ್ಧವಾಗಿ ಇದ್ದವರು. ಅಧಿಕಾರ ಬಲಾಢ್ಯರ ಕೈಯ್ಯಲ್ಲಿ ಇರಬಾರದು, ಜನಸಾಮಾನ್ಯರ ಕೈಯ್ಯಲ್ಲಿರಬೇಕೆಂದು ಹೇಳಿದ ಅಂಬೇಡ್ಕರ್ ಅವರ ಅಭಿಪ್ರಾಯವನ್ನು ಟೀಕಿಸುತ್ತಿದ್ದರು.

ಸಾಮಾಜಿಕ, ಆರ್ಥಿಕ, ರಾಜಕೀಯದಲ್ಲಿ ಸಮಾನತೆ ನೀಡಿ ಯಾರ ವಿರುದ್ಧವೂ ದಬ್ಬಾಳಿಕೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಸಂವಿಧಾನ ಹೇಳುತ್ತದೆ. ಆದರೆ ಸ್ವಾತಂತ್ರ್ಯ ಬಂದು 75 ವರ್ಷವಾದರೂ ನಮ್ಮ ಸುತ್ತ ಇರುವ ವಿರೋಧಿ ಶಕ್ತಿಗಳ ಕುತಂತ್ರದಿಂದ ಇದು ಸಾಧ್ಯವಾಗುತ್ತಿಲ್ಲ ಎಂದು ಆಪಾದಿಸಿದರು.

ಮುಂದಾದರೂ ಸಮ ಸಮಾಜ ನಿರ್ಮಾಣ ಮಾಡಿ ಸಂವಿಧಾನದ ಧ್ಯೇಯೋದ್ದೇಶಗಳನ್ನು ಈಡೇರಿಸಬೇಕು. ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿಗಳನ್ನು ಮುಕ್ತ ಮಾಡಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೆ ಧ್ವಂಸ ಮಾಡುತ್ತಾರೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಜನರ ಹಕ್ಕುಗಳಿಗಾಗಿ ರಚನೆಯಾದ ಪಕ್ಷವಾಗಿದ್ದು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹಳಷ್ಟು ಕಾಂಗ್ರೆಸಿಗರು ತ್ಯಾಗ ಬಲಿದಾನ ಮಾಡಿದ್ದಾರೆ. ಈ ಹಿನ್ನೆಲೆ ಕಾಂಗ್ರೆಸ್ ಪಕ್ಷದ ಇತಿಹಾಸವನ್ನು ಯುವ ಕಾಂಗ್ರೆಸಿಗರು ತಿಳಿದುಕೊಳ್ಳಬೇಕು. ಈ ಮೂಲಕ ಕಾಂಗ್ರೆಸ್ ಬಗ್ಗೆ ನಿಮ್ಮಲ್ಲಿ ಸ್ಪಷ್ಟತೆ ಇರಬೇಕು. ಹೀಗಾದಾಗ ಮಾತ್ರ ಭವಿಷ್ಯದ ಉತ್ತಮ ನಾಯಕರಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ನೀನು ಹೀಗೆಯೇ ಬದುಕು ಅಂತ ದೇವರು ಹಣೆಬರಹ ಬರೆಯುವುದಿಲ್ಲ!

ನೀನು ಹೀಗೆಯೇ ಬದುಕು ಎಂದು ಯಾವ ದೇವರು ಯಾರ ಹಣೆಯಲ್ಲೂ ಬರೆಯುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರು ಕರ್ಮ ಸಿದ್ಧಾಂತವನ್ನು ಜನರ ಮನಸ್ಸಿನಲ್ಲಿ ಹಚ್ಚೊತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕೆಲವರು ಕಷ್ಟ ಬಂದಾಗ ನನ್ನ ಹಣೆಬರಹ ಎಂದು ಗೊಣಗುತ್ತಾರೆ. ಮಾಡಬಾರದ ಕೆಲಸ ಮಾಡಿ ದೇವರಿಗೆ ಕೈ ಮುಗಿದು ಪೂಜಿಸಿದರೆ ಏನು ಪ್ರಯೋಜನ ಎಂಬ ವಾಸ್ತವವನ್ನು ಜನರಿಗೆ ತಿಳಿಸಬೇಕು. ಆದರೆ ವೈಚಾರಿಕತೆ ಇಲ್ಲದೆ ಅಪ್ರಸ್ತುತವಾದ ವಿಚಾರಗಳನ್ನು ಜನರ ತಲೆಗೆ ತುಂಬಿದ್ದಾರೆ. ಹಾಗಾಗಿ ಜನರು ಮೌಢ್ಯತೆ ನಂಬಿದ್ದಾರೆ ಎಂದು ಕಿಡಿಕಾರಿದರು.

ಮೌಢ್ಯ, ಕಂದಾಚಾರ ಹಾಗೂ ಕರ್ಮ ಸಿದ್ಧಾಂತವನ್ನು ಕೃತಕವಾಗಿ ಸೃಷ್ಟಿಸಿ ನೀರು ಗೊಬ್ಬರ ಹಾಕಿ ಬೆಳೆಸಿ ಗಟ್ಟಿ ಮಾಡಿದ್ದಾರೆ. ಈ ಮೂಲಕ ಜನರ ಮನಸ್ಸಿನಲ್ಲಿ ಮೌಢ್ಯತೆಯ ಬೀಜ ಬಿತ್ತುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮನುಸ್ಮೃತಿ ಪ್ರೇರಿತ ಜಾತಿ ವ್ಯವಸ್ಥೆ ಸಮಾಜವನ್ನು ಜಾತಿ ಆಧಾರದಲ್ಲಿ ಒಡೆದಿದೆ. ಈ ಇತಿಹಾಸವನ್ನು ಯುವ ಕಾಂಗ್ರೆಸಿಗರು ತಿಳಿದುಕೊಳ್ಳಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಮಾದಿಗ ಸಮುದಾಯದವರು ಸಿಎಂ ಆಗುತ್ತಾರೆಂದು ಒಳ ಮೀಸಲಾತಿಗೆ ತಡೆ

ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಆರೋಪ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಏ.26(ಎಂಟಿವೈ)-ಒಳ ಮೀಸಲಾತಿ ಜಾರಿಯಾದರೆ ಮಾದಿಗ ಸಮುದಾಯದವರೇ ಮುಖ್ಯಮಂತ್ರಿ ಆಗುತ್ತಾರೆ ಎಂಬ ಕಾರಣದಿಂದ ಕೆಲವರು ಒಳ ಮೀಸಲಾತಿ ಜಾರಿಯಾಗದಂತೆ ತಡೆಯುತ್ತಿದ್ದಾರೆ ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮಾದಿಗ ಸಮುದಾಯಕ್ಕೆ ಸೇರಿದ ಜನರೇ ಹೆಚ್ಚಾಗಿದ್ದಾರೆ. ಒಂದು ವೇಳೆ ಒಳ ಮೀಸಲಾತಿ ಜಾರಿಯಾದರೇ ಮಾದಿಗ ಸಮುದಾಯಕ್ಕೆ ಸೇರಿದವರೇ ಮುಖ್ಯಮಂತ್ರಿಯಾಗುವ ಎಲ್ಲಾ ಸಾಧ್ಯತೆಗಳಿವೆ. ಇದರಿಂದಾಗಿ ಕೆಲವರು ಉದ್ದೇಶಪೂರ್ವಕವಾಗಿಯೇ ಒಳ ಮೀಸಲಾತಿ ಜಾರಿಯಾಗದಂತೆ ತಡೆಯೊಡ್ಡುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಡಾ.ಜಿ.ಪರಮೇಶ್ವರ್ ರಾಜ್ಯದ ಮುಖ್ಯಮಂತ್ರಿ ಆಗಲು ಕಾಯ್ದು ಕುಳಿತಿದ್ದಾರೆ. ಹಾಗಾಗಿ ಒಳಮೀಸಲಾತಿ ಜಾರಿಯಾಗುವುದನ್ನು ತಡೆಯುತ್ತಿದ್ದಾರೆ ಎಂದು ಕಿಡಿಕಾರಿದರು.

ಜಸ್ಟೀಸ್ ಸದಾಶಿವ ಆಯೋಗದ ವರದಿ, ಜೆ.ಸಿ.ಮಾದುಸ್ವಾಮಿ ವರದಿ ಮತ್ತು ಕಾಂತರಾಜ್ ಆಯೋಗದ ವರದಿಯಲ್ಲಿ ಮಾದಿಗ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಜನಸಂಖ್ಯೆ ಆಧಾರದ ಮೇಲೆ ಒಳಮೀಸಲಾತಿ ಜಾರಿಗೆ ತರಬೇಕಾದರೆ ಈ ವರದಿ ಆಧರಿಸಿ ಜಾರಿಗೆ ತರಬಹುದೇ ವಿನಾ, ಹೊಸದಾಗಿ ಜಾತಿ ಗಣತಿ ನಡೆಸುವ ಅಗತ್ಯವಿರಲಿಲ್ಲ ಎಂದರು.

ತೆಲಂಗಾಣದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಒಳ ಮೀಸಲಾತಿ ಜಾರಿಗೆ ತರಲಿಲ್ಲ. ಬದಲಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಮತ್ತು ರಾಜಕೀಯ ಅಂಶಗಳನ್ನು ಆಧರಿಸಿ ಒಳ ಮೀಸಲಾತಿ ನೀಡಲಾಗಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ ಉಪಪಂಗಡಗಳ ಜನಸಂಖ್ಯೆ ನಿಖರವಾಗಿ ತಿಳಿದಿಲ್ಲ ಎಂಬ ನೆಪವೊಡ್ಡಲಾಗುತ್ತಿದೆ. ಇದರ ಹಿಂದಿನ ಉದ್ದೇಶ ಒಳ ಮೀಸಲಾತಿಯನ್ನು ತಡೆಯುವುದೇ ಆಗಿದೆ ಎಂದು ತಿಳಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಇಬ್ಬರಿಗೂ ಒಳಮೀಸಲಾತಿಯನ್ನು ನ್ಯಾಯಯುತವಾಗಿ ಹಂಚುವ ಆಸಕ್ತಿ ಇಲ್ಲ. ಒಳ ಮೀಸಲಾತಿಯನ್ನು ಜಾರಿಗೊಳಿಸದೇ ಬಡ್ತಿ ಮೀಸಲಾತಿಯನ್ನು ಜಾರಿಗೊಳಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾದಿಗ ಸಮಾಜದ ವಿರೋಧಿಯಾಗಿದ್ದಾರೆ. ಜಸ್ಟೀಸ್ ನಾಗ್‌ಮೋಹನ್ ದಾಸ್ ಅವರ ನೇತೃತ್ವದಲ್ಲಿ ನಡೆಯಲಿರುವ ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಸಮುದಾಯದ ಪ್ರತಿಯೊಬ್ಬರು ತಮ್ಮ ಉಪಜಾತಿಯನ್ನು ಕಡ್ಡಾಯವಾಗಿ ನೋಂದಾಯಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ, ವಕೀಲರಾದ ಶಿವಕುಮಾರ್ ಎಂ.ಬೆಳ್ಳೂರು, ಎಂ.ಆರ್.ಸುರೇಂದ್ರ ಕುಮಾರ್, ಮಾಳಪ್ಪ ಕುರ್ಕಿ ಇದ್ದರು.

ಪಡುವಾರಹಳ್ಳಿಯಲ್ಲಿ ಸಹಕಾರಿ ವಾಣಿಜ್ಯ ಮಳಿಗೆಗಳ ಉದ್ಘಾಟನೆ




ಪಡುವಾರಹಳ್ಳಿಯಲ್ಲಿ ಸಹಕಾರಿ ವಾಣಿಜ್ಯ ಮಳಿಗೆಗಳನ್ನು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಮೈಸೂರು: ಮೈಸೂರಿನ ಪಡುವಾರಹಳ್ಳಿಯ ಜನಹಿತ ವಿವಿಧೋದ್ದೇಶ ಸಹಕಾರ ಸಂಘ ನೂತನವಾಗಿ ನಿರ್ಮಿಸಿರುವ 6 ವಾಣಿಜ್ಯ ಮಳಿಗೆಗಳು ಹಾಗೂ ಆಡಳಿತ ಮಂಡಳಿ ಕಚೇರಿಯನ್ನು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 1964ರಲ್ಲಿ ಸ್ಥಾಪನೆಯಾದ ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘ, ನ್ಯಾಯಬೆಲೆ ಅಂಗಡಿ ಆರಂಭಿಸಿ, ಜನಪರವಾಗಿ ಕಾರ್ಯನಿರ್ವಹಿಸುತ್ತಾ ಈಗ ಯಶಸ್ವಿಯಾಗಿ ನಡೆಯುತ್ತಾ ಬಂದಿದೆ. ಜೊತೆಗೆ ಡಿಸಿಸಿ ಬ್ಯಾಂಕಿನಲ್ಲಿ 20 ಲಕ್ಷ ಸಾಲ ಪಡೆದು 6 ಮಳಿಗೆ ನಿರ್ಮಿಸಲಾಗಿದೆ. ಆಡಳಿತ ಮಂಡಳಿಯ ನಿರ್ದೇಶಕರು ಸಭೆಯ ಗೌರವ ಭತ್ಯೆ ಕೂಡ ಪಡೆಯದೇ ಸಂಸ್ಥೆಯ ಬೆಳವಣಿಗೆಗೆ ಕೈಜೋಡಿಸಿ ಸಹಕಾರಿ ತತ್ವದ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ. ಸಹಕಾರಿ ಸಂಘಗಳು ಬೆಳೆದರೆ ಸಮುದಾಯ ಬೆಳೆದಂತೆ ಎಂದು ಹೇಳಿದರು.

ಚಾಮರಾಜ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಶಾಸಕರ ಅನುದಾನದಡಿ 10 ಲಕ್ಷ ನೀಡುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಕವೀಶ್‌ಗೌಡ, ರಾಜ್ಯ ವಿವಿಧೋದ್ದೇಶ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷ ಚಂದ್ರಶೇಖರ್, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಎಂ.ಭೈರಪ್ಪ, ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕರಾದ ಎಸ್.ಕೃಷ್ಣಕುಮಾರ್, ಟಿ.ಸೋಮು, ಲೋಕೇಶ್ವರ, ಎನ್.ಚಂದ್ರಶೇಖರ್, ರಾಘವ್ ಗೌಡ, ಕುಮಾರ್, ಸೋಮಣ್ಣ, ಮಹಾಲಕ್ಷ್ಮಿ, ಲಕ್ಷ್ಮಮ್ಮ, ಕೆ.ಸುರೇಶ್, ಪ್ರದೀಪ್ ನಾಯಕ, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಎನ್.ಯೋಗಾನಂದ, ಪಡುವಾರಹಳ್ಳಿ ಎಂ.ರಾಮಕೃಷ್ಣ, ಯಜಮಾನ್ ರಾಮಣ್ಣ, ರಾಮಸ್ವಾಮಿ, ಸ್ವಾಮಣ್ಣ, ರುಚಿ ಸುರೇಶ್, ಸಿದ್ದಪ್ಪ, ಕೇಬಲ್ ಕಿಟ್ಟಿ, ಮೈಕ್ ದೇವರಾಜ್ ಪ್ರಸನ್ನ ಉಪಸ್ಥಿತರಿದ್ದರು.

ಲೋಕೇಶ್, ನಾಗಲೀಲಾಗೆ ಅಭಿನಂದನೆ



ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಕೆ.ಲೋಕೇಶ್, ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀಮತಿ ನಾಗಲೀಲಾ ಅವರನ್ನು ನಿರ್ದೇಶಕರಾದ ಎಂ.ಪಿ.ನಾಗಪ್ರಸಾದ್, ಎನ್.ರಘು, ಹೆಚ್.ಬಿ.ರಾಜು, ಎಂ.ಸಿ.ಚನ್ನೇಗೌಡ, ಎಂ.ದೇವರಾಜ ಕುಮಾರ್, ಕೆ.ಆರ್.ಗುರುಸ್ವಾಮಿ, ಜಿ.ಲೋಹಿತ್, ಸಿ.ಮಾದೇಶ್, ಎನ್.ಮಹದೇವಸ್ವಾಮಿ, ಕೆ.ಮಹದೇವಸ್ವಾಮಿ, ಆರ್.ಆರ್.ಮಹೇಶ್, ಕೆ.ಎಸ್.ಭೋಗನಾಯ್ಕ, ಸೋಮಶೇಖರ, ರಾಮ, ಕೆ.ಜಿ.ಹೇಮಾವತಿ ಅಭಿನಂದಿಸಿದರು. ಈ ವೇಳೆ ರಿಟರ್ನಿಂಗ್ ಆಫೀಸರ್ ಜಿ.ಆರ್.ರಘು ಉಪಸ್ಥಿತರಿದ್ದರು.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ



ಮೈಸೂರಿನ ಗಾಂಧಿಚೌಕದ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ಇತ್ತೀಚೆಗೆ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಿಂದ ಪ್ರಾಣತೆತ್ತ ಭಾರತೀಯ ಪ್ರಜೆಗಳಿಗೆ ಸಂತಾಪ ಸೂಚಿಸಲಾಯಿತು. ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಚಂದ್ರಶೇಖರ್, ಹೆಚ್.ಹರೀಶ್‌ಕುಮಾರ್, ಎನ್.ಯೋಗಾನಂದ್, ಜಿ.ನಿರಂಜನ್, ಆರ್.ಸೋಮಣ್ಣ, ಸಿ.ಎಸ್.ರಾಮಕೃಷ್ಣಯ್ಯ, ಪ್ರಭಾರ ಕಾರ್ಯದರ್ಶಿ ಗಾಯಿತ್ರಿ ಹಾಗೂ ಬ್ಯಾಂಕಿನ ನೌಕರರು ಉಪಸ್ಥಿತರಿದ್ದರು.

ದೇಶದ ಪ್ರತಿಯೊಬ್ಬರಿಗೂ ಸಮಾನ ಅವಕಾಶ, ಸಾಮಾಜಿಕ-ಆರ್ಥಿಕ ಸಮಾನತೆ ಸಿಕ್ಕರೆ ಡಾ.ಅಂಬೇಡ್ಕರ್ ಕನಸು ನನಸು

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಅಭಿಮತ



ಮೈಸೂರಿನ ವಿಜಯನಗರ 3ನೇ ಹಂತದ ಉದ್ಯಾನವನದಲ್ಲಿ ಶನಿವಾರ ಆಯೋಜಿಸಿದ್ದ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.

ಮೈಸೂರು,ಏ.26(ಪಿಎಂ)- ದೇಶದ ಪ್ರತಿಯೊಬ್ಬರಿಗೂ ಸಮಾನ ಅವಕಾಶ, ಸಾಮಾಜಿಕ-ಆರ್ಥಿಕ ಸಮಾನತೆ ದೊರೆತಾಗ ಮಾತ್ರ ಅಂಬೇಡ್ಕರ್ ಕಂಡ ಕನಸು ನನಸಾಗಲು ಸಾಧ್ಯವಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರಿನ ವಿಜಯನಗರ 3ನೇ ಹಂತದ ಉದ್ಯಾನವನದಲ್ಲಿ ಶನಿವಾರ ಆಯೋಜಿಸಿದ್ದ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಸಾಮಾಜಿಕ ಸಮಾನತೆ ದೊರೆಯದಿರುವುದು ಬೇಸರದ ಸಂಗತಿ. ಅಂಬೇಡ್ಕರ್ ಅವರು ಜಗತ್ತಿನ ಮಹಾನ್ ನಾಯಕರು. ವಿಶ್ವಜ್ಞಾನಿಯಾದ ಅವರ ಜಯಂತಿಯನ್ನು ಇಂದು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಆಚರಿಸುತ್ತಿವೆ ಎಂದರು.

ಅಂಬೇಡ್ಕರ್ ಅವರು ಎಂದೂ ಬ್ರಾಹ್ಮಣ ಸಮುದಾಯವನ್ನು ವಿರೋಧಿಸಿಲ್ಲ. ಅಸಮಾನತೆ ಆಚರಣೆಯನ್ನು ಮಾತ್ರ ಅವರು ವಿರೋಧಿಸುತ್ತಿದ್ದರು. ಅಂಬೇಡ್ಕರ್ ಅವರು ಜೀವನದಲ್ಲಿ ಅನುಭವಿಸಿದ ನೋವನ್ನೂ ಬೇರೆ ಯಾರೂ ಅನುಭವಿಸಲು ಸಾಧ್ಯವಿಲ್ಲ. ಅದಾಗ್ಯೂ ಶಾಂತಿ, ಸಹನೆ ಮತ್ತು ತಾಳ್ಮೆಯುತ ಹೋರಾಟ ಮಾಡಿದರು. ಹೋರಾಟದ ಮೂಲಕ ಶಿಕ್ಷಣ, ದೇವಾಲಯಗಳಿಗೆ ಪ್ರವೇಶ ಕೊಡಿಸಿದರು. ಮಹಿಳೆಯರಿಗೆ ಸಮಾನತೆ ಕೊಡಿಸಲು ಮಂತ್ರಿ ಸ್ಥಾನಕ್ಕೂ ರಾಜೀನಾಮೆ ನೀಡಿ ಹೋರಾಟ ಮಾಡಿದ್ದರು. ಎಲ್ಲಾ ಜಾತಿ, ಧರ್ಮದವರಿಗೆ ಸಾಮಾಜಿಕ ನ್ಯಾಯ ಸಿಗುವಂತೆ ಮಾಡಿದರು ಎಂದು ಬಣ್ಣಿಸಿದರು.

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎನ್.ಎಂ. ತಳವಾರ್, ಅಂಬೇಡ್ಕರ್ ಜೀವನ ಕುರಿತು ಮುಖ್ಯಭಾಷಣ ಮಾಡಿದರು. ಅಧ್ಯಕ್ಷತೆ ಮಂಜಪ್ಪ ವಹಿಸಿದ್ದರು. ಮುಖಂಡರಾದ ರವಿಕುಮಾರ್, ಮಂಜುನಾಥ್, ಅಭಿಷೇಕ್, ಪರಶಿವಮೂರ್ತಿ, ಚೈತನ್ಯಕುಮಾರ್, ನಿವೃತ್ತ ಮುಡಾ ಎಸ್‌ಇ ಶಂಕರ್, ಸುವರ್ಣರೆಡ್ಡಿ, ತಂಗಂ, ವಿಜಯಕುಮಾರಿ ಮತ್ತಿತರರಿದ್ದರು.

ಕಾಶ್ಮೀರದ ಪಹಲ್ಗಾಮ್ ಹತ್ಯಾಕಾಂಡಕ್ಕೆ ಖಂಡನೆ

ಮೈಸೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಹಿಂದೂ ಪ್ರವಾಸಿಗರನ್ನು ಗುರಿಯಾಗಿಸಿ ಉಗ್ರರು ನಡೆಸಿದ ಪೈಶಾಚಿಕ ಕೃತ್ಯವನ್ನು ಮಿಷನ್ ಮೋದಿ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್ ಖಂಡಿಸಿದೆ. ಕಳೆದ 10 ವರ್ಷಗಳಲ್ಲಿ 10 ಕೋಟಿಗೂ ಹೆಚ್ಚು ಪ್ರವಾಸಿಗರು ಕಾಶ್ಮೀರಕ್ಕೆ ಭೇಟಿ ನೀಡಿ ಆರ್ಥಿಕತೆ ಬಲವರ್ಧನೆಗೊಂಡಿದೆ. ಇಂತಹ ಕೃತ್ಯದಲ್ಲಿ ಪಾಕಿಸ್ತಾನದ ಪಾತ್ರ ಸ್ಪಷ್ಟವಾಗಿರುವುದರಿಂದ ಕೇಂದ್ರ ಸರ್ಕಾರ ಮತ್ತೊಮ್ಮೆ ಉಗ್ರರು ಇಂತಹ ದುಸ್ಸಾಹಸಕ್ಕೆ ಮುಂದಾಗದಂತೆ ತಕ್ಕ ಪಾಠ ಕಲಿಸಲಿದೆ ಎಂದು ಟ್ರಸ್ಟ್‌ನ ಮೈಸೂರು ಜಿಲ್ಲಾಧ್ಯಕ್ಷ, ಕೊಡಗು ಪ್ರಭಾರಿ ಮೈ.ನಾ.ಲೋಕೇಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಿಧನ



ಸುಂದರಮ್ಮ

ಮೈಸೂರು, ಏ.26-ಮೈಸೂರಿನ ವಿಶ್ವಮಾನವ ಜೋಡಿ ರಸ್ತೆ ನಿವಾಸಿ ಹಾಗೂ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ಅವರ ಪತ್ನಿ ಸುಂದರಮ್ಮ (80) ಶನಿವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರತಿಭಟನೆ ಮುಂದುವರೆಸಿದ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು

ಸಿಎಂ ಮನೆ ಮುತ್ತಿಗೆಗೆ ಪೊಲೀಸರ ತಡೆ, ಪ್ರತಿಭಟನಾಕಾರರ ಆಕ್ರೋಶ



ವಿಕಲಚೇತನರ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಬಳಿ ಎಡಿಸಿ ಪಿ.ಶಿವರಾಜು ಪ್ರತಿಭಟನೆ ಕೈ ಬಿಡುವಂತೆ ಮನವಿ ಮಾಡಿದರು.

ಮೈಸೂರು, ಏ.26(ಜಿಎ)-ವಿಕಲಚೇತನರ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಕನಿಷ್ಠ ವೇತನ ಕಾಯ್ದೆಯಡಿ ಸೇರಿಸಬೇಕು ಎಂದು ಆಗ್ರಹಿಸಿ, ನವ ಕರ್ನಾಟಕ ವಿಕಲಚೇತನರ ಗೌರವಧನ ಕಾರ್ಯಕರ್ತರ ಸಂಘದ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಬಳಿ ನಡೆಸುತ್ತಿರುವ ಪ್ರತಿಭಟನೆ ಶನಿವಾರವೂ ಮುಂದುವರೆಯಿತು.

ಬೇಡಿಕೆಗಳನ್ನು ಈಡೇರಿಸುತ್ತಿಲ್ಲ, ನಾವು ಮುಖ್ಯಮಂತ್ರಿಗಳ ಮೈಸೂರಿನ ಮನೆಗೆ ಪ್ರತಿಭಟನಾ ಮೆರವಣಿಗೆಯಲ್ಲಿ ತೆರಳಿ ಮುತ್ತಿಗೆ ಹಾಕುತ್ತೇವೆ ಎಂದು ರಸ್ತೆಗಿಳಿದರು. ಪೊಲೀಸರು ಬ್ಯಾರಿಕೇಡ್ ಹಾಕಿ ಅವರನ್ನು ತಡೆದರು. ಈ ವೇಳೆ ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಅರ್ಧ ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದರು.

ಮೈಸೂರು ಜಿಲ್ಲಾಧ್ಯಕ್ಷ ದೇವರಾಜು ಮಾತನಾಡಿ, 'ಕಳೆದ 17 ವರ್ಷಗಳಿಂದ ಗೌರವಧನದ ಆಧಾರದಲ್ಲಿ ಗ್ರಾಮಗಳಲ್ಲಿ 34ಕ್ಕೂ ಹೆಚ್ಚು ಸೇವೆಗಳನ್ನು ಒದಗಿಸುತ್ತಿದ್ದೇವೆ. ಆದರೆ ಕೇವಲ 9 ಸಾವಿರ ಗೌರವಧನ ನೀಡುತ್ತಿದ್ದಾರೆ. ಈ ವೇತನದಲ್ಲಿ ಜೀವನ ನಡೆಸುವುದು ಕಷ್ಟ ಎಂದರು. ಈ ಬಗ್ಗೆ ಕಳೆದ 4 ವರ್ಷಗಳಿಂದ ಸಿಎಂಗೆ ಮನವಿ ಮಾಡುತ್ತಿದ್ದು, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಿದ್ದಾಗ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ್ದರೂ, ಏನು ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಇಂದು ಸಿಎಂ ತವರಿನಲ್ಲಿ ಪ್ರತಿಭಟನೆ ಮಾಡಿ ಡಿಸಿಗೆ ಮನವಿ ಸಲ್ಲಿಸಿದ್ದೇವೆ ಎಂದರು.

ಸಂಜೆ ಎಡಿಸಿ ಪಿ.ಶಿವರಾಜು ಪ್ರತಿಭಟನಾ ಸ್ಥಳಕ್ಕೆ ಬಂದು, ಸರ್ಕಾರದ ಪ್ರತಿನಿಧಿಯಾಗಿ ನಾನು ಮತ್ತು ಜಿಲ್ಲಾಧಿಕಾರಿಗಳು ನಿಮ್ಮೊಂದಿಗಿದ್ದೇವೆ, ನಿಮ್ಮ ಬೇಡಿಕೆಗಳನ್ನು ಈಡೇರಿಸುತ್ತೇವೆ. ಪ್ರತಿಭಟನೆ ಕೈ ಬಿಡಿ ಎಂದು ಮನವಿ ಮಾಡಿದರು. ಭರವಸೆ ಈಡೇರಿಸುವ ಬಗ್ಗೆ ಬರವಣಿಗೆಯಲ್ಲಿ ನೀಡಿ ಎಂದರು. ಎಡಿಸಿ ಅದಕ್ಕೆ ಒಪ್ಪದಿದ್ದಾಗ, ಪ್ರತಿಭಟನೆ ಮುಂದುವರೆಸಿದರು. ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಅಂಬಾಜಿ ಪಿ.ಮೇಟಿ ತಾರಾಫಾಲಿ, ದತ್ತಾತ್ರೇಯ ಆರ್.ಕುಡಕಿ, ಫಾರೂಕಿಗೌಡ ಸಿ.ಪಾಟೀಲ್, ಮಹದೇವಯ್ಯ, ಆರ್.ಎಂ.ಸ್ವಾಮಿ, ರಂಗಸ್ವಾಮಿ, ವೀಣಾ, ಮೋಹನ್ ಕುಮಾರ್, ನಾಗರಾಜ್ ಸಾಗರೆ, ಶಂಕರ, ಮಲ್ಲೇಶ್, ಗುರುಮಲಮ್ಮ, ಮಹೇಶ, ಮಹದೇವ್ ಮೂರ್ತಿ ಪಾಲ್ಗೊಂಡಿದ್ದರು.

ಶಿಕ್ಷಣದ ಗುರಿ ರ್‍ಯಾಂಕ್ ಗಳಿಕೆಗೆ ಸೀಮಿತವಾಗಬಾರದು : ಖಾದರ್

ಮಡಿಕೇರಿ,ಏ.26– ಶಿಕ್ಷಣದ ಗುರಿ ಕೇವಲ ಅಂಕಗಳಿಗೆ, ರ್‍ಯಾಂಕ್ ಗಳಿಕೆಗೆ ಸಿಮೀತವಾಗ ಬಾರದು. ಅದರ ಜೊತೆಯಲ್ಲಿ ಆದರ್ಶ ವ್ಯಕ್ತಿಗಳಾಗಿ ಸಮಾಜಕ್ಕೆ ಮತ್ತು ದೇಶಕ್ಕೆ ಅಮೂಲ್ಯ ಸಂಪತ್ತಾಗಿ ಪರಿವರ್ತನೆಯಾಗಬೇಕು. ಈ ರೀತಿಯ ಮಾರ್ಪಾಡು ಮಾಡುವವರು ಮತ್ತು ಹೊಂದುವವರು ನಿಜವಾದ ದೇಶ ಪ್ರೇಮಿಗಳು ಎಂದು ಕರ್ನಾಟಕ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅಭಿಪ್ರಾಯಪಟ್ಟಿದ್ದಾರೆ.

ಉಮ್ಮತ್ ಒನ್ ಕೊಡಗು ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಗರದ ಮಹದೇವಪೇಟೆಯಲ್ಲಿ ಸಮುದಾಯ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಸಮಾಜ ದೇಶಕ್ಕೆ ಅತ್ಯಗತ್ಯ, ಯುವ ಜನತೆ ಶಿಕ್ಷಣದ ಮೂಲಕ ಉತ್ತಮ ವ್ಯಕ್ತಿತ್ವ ರೂಪಿಸಿ ಕೊಂಡು ಪ್ರೀತಿ, ವಿಶ್ವಾಸ ಸಂಪಾದಿಸಬೇಕು ಎಂದು ಯು.ಟಿ.ಖಾದರ್ ತಿಳಿಸಿದರು. ಸಮಾಜ ಕಟ್ಟುವು ದಕ್ಕಾಗಿ ಯುವ ಜನಾಂಗವನ್ನು ಬೆಳೆಸಬೇಕೆ ಹೊರತು ದು:ಖ ಸೃಷ್ಟಿಗಾಗಿ ಅಲ್ಲ. ಯುವಕರಲ್ಲಿ ಸಕಾರಾತ್ಮಕ ಚಿಂತನೆ ಬರುವಂತೆ ನೋಡಿಕೊಳ್ಳ ಬೇಕು, ಆಗ ಮಾತ್ರ ನಾವು ಸಮಾಜಕ್ಕೆ ಉತ್ತಮ ಕೊಡುಗೆ ನೀಡಲು ಸಾಧ್ಯ. ಶಿಕ್ಷಣದ ಮೂಲಕ



ಸಮುದಾಯ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಉದ್ಘಾಟನೆಯಲ್ಲಿ ಭಾಗವಹಿಸಿದ್ದ ಗಣ್ಯರು.

ಒಬ್ಬ ಅಧಿಕಾರಿಯನ್ನು ನೀಡುವುದರ ಜೊತೆಗೆ ಒಬ್ಬ ಉತ್ತಮ ಜನ ಪ್ರತಿನಿಧಿಯನ್ನು ಕೂಡ ನೀಡುವ ಅನಿವಾರ್ಯತೆ ಇದೆಯೆಂದರು.

ಶಾಸಕ ಡಾ.ಮಂತರ್ ಗೌಡ, ಉಮ್ಮತ್ ಒನ್ ಕೊಡಗು ಸಂಸ್ಥೆ ಸಮಾಜಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯ ಪ್ರತಿಯೊಬ್ಬರು ಒಗ್ಗಟ್ಟಿನಿಂದ ಇರಬೇಕು. ಜಾತಿ ಧರ್ಮ, ಭೇದ–ಭಾವವಿಲ್ಲದೆ ಕಾರ್ಯನಿರ್ವಹಿಸು ತ್ತಿರುವ ಸಂಸ್ಥೆಯೊಂದಿಗೆ ತಾವು ಇರುವುದಾಗಿ ಭರವಸೆ ನೀಡಿದರು.

ಮಾಜಿ ಶಾಸಕ ಕೆ.ಎಂ.ಇಬ್ರಾಹಿಂ ಮಾಸ್ಟರ್ ಮಾತನಾಡಿ, ಸುಸಜ್ಜಿತವಾದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಆರಂಭಗೊಂಡಿದ್ದು, ಎಲ್ಲರೂ ಇದರ ಪ್ರಯೋಜನ ಪಡೆದುಕೊಳ್ಳಬೇಕು. ಸಮಾ ಜದ ಸರ್ವರೂ ಪ್ರೋತ್ಸಾಹ ನೀಡಬೇಕು ಎಂದರು.

ದಕ್ಷಿಣ ಕನ್ನಡ ನಿವೃತ್ತ ಜಿಲ್ಲಾಧಿಕಾರಿ ಎ.ಬಿ.ಇಬ್ರಾಹಿಂ ಮಾತನಾಡಿ, ಶಿಕ್ಷಣ ನಮ್ಮನ್ನು ಬಲಿಷ್ಠರನ್ನಾಗಿ ಮಾಡ ಬೇಕು. ಯಾವುದೇ ಆಕರ್ಷಣೆ, ಆಮಿಷಗಳಿಗೆ ಒಳ ಗಾಗದೆ ನಿರ್ದಿಷ್ಟ ಗುರಿಯ ಕಡೆಗೆ ಕೊಂಡೊಯ್ಯ ಬೇಕು ಪ್ರಸ್ತುತ ದಿನಗಳಲ್ಲಿ ಸರಸ್ವತಿ ಆರಾಧನೆಗಿಂತ ಲಕ್ಷ್ಮಿ ಆರಾಧನೆ ಹೆಚ್ಚಾಗಿದ್ದು, ಎಲ್ಲವನ್ನು ಹಣದಲ್ಲಿ ಅಳತೆ ಮಾಡುವ ಬದಲು ಸರಸ್ವತಿಯ ಆರಾಧನೆಯ ಮೂಲಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಇಂದು ಆರಂಭಗೊಂಡಿರುವ ಸಮು ದಾಯ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಮುಂದಿನ ದಿನಗಳಲ್ಲಿ ತಾಲೂಕುಗಳಿಗೂ ವಿಸ್ತರಿಸಲಿ ಎಂದು ಆಶಿಸಿದರು.

ಸಿ.ಎಂ.ಉಸ್ತಾದ್ ಪ್ರಾರ್ಥನೆ ಮಾಡುವ ಮೂಲಕ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಬೀದರ್‌ನ ಶಾಹಿದ್ ಗ್ರೂಫ್ ಆಫ್ ಇನ್ಸ್ಟ್ಯೂಟ್ ಸಿಇಓ ಡಾ.ತೌಸೀಫ್ ಅಹ್ಮದ್, ಪುತ್ತೂರು ಕಮ್ಯೂನಿಟಿ ಸೆಂಟರ್ ಸ್ಥಾಪಕ ಹನೀಫ್ ಪುತ್ತೂರು, ಎಂ.ಎಫ್.ಐ.ಎಫ್‌ನ ಉಪಾಧ್ಯಕ್ಷ ಕೆ.ಎಂ. ಮುಸ್ತಫ, ಮಂಗಳೂರಿನ ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್‌ನ ಪ್ರಮುಖ ಕೆ.ಬಿ.ರಿಯಾಝ್ ಅಹಮ್ಮದ್ ಸೇರಿದಂತೆ ಮತ್ತಿತರ ಗಣ್ಯರು, ಒಮ್ಮತ್ ಒನ್ ಕೊಡಗು ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿಗಳು, ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಮಹಿಳಾ ಹಾಕಿ : ಕಂಬೀರಂಡ ತಂಡ ಚಾಂಪಿಯನ್



ಮಹಿಳಾ ಹಾಕಿ ಪಂದ್ಯಾವಳಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಕಂಬೀರಂಡ ತಂಡ

ಮಡಿಕೇರಿ, ಏ.26– ಕೊಡವ ಕುಟುಂಬ ತಂಡಗಳ ನಡುವಿನ ಹಾಕಿ ಪಂದ್ಯಾವಳಿಯಲ್ಲಿ ಇದೇ ಮೊದಲ ಬಾರಿಗೆ ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಆಯೋಜಿಸಲಾಗಿದ್ದ ಮಹಿಳಾ ಹಾಕಿ ಪಂದ್ಯಾವಳಿಯ ಫೈನಲ್ಸ್‌ನಲ್ಲಿ ಕಂಬೀರಂಡ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಇಲ್ಲಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ಕಂಬೀರಂಡ ಮತ್ತು ಕೇಚೆಟ್ಟಿರ ತಂಡಗಳ ನಡುವೆ ನಡೆದ ರೋಚಕ ಅಂತಿಮ ಪಂದ್ಯಾವಳಿಯಲ್ಲಿ ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ತಲಾ 2 ಗೋಲುಗಳ ಮೂಲಕ ಸಮಬಲ ಸಾಧಿಸಿದವು. ಈ ಹಿನ್ನೆಲೆ ಯಲ್ಲಿ ಅಳವಡಿಸಲಾದ ಟೈ ಬ್ರೇಕರ್‌ನಲ್ಲಿ 2–1 ಗೋಲುಗಳ ಅಂತರದಲ್ಲಿ ಕಂಬೀರಂಡ ತಂಡ ಜಯಭೇರಿ ಬಾರಿಸಿತು.

ಕಂಬೀರಂಡ ಪರ ಪೊನ್ನಮ್ಮ 2 ಗೋಲು ದಾಖಲಿಸಿದರು. ಕೇಚೆಟ್ಟಿರ ಪರ ತೇಜಸ್ವಿ ಹಾಗೂ ಪಾರ್ವತಿ ತಲಾ 1 ಗೋಲು ಬಾರಿಸಿದರು. ಕೇಚೆಟ್ಟಿರ ಪಾರ್ವತಿ ಪ್ಲೇಯರ್ ಆಫ್ ದಿ ಮ್ಯಾಚ್ ಪ್ರಶಸ್ತಿ ಪಡೆದರು. ಏ.21ರಿಂದ ನಡೆದ ಮಹಿಳೆಯರ 5ಎ ಸೈಡ್ ಹಾಕಿ ಪಂದ್ಯಾವಳಿಯಲ್ಲಿ ಒಟ್ಟು 56 ಕೊಡವ ಮಹಿಳಾ ತಂಡಗಳು ಪಾಲ್ಗೊಂಡಿದ್ದವು.

ಮುದ್ದಂಡ ಕಪ್ ಹಾಕಿ ಇಂದು ಹೈ–ವೋಲ್ಟೇಜ್ ಫೈನಲ್

ಮಡಿಕೇರಿ,ಏ.26–ಮುದ್ದಂಡ ಕಪ್ ಹಾಕಿ ನಮ್ಮೆಯ ಫೈನಲ್ ಪಂದ್ಯಾಟ ನಾಳೆ ನಡೆಯಲಿದೆ. ಮಂಡೇಪಂಡ ಮತ್ತು ಚೇಂದಂಡ ತಂಡಗಳು ಸೆಮಿಫೈನಲ್ಸ್ ಪಂದ್ಯಾಟದಲ್ಲಿ ಬಲಿಷ್ಟ ನೆಲ್ಲಮಕ್ಕಡ ಮತ್ತು ಕುಪ್ಪಂಡ ತಂಡಗಳನ್ನು ಪರಾಭವಗೊಳಿಸಿ ಫೈನಲ್ ಹಂತಕ್ಕೆ ಪಾದಾರ್ಪಣೆ ಮಾಡಿದವು. ಚೇಂದಂಡ ಮತ್ತು ಮಂಡೇಪಂಡ ಎರಡೂ ಬಲಿಷ್ಟ ತಂಡಗಳಾಗಿದ್ದು, ಅದರಲ್ಲೂ ಚೇಂದಂಡ ತಂಡ 3 ಬಾರಿ ಚಾಂಪಿಯನ್ ಪಟ್ಟ ಅಲಂಕ ರಿಸಿದೆ. ಹೀಗಾಗಿ ಭಾನುವಾರದ ಪಂದ್ಯಾಟ 'ಹೈ–ವೋಲ್ಟೇಜ್'ನಿಂದ ಕೂಡಿರಲಿದೆ.

ಸಹಸ್ರಾರು ಕ್ರೀಡಾಭಿಮಾನಿಗಳು: 4 ಬಲಿಷ್ಟ ತಂಡ ಗಳ ನಡುವಿನ ಹಾಕಿ ಪಂದ್ಯಾಟವನ್ನು ವೀಕ್ಷಿಸಲು ಜಿಲ್ಲೆಯ ಮೂಲೆ ಮೂಲೆಗಳಿಂದ ಸಹಸ್ರಾರು ಸಂಖ್ಯೆ ಯಲ್ಲಿ ಕ್ರೀಡಾಭಿಮಾನಿಗಳು ಜಮಾಯಿಸಿದ್ದರು. ಮೈದಾನದಲ್ಲಿ ಅಳವಡಿಸಿದ್ದ ವೀಕ್ಷಕ ಗ್ಯಾಲರಿಗಳು ಪ್ರೇಕ್ಷಕರಿಂದಲೇ ತುಂಬಿತ್ತು. ತಮಗೆ ಇಷ್ಟವಾದ ಕುಟುಂಬ ತಂಡವನ್ನು ಬೆಂಬಲಿಸಿ ಘೋಷಣೆ ಮೊಳಗಿಸುವ ಮೂಲಕ ವೀಕ್ಷಕರು ಕ್ರೀಡಾ ಸ್ಫೂರ್ತಿ ತೋರಿದರು. ಜಿಲ್ಲೆಯ ವಿವಿಧ ಕಡೆಗಳಿಂದ ಯುವಕರ ಎರಡು ತಂಡಗಳು ಕೊಡಗಿನ ಸಾಂಪ್ರದಾಯಿಕ ವಾಲಗವನ್ನು ಬ್ಯಾಂಡ್, ಕೊಳಲುಗಳು ಮೂಲಕ ನುಡಿಸುವ ಮೂಲಕ ಪಂದ್ಯಾಟಕ್ಕೆ ಮೆರುಗು ತುಂಬಿದರು. ಮಾಳೇಟಿರ ಶ್ರೀನಿವಾಸ್ ಮತ್ತು ಚೆಪ್ಪುಡಿರ ಕಾರ್ಯಪ್ಪ ಅವರ ವೀಕ್ಷಕ ವಿವರಣೆ ಪ್ರೇಕ್ಷಕರಿಗೆ ಹಾಕಿ ಹಬ್ಬದ ಸವಿ ಉಣಿಸಿತು.



ವಿಜೃಂಭಣೆಯ ಶ್ರೀ ಭದ್ರಕಾಳಿ ದೇವಿ ಉತ್ಸವ

ನಾಪೋಕು: ಇಲ್ಲಿಗೆ ಸಮೀಪದ ಬಲ್ಲಮಾವಟಿ ಗ್ರಾಮದ ರಾಟೆ ಭಗವತಿ ಶ್ರೀ ಭದ್ರಕಾಳಿ ದೇವಿಯ ವಾರ್ಷಿಕ ಉತ್ಸವವು ಶ್ರದ್ಧಾ–ಭಕ್ತಿಯಿಂದ ವಿಜೃಂಭಣೆಯಿಂದ ಜರುಗಿತು.

ದೇವಿಯನ್ನು ರಾಟೆಯ ಉಯ್ಯಾಲೆಯಲ್ಲಿ ತೂಗುವ ವಿಶಿಷ್ಟ ಆಚರಣೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಬಲ್ಲತ್ತನಾಡಿನ ಪುರಾತನ ಭಗವತಿ ಭದ್ರಕಾಳಿ ದೇವಾಲಯದಲ್ಲಿ ಭಕ್ತರು ವಿವಿಧ ಧಾರ್ಮಿಕ ಕಾರ್ಯಗಳಲ್ಲಿ ಹಾಗೂ ಸಾಂಪ್ರದಾಯಿಕ ಆಚರಣೆಯಲ್ಲಿ ತೊಡಗಿಸಿಕೊಂಡಿದ್ದರು. ಉತ್ಸವದ ಅಂಗವಾಗಿ ಭದ್ರಕಾಳಿ ದೇವಿಯ ವಿಗ್ರಹವನ್ನು ದೊಡ್ಡ ಕಬ್ಬಿಣದ ರಾಟೆಯಲ್ಲಿ ತೂಗುವುದು ಮಾತ್ರವಲ್ಲದೆ ಮೂರು ತೆರೆ ಮುಡಿ ಕೋಲಗಳು ದೇವಾಲಯದ ಮೈದಾನದಲ್ಲಿ ನೆರವೇರಿತು. ಈ ಸಂದರ್ಭ ಭಕ್ತಾದಿಗಳು ಹರಕೆ ಕಾಣಿಕೆ ಒಪ್ಪಿಸಿ ಪ್ರಸಾದ ಸ್ವೀಕರಿಸುವುದರೊಂದಿಗೆ ವೀಕ್ಷಿಸಿ ಸಂಭ್ರಮಿಸಿದರು.

ರಸ್ತೆ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ನಾಗರಿಕ ಸಮಿತಿ ಆಗ್ರಹ

ವಿರಾಜಪೇಟೆ: ನಗರ ವ್ಯಾಪ್ತಿಯ ಸುಂಕದಕಟ್ಟೆಯಿಂದ ಮೀನುಪೇಟೆವರೆಗೂ ರಸ್ತೆ ಅಭಿವೃದ್ಧಿ ಕಾರ್ಯ ಕೈಗೊಳ್ಳುವಂತೆ ಒತ್ತಾಯಿಸಿ ನಾಗರಿಕ ಸಮಿತಿ ಮುಖಂಡರು ಪುರಸಭಾ ಮುಖ್ಯಾಧಿಕಾರಿಗೆ ಆಗ್ರಹಿಸಿದ್ದಾರೆ.

ಪಟ್ಟಣದ ಮುಖ್ಯರಸ್ತೆಗಳಲ್ಲಿ ವಾಹನಗಳ ದಟ್ಟಣೆ ಅತಿಯಾಗಿದ್ದು, ಕೆಲ ಅಂಗಡಿ ಮಾಲಿಕರು ತಮ್ಮ ವಾಹನಗಳನ್ನು ಬೆಳಿಗ್ಗೆ 8ರಿಂದ ರಾತ್ರಿ 10 ಗಂಟೆವರೆಗೂ ಅಲ್ಲೆ ನಿಲ್ಲಿಸಿರುತ್ತಾರೆ. ಕೆಲವರು ರಸ್ತೆ ಬದಿ ವಾಹನಗಳನ್ನು ನಿಲ್ಲಿಸಿ ದೂರದ ಊರಿಗೆ ಹೋದರೆ ಬರುವುದು ರಾತ್ರಿ ಇದರಿಂದಾಗಿ ಬ್ಯಾಂಕ್, ಕಚೇರಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದಿಂದ ಬರುವವರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ನಾಗರಿಕ ಸಮಿತಿಯ ಮುಖಂಡ ಡಾ. ಇ.ರಾ. ದುರ್ಗಾಪ್ರಸಾದ್ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿ, ಅನಾವಶ್ಯಕವಾಗಿ ವಾಹನ ನಿಲ್ಲಿಸಿ ಹೋಗುವವರಿಂದ ಮತ್ತು ಬೆಳಿಗ್ಗೆಯಿಂದ ರಾತ್ರಿವರೆಗೂ ನಿಲ್ಲಿಸುವ ವರ್ತಕರಿಂದ ನಿಲ್ದಾಣ ಶುಲ್ಕವೆಂದು ವಸೂಲಿ ಮಾಡುವಂತೆ ಆಗ್ರಹಿಸಿದರು.

ಎಸ್‌ಟಿಜಿ ಕಾಲೇಜು ವಿದ್ಯಾರ್ಥಿಗಳ ಸಾಧನೆ

ಮರು ಮೌಲ್ಯಮಾಪನದಲ್ಲಿ ಕಾಲೇಜಿನ ವಿದ್ಯಾರ್ಥಿನಿ ಲೇಖನ ರಾಜ್ಯಕ್ಕೆ 8, ಶೀತಲ 10ನೇ ರ್‍ಯಾಂಕ್



ಲೇಖನ



ಶೀತಲ್

ಚಿನಕುರಳಿ, ಏ.26– ದ್ವಿತೀಯ ಪಿಯುಸಿ ಮರುಮೌಲ್ಯಮಾಪನದಲ್ಲಿ ತಾಲೂಕಿನ ಚಿನಕುರಳಿಯ ಎಸ್‌ಟಿಜಿ ಕಾಲೇಜಿನ ವಿದ್ಯಾರ್ಥಿಗಳಾದ ವಿ.ಲೇಖನ 593(98.83) ಅಂಕಗಳಿಸುವ ಮೂಲಕ ಜಿಲ್ಲೆಗೆ ದ್ವಿತೀಯ ಹಾಗೂ ರಾಜ್ಯಕ್ಕೆ 8ನೇ ಸ್ಥಾನ ಹಾಗೂ ಶೀತಲ್ ಬಿ.ಆರ್. 590(98.33) ಅಂಕಗಳಿಸಿ ರಾಜ್ಯಕ್ಕೆ 10ನೇ ಸ್ಥಾನಪಡೆಯುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಕಾಲೇಜಿನ ವಿ.ಲೇಖನ 587 ಹಾಗೂ ಶೀತಲ್ ಬಿ.ಆರ್ 586 ಅಂಕಗಳು ಬಂದಿದ್ದವು. ಇಬ್ಬರು ವಿದ್ಯಾರ್ಥಿಗಳು ಸಹ ನಮಗೆ ಇನ್ನೂ ಹೆಚ್ಚಿನ ಅಂಕ ಬರಬೇಕೆಂದು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಇದೀಗ ಮರುಮೌಲ್ಯಮಾಪನದಲ್ಲಿ ವಿ. ಲೇಖನ ಅವರಿಗೆ ಇಂಗ್ಲೀಷ್‌ನಲ್ಲಿ ಹೆಚ್ಚುವರಿಯಾಗಿ 6 ಅಂಕಗಳು ಬಂದಿದ್ದು ಅವರ ಒಟ್ಟು ಅಂಕ 593(98.83) ಆಗಿದೆ. ಇವರು ಮಂಡ್ಯ ಜಿಲ್ಲೆಗೆ ದ್ವಿತೀಯ ಸ್ಥಾನ ಹಾಗೂ ರಾಜ್ಯಕ್ಕೆ 8ನೇ ರ್‍ಯಾಂಕ್ ಪಡೆದಿದ್ದಾರೆ. ಶೀತಲ್ ಬಿ.ಆರ್ ಎಂಬ ವಿದ್ಯಾರ್ಥಿನಿಗೆ ಮರುಮೌಲ್ಯ ಮಾಪನದಲ್ಲಿ ಇಂಗ್ಲಿಷ್ 4 ಹೆಚ್ಚುವರಿ ಅಂಕಗಳು ಬಂದಿದ್ದು ಇವರ ಒಟ್ಟು ಅಂಕ 590(98.33) ಗಳಾಗಿದ್ದು ಇವರು ರಾಜ್ಯಕ್ಕೆ 10ನೇ ರ್‍ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಎಸ್‌ಟಿಜಿ ಕಾಲೇಜಿಗೆ 99.80 ಫಲಿತಾಂಶ ಬಂದಿದೆ. ಕಾಲೇಜಿನ 474 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿ 473 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಇದರಲ್ಲಿ 241 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಪಿಸಿಎಂಬಿ ವಿಭಾಗದಲ್ಲಿ 405ಕ್ಕೆ 405 ವಿದ್ಯಾರ್ಥಿಗಳು ತೇರ್ಗಡೆ ಹೊಂದುವ ಮೂಲಕ ಶೇ.100 ಫಲಿತಾಂಶ ಬಂದಿದೆ ಪಿಸಿಎಂಸಿ ವಿಭಾಗದಲ್ಲಿ 69 ವಿದ್ಯಾರ್ಥಿಗಳ ಪೈಕಿ 68 ವಿದ್ಯಾರ್ಥಿಗಳು ತೇರ್ಗಡೆಹೊಂದುವ ಮೂಲಕ ಶೇ.99.80 ಫಲಿತಾಂಶ ಬಂದಿದೆ. ಮರುಮೌಲ್ಯಮಾಪನದಲ್ಲಿ ಹೆಚ್ಚುವರಿ ಅಂಕಗಳಿಸಿ ರಾಜ್ಯಕ್ಕೆ 8ನೇ ರ್‍ಯಾಂಕ್ ಪಡೆದ ವಿದ್ಯಾರ್ಥಿನಿ ವಿ.ಲೇಖನ ಹಾಗೂ 10ನೇ ರ್‍ಯಾಂಕ್‌ಪಡೆದ ಶೀತಲ್ ಬಿ.ಆರ್ ಅವರನ್ನು ಸಂಸ್ಥೆಯ ಅಧ್ಯಕ್ಷರಾದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಸಿಇಓ ಸಿ.ಪಿ.ಶಿವರಾಜು ಹಾಗೂ ಆಡಳಿತ ಮಂಡಳಿ, ಉಪನ್ಯಾಸಕ ವರ್ಗದವರು ಅಭಿನಂಧನೆ ಸಲ್ಲಿಸಿದ್ದಾರೆ.

ಅಭಿಗ್ನ ವೈ. ಪಟೇಲ್ ಮಂಡ್ಯ ಜಿಲ್ಲೆಗೆ ಪ್ರಥಮ



ಅಭಿಗ್ನ

ಮಂಡ್ಯ: ಶ್ರೀರಂಗಪಟ್ಟಣ ತಾಲೂಕಿನ ಕೇಂಬ್ರಿಡ್ಜ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಅಭಿಗ್ನ ವೈ.ಪಟೇಲ್‌ಗೆ ದ್ವಿತೀಯ ಪಿಯುಸಿ ಉತ್ತರ ಪತ್ರಿಕೆ ಮರುಮೌಲ್ಯ ಮಾಪನದಲ್ಲಿ ಅಧಿಕ ಅಂಕಗಳು ಬಂದಿದ್ದು, ಮಂಡ್ಯ ಜಿಲ್ಲೆಗೆ ಪ್ರಥಮ ಸ್ಥಾನ ಪಡೆಯುವ ಮೂಲಕ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡಾಗ ವಿದ್ಯಾರ್ಥಿನಿಗೆ 600ಕ್ಕೆ 590 ಅಂಕಗಳು ಬಂದಿತ್ತು. ಮೊದಲ ಫಲಿತಾಂಶದಲ್ಲಿ ಇಂಗ್ಲಿಷ್ ವಿಷಯದಲ್ಲಿ 94 ಅಂಕ ಬಂದಿತ್ತು. ಇಂಗ್ಲಿಷ್ ವಿಷಯದಲ್ಲಿ ನಿರೀಕ್ಷಿಸಿದ್ದಕ್ಕಿಂತ ಕಡಿಮೆ ಅಂಕ ಬಂದ ಹಿನ್ನೆಲೆಯಲ್ಲಿ ಇಂಗ್ಲಿಷ್ ವಿಷಯದ ಉತ್ತರ ಪತ್ರಿಕೆ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಮರುಮೌಲ್ಯಮಾಪನದಲ್ಲಿ ವಿದ್ಯಾರ್ಥಿನಿಗೆ 4 ಅಂಕಗಳು ಹೆಚ್ಚಿಗೆ ಬಂದಿದ್ದು, 98 ಅಂಕ ಪಡೆದುಕೊಂಡಿದ್ದಾರೆ. ಇದರೊಂದಿಗೆ ಒಟ್ಟು 594 ಅಂಕಗಳನ್ನು ಪಡೆಯುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿನಿ ಕನ್ನಡ 98, ಇಂಗ್ಲಿಷ್ 98, ಭೌತಶಾಸ್ತ್ರ 99, ರಾಸಾಯನಶಾಸ್ತ್ರ 99, ಗಣಿತ 100 ಹಾಗೂ ಜೀವಶಾಸ್ತ್ರ ವಿಷಯದಲ್ಲಿ 100ಕ್ಕೆ 100 ಅಂಕಗಳನ್ನು ಪಡೆಯುವ ಮೂಲಕ ಶೇ.99 ರಷ್ಟು ಫಲಿತಾಂಶ ಪಡೆದಿದ್ದಾರೆ. ಇದರೊಂದಿಗೆ ರಾಜ್ಯ ರ್‍ಯಾಂಕ್ ಪಟ್ಟಿಯಲ್ಲಿ 6ನೇ ಸ್ಥಾಕ್ಕೇರಿದ್ದಾರೆ. ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿನಿ ಅಭಿಗ್ನ ವೈ. ಪಟೇಲ್‌ಗೆ ಕಾಲೇಜಿನ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಕಾವೇರಿ ಆರತಿ, ಅಮ್ಯೂಸ್ಮೆಂಟ್ ಪಾರ್ಕ್ ಯೋಜನೆ ಕೈಬಿಡಲು ಒತ್ತಾಯ

ಮಂಡ್ಯ,ಏ.26– ಕನ್ನಂಬಾಡಿ ಕಟ್ಟೆ ಮುಖ್ಯ ದ್ವಾರದ ಬಳಿ ಹಣ ಮಾಡುವ ಉದ್ದೇಶದಿಂದ ಕಾವೇರಿ ಆರತಿ ಮತ್ತು ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆ ಮಾಡಲು ಮುಂದಾಗಿದ್ದು, ಸದರಿ ಕ್ರಿಯಾಯೋಜನೆ ಕೈಬಿಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐತಿಹಾಸಿಕ ಕಾವೇರಿಗೆ ಆರತಿ ಎಂಬ ಹೆಸರು ಸೇರಿಸಿ ಕನ್ನಂಬಾಡಿ ಅಣೆಕಟ್ಟೆಯ ಪರಿಸರ, ನೈರ್ಮಲ್ಯಕ್ಕೆ ಧಕ್ಕೆ ತರುವಂತಹ ಕೆಲಸ ಮಾಡಲಾಗುತ್ತಿದೆ. ಕಾವೇರಿ ಆರತಿಯ ಯೋಜನೆಯಲ್ಲಿ ಭ್ರಷ್ಟಾಚಾರದ ವಾಸನೆ ಮೂಡುತ್ತಿದೆ ಎಂದರು. ಸರ್ಕಾರ ಲಾಭ ಮಾಡಿ ಹಣ ಲೂಟಿ ಹೊಡೆಯುವ ಉದ್ದೇಶದಿಂದ ಇಂತಹ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದ್ದು, ಅಚ್ಚುಕಟ್ಟು ವ್ಯಾಪ್ತಿಯ ಮುಖ್ಯ ನಾಲೆ, ಉಪನಾಲೆ, ಸೀಳುನಾಲೆ, ನಾಲಾ ಬದಿಯ ರಸ್ತೆಗಳು ತೀರ ಹದಗೆಟ್ಟಿದೆ ನಾಲೆಯ ಕೊನೆಯ ಭಾಗಕ್ಕೆ ನೀರು ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಮುಂದಾಗಬೇಕು ಎಂದು ಆಗ್ರಹಿಸಿದರು.

ಅಭಿವೃದ್ಧಿ ಕೆಲಸಕ್ಕೆ ಒತ್ತು ಕೊಡದೆ ಅನಾವಶ್ಯಕ ಯೋಜನೆಗೆ ಕೋಟಿಗಟ್ಟಲೆ ಹಣ ವ್ಯಯ ಮಾಡುತ್ತಿರುವುದು ಖಂಡನೀಯವಾಗಿದ್ದು, ಈ ಹಿನ್ನೆಲೆ ಏ.17ರಂದು ರೈತ ಸಂಘ ಸಭೆ ನಡೆಸಿದ್ದು, ಮೇ.6ರಂದು ಜಿಲ್ಲೆಯಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ತಿಳಿಸಿದರು.

ಗೋಷ್ಠಿಯಲ್ಲಿ ತಾಲೂಕು ಅಧ್ಯಕ್ಷ ಶಿವಳ್ಳಿ ಚಂದ್ರು ಪ್ರಧಾನ ಕಾರ್ಯದರ್ಶಿ ಮಂಜೇಶ್ ಗೌಡ, ಮಾಧ್ಯಮ ಕಾರ್ಯದರ್ಶಿ ಸೋ.ಸಿ. ಪ್ರಕಾಶ್, ಮಲ್ಲೇಶ್, ಲಿಂಗರಾಜು ಇದ್ದರು.

ಉಗ್ರರ ದಾಳಿ ಖಂಡಿಸಿ ಪಂಜಿನ ಮೆರವಣಿಗೆ



ಉಗ್ರರ ದಾಳಿ ಖಂಡಿಸಿ ಭಾರತೀನಗರದ ಮುಖ್ಯರಸ್ತೆಯಲ್ಲಿ ಪಂಜಿನ ಮೆರವಣಿಗೆ ನಡೆಸಲಾಯಿತು.

ಭಾರತೀನಗರ,ಏ.26– ಕಾಶ್ಮೀರದ ಪಹಲ್ಗಾವ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ಭಯೋತ್ಪಾದಕರು ನಡೆಸಿರುವ ಹತ್ಯೆಯನ್ನು ಖಂಡಿಸಿ ಹಿಂದೂ ಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಭಾರತೀನಗರದ ಮುಖ್ಯ ರಸ್ತೆಯಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಉಗ್ರರ ದಾಳಿ ಖಂಡಿಸಿ ಕೆ.ಎಂ.ದೊಡ್ಡಿ ಹಿಂದೂಪರ ಸಂಘಟನೆಗಳ ಒಕ್ಕೂಟದಿಂದ ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಪಂಜಿನ ಮೆರವಣಿಗೆ ನಡೆಸಿ ಉಗ್ರರನ್ನು ದೇಶದಿಂದ ಹೊಡೆದೋಡಿಸಬೇಕು. ದೇಶವನ್ನು ರಕ್ಷಣೆಗೊಳಿಸಿ ಪಹಲ್ಗಾಮ್‌ನಲ್ಲಿ ನಡೆಸಿರುವ ಕೃತ್ಯದಿಂದ ಭಾರತವೇ ತಲೆ ತಗ್ಗಿಸುವಂತಾಗಿದೆ. ಇಂತಹ ನೀಚರನ್ನು ಜೀವಂತವಾಗಿ ಬಿಡಬಾರದೆಂದು ಆಗ್ರಹಿಸಿದರು. ಇದೇ ವೇಳೆ ಮೆಡಿಕಲ್ ಸ್ಟೋರ್ ಗಿರೀಶ್, ಬಸವೇಶ್ವರ ಎಲೆಕ್ಟ್ರಿಕಲ್ ವಿಜಯ್ ಕುಮಾರ್, ಅಣ್ಣೂರು ನವೀನ್, ಶಿವರಾಮು, ಮದ್ದೂರು ಕೆ.ಟಿ.ನವೀನ್, ಜೈಕುಮಾರ್, ಕೆ.ಟಿ.ಸುರೇಶ್, ಅಣ್ಣೂರು ಮನೋಹರ್, ವಿನು, ಯಲಾದಹಳ್ಳಿ ಗುರು, ಬಿದರಹೊಸಹಳ್ಳಿ ಮನು, ಸಜನ್, ಮನನ್‌ಲಾಲ್, ಆಟೋ ಮಹೇಂದ್ರ ಆರ್‌ಟಿಓ ಚಂದ್ರು ಹಾಜರಿದ್ದರು.

ಕಿಕ್ಕೇರಿಯಲ್ಲಿ ಭಜರಂಗದಳ ಪ್ರತಿಭಟನೆ



ಭಯೋತ್ಪಾದಕರ ಗುಂಡಿಗೆ ಬಲಿಯಾದ ಪ್ರವಾಸಿಗರಿಗೆ ಶ್ರದ್ಧಾಂಜಲಿ ಸಲ್ಲಿಸುವುದರೊಂದಿಗೆ, ಭಯೋತ್ಪಾದಕರ ಕುಕೃತ್ಯ ಖಂಡಿಸಿ, ಕಿಕ್ಕೇರಿಯಲ್ಲಿ ಭಜರಂಗದಳ ಮತ್ತು ಮತ್ತಿತರ ಹಿಂದೂಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಈ ವೇಳೆ ಉಗ್ರರ ಪ್ರತಿಕೃತಿಯನ್ನು ಧಹಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಲಾಯಿತು.

ಹಿಂದೂಗಳ ನರಮೇಧ ಖಂಡಿಸಿ ಹಿಂದೂ ಪರಿಷತ್ ಭಜರಂಗದಳ ಪ್ರತಿಭಟನೆ



ಹಿಂದೂಗಳ ನರಮೇಧವನ್ನು ಖಂಡಿಸಿ ಹಿಂದೂ ಪರಿಷತ್ ಭಜರಂಗ ದಳ ಹಾಗೂ ಹಿಂದೂಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ: ಪೆಹಲ್ಗಾಮ್‌ಲ್ಲಿ ನಡೆದ ಹಿಂದೂಗಳ ನರಮೇಧವನ್ನು ಖಂಡಿಸಿ ಹಿಂದೂ ಪರಿಷತ್ ಭಜರಂಗ ದಳ ಹಾಗೂ ಹಿಂದೂಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ದೇವಲ ಮಹರ್ಷಿ ವೃತ್ತದಲ್ಲಿ ಸೇರಿದ ಪ್ರತಿಭಟನಾಕಾರರು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಹಿಂದೂಗಳನ್ನು ಹತ್ಯೆ ಮಾಡಿದ ಜಿಹಾದಿ ಭಯೋತ್ಪಾದಕರ ವಿರುದ್ಧ ಘೋಷಣೆ ಕೂಗುತ್ತಾ ಇಂತಹ ಭಯೋತ್ಪಾದಕರಿಗೆ ತಕ್ಕ ಶಿಕ್ಷೆಯಾಗಬೇಕು, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕಠಿಣ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು

ಡಾ.ವಿಷ್ಣು ರಸ್ತೆ, ಡಾ.ರಾಜ್‌ಕುಮಾರ್ ರಸ್ತೆ, ಡಾ.ಅಂಬೇಡ್ಕರ್ ರಸ್ತೆ ಮೂಲಕ ತಾಲೂಕು ಕಚೇರಿಗೆ ತೆರಳಿದರು. ಇದಕ್ಕೂ ಮುನ್ನ ನಾಗಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಹಿಂದೂಗಳಿಗೆ ಸೂಕ್ತ ರೀತಿ ರಕ್ಷಣೆಗೆ ಆಗ್ರಹಿಸಿದರು. ಮಹರ್ಷಿ ವೃತ್ತದಲ್ಲಿ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರತಿಭಟನೆ ಪ್ರಾರಂಭಕ್ಕೂ ಮುನ್ನ ದೇವಲ ಮಹರ್ಷಿ ವೃತ್ತದಲ್ಲಿ ದೇವರ ದಾಸೀಮಯ್ಯ ಪುತ್ಥಳಿಗೆ ನಮಿಸಿ ಮೆರಣಿಗೆ ತೆರಳಿ ಉಪ ವಿಭಾಗ ಕಚೇರಿಯಲ್ಲಿ ಶಿರಸ್ತೇದಾರ್ ರವಿಯವರಿಗೆ ಮನವಿ ಸಲ್ಲಿಸಿದರು.

ಸಂಘಟನೆಗಳ ಪ್ರಮುಖರಾದ ನಟರಾಜ ಗೌಡ, ಸತ್ತೇಗಾಲ ಹ್ಯಾಂಡ್ ಪೋಸ್ಟ್ ರವೀಂದ್ರ, ಜನನಿ ಆಸ್ಪತ್ರೆ ಸಂಸ್ಥಾಪಕ ಡಾ.ಪ್ರವೀಣ್ ಕುಮಾರ್, ನಿರಂಜನ್ ರವಿ, ಬೂದಿತಿಟ್ಟು ಶಿವಕುಮಾರ್, ನವೀನ್, ಕೃಷ್ಣಮೂರ್ತಿ, ಬಾಲು, ಪಾಂಡುರಂಗ, ರವಿ ಕುಣಗಳ್ಳಿ, ಶಿವಕುಮಾರ್, ಟಗರಪುರ ರೇವಣ್ಣ, ಡೈರಿ ಗಿರೀಶ್, ಶೈಲಾರಮೇಶ್, ಮಮತಾ ಬದ್ರಿನಾಥ್, ಹಣ್ಣು ಅಂಗಡಿ ಅಧ್ಯಕ್ಷ ದ್ವಾರಕೀಶ್, ಕೆಎಸ್‌ಡಿಸಿ ಡಾ.ಅರುಣಾಚಲಯ್ಯ, ಮಹೇಶ್, ಸೋಮಣ್ಣ, ಮಧುಚಂದ್ರ ಇನ್ನಿತರಿದ್ದರು

ಇಂದು ಎಸ್ಸಿ, ಎಸ್ಟಿ ಕುಂದು–ಕೊರತೆ ಸಭೆ

ಚಾಮರಾಜನಗರ: ಜಿಲ್ಲಾಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮುಖಂಡರ ಕುಂದು–ಕೊರತೆ ಸಭೆಯನ್ನು ಏ.27ರ ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ರಾಜಕೀಯ ಬೇಡ : ನಿರಂಜನಕುಮಾರ್

ಗುಂಡ್ಲುಪೇಟೆ,ಏ–26–ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ಮೊನ್ನೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಮ್ಮ ತಾಲೂಕಿನ 110 ಕೆರೆಕಟ್ಟೆಗಳಿಗೆ ನೀರು ತುಂಬಿಸೋ ಯೋಜನೆ ಅತ್ಯಾವಶ್ಯಕವಾಗಿದ್ದು ಮುಖ್ಯಮಂತ್ರಿಗಳು ಅನುಮೋದನೆ ನೀಡಿರುವುದು ಸ್ವಾಗತಾರ್ಹ. ಆದರೆ ಈ ವಿಚಾರದಲ್ಲಿ ಕಾಂಗ್ರೆಸ್ ರಾಜಕೀಯ ಮಾಡುವುದು ಸರಿಯಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹಲವು ವರ್ಷಗಳಿಂದ ಅಂತರ್ಜಲ ಕುಸಿದು ರೈತರು ಸಂಕಷ್ಟಕ್ಕೆ ಒಳಗಾಗಿದ್ದ ಸಂದರ್ಭದಲ್ಲಿ ಆಗ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪ ಅವರು ಕೆರೆ ತುಂಬಿಸೋ ಯೋಜನೆಗೆ ಚಾಲನೆ ನೀಡಿದ್ದರು. ಆ ವೇಳೆಯಲ್ಲಿ ರೈತರ ಸಂಕಷ್ಟವನ್ನ ಮನದಟ್ಟು ಮಾಡುವಲ್ಲಿ ಅಂದಿನ ಶಾಸಕರು ಉಪೇಕ್ಷೆ ಮಾಡಿದ್ದರು, ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿದ್ದ ವೇಳೆ ಸುತ್ತೂರು ಶ್ರೀ ಕ್ಷೇತ್ರಕ್ಕೆ ಆಗಮಿಸಿದ್ದ ವೇಳೆ ನೀರಾವರಿ ಸಮಿತಿ ವರದಿ ಪರಿಗಣಿಸಿ 222 ಕೋಟಿ ಮಂಜೂರು ಮಾಡುವ ಮೂಲಕ ನೀರು ತುಂಬಿಸೋ ಯೋಜನೆಗೆ ಚಾಲನೆ ನೀಡಿದರು.

2 ವರ್ಷಗಳಿಂದ ತಾಲೂಕಿನ ಕೆರೆಗಳಿಗೆ ನೀರು ಹರಿದು ಬಂದಿಲ್ಲ ವಡ್ಡಗೆರೆ ಕೆರೆಗೆ ಬಂದ ನೀರು ಮುಂದಿನ ಕೆರೆಗಳಿಗೆ ಹರಿದು ಹೋಗಲೇ ಇಲ್ಲ ಆದರೆ ಅಧಿಕಾರದಲ್ಲಿರುವವರು ಆಸಕ್ತಿವಹಿಸದೆ ನಿರ್ಲಕ್ಷ್ಯ ತೋರಿದ್ದಾರೆ. ಕೊಡಸೋಗೆ ಮಳವಳ್ಳಿ ಗರಗನಹಳ್ಳಿ ಹಲವು ಕೆರೆಗಳಿಗೆ ನೀರು ತುಂಬಿಸಲು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಪ್ರಸ್ತುತವಾಗಿ ತಾಲೂಕಿನ ರೈತರ ಪರವಾಗಿ ಮಾಡಿದ ಅತ್ಯುತ್ತಮ ಕೆಲಸಗಳು ಸಾರ್ಥಕತೆ ಹಂತಕ್ಕೆ ತಲುಪಿವೆ. ಆದುದರಿಂದ ಸರ್ಕಾರ ತ್ವರಿತವಾಗಿ ಈ ಯೋಜನೆಯನ್ನ ಪೂರ್ಣಗೊಳಿಸಲು ಕೂಡಲೇ ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷದ ಶಾಸಕರೆ ಅನುದಾನ ವಿಲ್ಲ ಎಂದು ಅಸಹಾಯತೆ ತೋರುತ್ತಿದ್ದಾರೆ ಇಂತಹ ಸಂದಿಗ್ನ ಸ್ಥಿತಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಹೇಗೆ ಸಾಧ್ಯ, ಬಿಜೆಪಿ ಅವಧಿಯಲ್ಲಿನ ಕೆಲಸಗಳಿಗೆ ಚಾಲನೆ ಕೊಡುವ ಮೂಲಕ ತಮ್ಮ ಪಕ್ಷದ ಕೆಲಸಗಳು ಎಂದು ಬಿಂಬಿಸಿಕೊಳ್ಳುತ್ತಿರುವುದು ಹಾಸ್ಯಾಸ್ಪದ ಎಂದು ಲೇವಡಿ ಮಾಡಿದರು.

ಲೂಟಿಗಿಳಿದ ಪುರಸಭೆ : ಇತ್ತೀಚಿಗೆ ಬಿ–ಖಾತಾ ಮಾಡಿಸಿಕೊಳ್ಳಲು ಒಂದು ವರ್ಷದ ಆಸ್ತಿತೆರಿಗೆಯನ್ನು ಮಾತ್ರ ದುಪ್ಪಟ್ಟು ಕಟ್ಟಿಸಿಕೊಂಡು ಬಿ ಖಾತಾ ಮಾಡಬೇಕಿರುವುದು ಸರ್ಕಾರದ ಸುತ್ತೋಲೆಯಲ್ಲಿದೆ. ಆದರೂ ಸಹ ಪುರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಆರು ವರ್ಷದ ತೆರಿಗೆಯನ್ನು ದುಪ್ಪಟ್ಟು ಕಟ್ಟಿಸಿಕೊಳ್ಳುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಹಲವರು ಶಾಸಕರ ಗಮನಕ್ಕೂ ತಂದಿದ್ದರೂ ಸಹ ಮೌನವಾಗಿರುವುದು. ಇವರು ಜನರ ಮೇಲೆ ಇಟ್ಟಿರುವ ಕಾಳಜಿಯನ್ನು ತೋರುತ್ತದೆ. ಇನ್ನಾದರೂ ಮೌನ ಮುರಿದು ಪುರಸಭೆ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಿ ಲೂಟಿ ಮಾಡುವುದನ್ನು ತಪ್ಪಿಸಿ. ಜನತೆಯಲ್ಲಿ ಕಂದಾಯದ ವಿಚಾರದಲ್ಲಿ ಆಗಿರುವ ಸಮಸ್ಯೆಯನ್ನು ಬಗೆಹರಿಸಲಿ ಎಚಿದು ಸಲಹೆ ನೀಡಿದ್ದಾರೆ. ಇದೇ ರೀತಿ ಪುರಸಭೆ ಲೂಟಿಗಿಳಿದರೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮತ್ತು ವಿರೋಧ ಪಕ್ಷದಿಂದ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಮಂಡಲ ಉಪಾಧ್ಯಕ್ಷೆ ಗೀತಾ, ಜಿಲ್ಲಾ ಮಹಿಳಾ ಘಟಕದ ಉಪಾಧ್ಯಕ್ಷೆ ಸರಸ್ವತಮ್ಮ, ಮಾಜಿ ಅಧ್ಯಕ್ಷ ಎಲ್.ಸುರೇಶ್, ಮುಖಂಡರಾದ ನವೀನ್ ಮೌರ್ಯ, ಬಾಬು, ಬಸವರಾಜು, ಕಬ್ಬಳ್ಳಿ ರೇವಣ್ಣ, ಮಂಗಳಮ್ಮ, ಎಸ್.ಸಿ. ಮಂಜುನಾಥ್, ಡಿ.ಸಿ.ಮಹದೇವಸ್ವಾಮಿ, ಮಂಜು ಸೇರಿದಂತೆ ಹಲವರು ಇದ್ದರು.



ಗುಂಡ್ಲುಪೇಟೆಯಲ್ಲಿ ಸಿ.ಎಸ್.ನಿರಂಜನಕುಮಾರ್ ಸುದ್ದಿಗೋಷ್ಠಿ ನಡೆಸಿ ಕೆರೆತುಂಬಿಸುವ ಯೋಜನೆಯ ಬಗ್ಗೆ ದಾಖಲೆಗಳು ಮತ್ತು ಯೋಜನೆಯ ಬ್ಲೂಪ್ರಿಂಟ್ ಅನ್ನು ಪ್ರದರ್ಶಿಸಿದರು. ಮಂಡಲಾಧ್ಯಕ್ಷ ಸಿ.ಮಹದೇವ ಪ್ರಸಾದ್, ಎಲ್.ಸುರೇಶ್ ಇತರರು ಇದ್ದರು.

ಇಂದು 'ನಮ್ಮೂರ ವರನಟ' ವಿಚಾರ ಸಂಕಿರಣ

ಚಾಮರಾಜನಗರ, ಏ. 26 – ರಾಜ್ಯ ಸಾಹಿತ್ಯ ಅಕಾಡಮಿ ಮತ್ತು ರಂಗವಾಹಿನಿ ಸಂಸ್ಥೆ ಹಾಗೂ ಚಕೋರ ಸಾಹಿತ್ಯ ವೇದಿಕೆ ಸಂಯುಕ್ತಾಶ್ರಯದಲ್ಲಿ ಪದ್ಮಭೂಷಣ ಡಾ. ರಾಜ್‌ಕುಮಾರ್ ಕುರಿತ 'ನಮ್ಮೂರ ವರನಟ' ವಿಚಾರ ಸಂಕಿರಣ ಕಾರ್ಯಕ್ರಮವನ್ನು ಏ. 27ರ ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಕಾರ್ಯಕ್ರಮ ಉದ್ಘಾಟಿಸುವರು. ದೀನಬಂಧು ಸಂಸ್ಥೆಯ ಮುಖ್ಯಸ್ಥ ಪ್ರೊ.ಜಿ.ಎಸ್.ಜಯದೇವ ಅಧ್ಯಕ್ಷತೆ ವಹಿಸುವರು. ಹಿರಿಯ ಸಾಹಿತಿ ಕೆ. ವೆಂಕಟರಾಜು ಕಾರ್ಯಕ್ರಮದ ಆಶಯ ನುಡಿಗಳನ್ನಾಡುವರು. ಖ್ಯಾತ ಚಲನಚಿತ್ರ ಕಥೆಗಾರ ಬಿ.ಎ. ಮಧು, ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಪಾಪು ವೆಂಕಟರಮಣಸ್ವಾಮಿ, ಚಲನಚಿತ್ರ ನಿರ್ಮಾಪಕ ಎಸ್.ಎ.ಶ್ರೀನಿವಾಸ್, ರಾಣಿ ಐಶ್ವರ್ಯ ಗ್ರೂಪ್‌ನ ಎಚ್.ಎಲ್. ಸತೀಶ್ ಮುದ್ದೂರು ಮುಖ್ಯಅತಿಥಿಗಳಾಗಿರುವರು.

ಹಿರಿಯ ನಟಿ ಲಕ್ಷ್ಮಿದೇವಿಗೆ 'ಮುತ್ತುರಾಜು' ಪ್ರಶಸ್ತಿ



ಪದ್ಮಭೂಷಣ ಡಾ.ರಾಜ್‌ಕುಮಾರ್ ಅವರ 97ನೇ ಹುಟ್ಟುಹಬ್ಬದ ಪ್ರಯುಕ್ತ 'ಮುತ್ತುರಾಜು' ಪ್ರಶಸ್ತಿಯನ್ನು ಹಿರಿಯ ನಟಿ ಲಕ್ಷ್ಮೀದೇವಿಗೆ ವಿತರಿಸಲಾಯಿತು.

ಮುಗಿಲೆತ್ತರದ ಮಾತ್ಸರ್ಯ

ಮೈಸೂರು ಮಿತ್ರ ಸ್ಥಾಪನೆ: 1980 46 ಅತ್ಯುತ್ತಮ ಪತ್ರಿಕೋದ್ಯಮ

'ಮೈಸೂರು ಮಿತ್ರ' 46ನೇ ವಾರ್ಷಿಕೋತ್ಸವ ಕಥಾಸ್ಪರ್ಧೆಯಲ್ಲಿ ತೃತೀಯ ಬಹುಮಾನಿತ ಕಥೆ



ಹೆಚ್.ಕೆ.ಶಶಿಕುಮಾರ್
ಮೊ: 7019154192



ದೊಡ್ಡದಾದ ಪಲ್ಲಂಗದಲ್ಲಿ ಕಾಳೇಗೌಡರ ಕುತ್ತಿಗೆಯು ಮುಂಡದಿಂದ ಬೇರ್ಪಟ್ಟು ಕಾಲು ಭಾಗದಷ್ಟು ಮಾತ್ರ ದೇಹಕ್ಕೆ ಅಂಟಿಕೊಂಡಿದೆ. ಪಕ್ಕದಲ್ಲೇ ಪತ್ನಿ ರತ್ನಮ್ಮ ಹೆಣವಾಗಿ ಬಿದ್ದಿದ್ದಾಳೆ. ಅವಳ ಹೊಟ್ಟೆಯ ಮೇಲೆ ರಕ್ತವು ಹೆಪ್ಪುಗಟ್ಟಿದೆ. ಹಾಸಿಗೆಯ ಮೇಲಿನ ಬಿಳೀ ಬಣ್ಣದ ಮೇಲು ಹೊದಿಕೆಯಂತೂ ಪೂರ್ತಿಯಾಗಿ ರಕ್ತದಲ್ಲಿ ಮುಳುಗಿಸಿ ತೆಗೆದಂತಿದೆ. ಎಂತಹಾ ಗಂಡೆದೆಯನ್ನೂ ಸಹ ಅಲುಗಾಡಿಸುವಂತಹ ನೋಟ! ಥರ-ಥರನೆ ನಡುಗಿತು ಪೊಲೀಸ್ ಇಲಾಖೆ.

ಬೆಳಗಿನ 7.00 ಗಂಟೆಯಲ್ಲಿ ಇನ್ಸ್‌ಪೆಕ್ಟರ್ ಜಮಾದಾರ್ ಹಾಗೂ ನಾಲ್ಕು ಜನ ಕಾನ್ಸ್‌ಟೆಬಲ್‌ಗಳನ್ನು ಹೊತ್ತಿದ್ದ ಆ ಪೊಲೀಸ್ ಸ್ಕಾರ್ಪಿಯೋ, ರಭಸದಿಂದ ಬಂದು ಕದಂಬ ರಸ್ತೆಯಲ್ಲಿದ್ದ ಲಿಕ್ಕರ್ ವ್ಯಾಪಾರಿ ಕಾಳೇಗೌಡರ ಮನೆಯ ಮುಂದೆ ಗಕ್ಕನೆ ನಿಂತುಕೊಂಡಿತು. ಆವರೆವಿಗೂ ಜನ ಸಂಚಾರವೇ ಇಲ್ಲದೇ ಬಿಕೋ ಎನ್ನುತ್ತಿದ್ದ ಆ ರಸ್ತೆಯು ಕ್ಷಣಮಾತ್ರದಲ್ಲಿ ಜನಗಳಿಂದ ತುಂಬಿ ಹೋಯಿತು. ಪೊಲೀಸ್ ವಾಹನದ ಆಕರ್ಷಣೆಯೇ ಹಾಗಲ್ಲವೇ?! ಅದೇ ಅಲ್ಲವೇ ಆ ಖಾಕಿಯ ಗಮ್ಮತ್ತು?! ಇಲಾಖೆಯವರನ್ನು ಬರಮಾಡಿಕೊಂಡ ಪಕ್ಕದ ಮನೆಯ ಸುರೇಶ್ ಕಾಮತ್, ಸಂಪೂರ್ಣಳೊಂದಿಗೆ ಇನ್ಸ್‌ಪೆಕ್ಟರ್ ಬಳಿಗೆ ಬಂದರು.

50ರ ಗಡಿ ದಾಟಿದ್ದ ಇನ್ಸ್‌ಪೆಕ್ಟರ್ ಜಮಾದಾರ್ ನಿಜಕ್ಕೂ ಇಲಾಖೆಯಲ್ಲಿ ಸಾಕಷ್ಟು ಪ್ರಶಂಸನೀಯವಾದ ಕಾರ್ಯಗಳನ್ನು ಬಲು ದಕ್ಷತೆಯಿಂದ ನಿರ್ವಹಿಸಿ ಪೊಲೀಸ್ ಪದಕವನ್ನು ಪಡೆದಿದ್ದರು.

ಬಿಕ್ಕಿ-ಬಿಕ್ಕಿ ಅಳುತ್ತಿದ್ದ ಕಾಳೇಗೌಡರ ಮಗಳು ಸಂಪೂರ್ಣಳನ್ನು ಕಂಡ ಅವರು ಏನಾಗ್ಯತೀಂತ ಗಾಬ್ರಿ ಆಗಿದ್ಯಮಾ?!...... ನೋಡಣ್ ಇರೂ ಅಳೋಡ ತಾಯಿ' ಎಂದು ಸಮಾಧಾನಪಡಿಸಿದ್ದರು. ಈಗ ಸಂಪೂರ್ಣಳ ದುಃಖದ ಕಟ್ಟೆ ಒಡೆದು ಹೋಯಿತು. ಗೌರವಾದರಗಳ ಪ್ರತೀಕದಂತಿದ್ದ ಜಮಾದಾರ್ ಅವರ ಆ ದೊಡ್ಡ ನಿಲುವು ಒಮ್ಮೆಲೇ ಸಂಪೂರ್ಣಳಲ್ಲಿ ಅದೇಕೋ ಎಲ್ಲಿಲ್ಲದ ನಿರಾತಂಕತೆಯನ್ನು ಮೂಡಿಸಿತ್ತು. ತಡೆಯದಾದ ಅವಳು 'ಅಂಕಲ್, ನಾ...ವು ಏನ್ ಮಾಡ್ತೂ ಬಾಗ್ಲು ತೆಗೀ..ತಾ ಇಲ್ಲ! ನಂಗೆ ತುಂಬಾನೇ ಭಯಾ ಆಗಿ...ದೆ! ಅಪ್ಪಯ್ಯ ಆಗ್ಲೀ, ಅಥವಾ ರವ್ಯಣ್ಣ ಆಗ್ಲೀ, ಯಾತಿಕ್ಕೆ ಅಂಕ...ಲ್ ಮೊಬೈಲ್ ಕೂಡಾ ತೊಗೋತಾ ಇಲ್ಲ?! ....ಏನಾಗಿದೆ ಅಂಕಲ್' ಬಿಕ್ಕುತ್ತಲೇ ಕೇಳಿದಳು. ಅವಳ ಆ ಅಳು ಮುಖವನ್ನೇ ಒಮ್ಮೆ ನೋಡಿದ ಜಮಾದಾರ್, ಕ್ಷಣಕಾಲ ಪೆಚ್ಚಾದರು. ಒಮ್ಮೆ ಅವಳ ತಲೆಯನ್ನು ಮಮತೆಯಿಂದ ನೇವರಿಸಿದವರು ಜೊತೆಯಲ್ಲಿದ್ದ ಕಾನ್ಸ್‌ಟೆಬಲ್‌ಗಳೊಂದಿಗೆ ತೆರೆದಿದ್ದ ಗೇಟಿನ ಮೂಲಕ ಸರ- ಸರನೆ ಹೆಜ್ಜೆ ಹಾಕುತ್ತಾ ಒಳ ಹೊಕ್ಕರು.

ಮನೆಯ ಹಿಂದೆ-ಮುಂದೆ ಒಮ್ಮೆ ಸುತ್ತಾಡಿದರು. ಇದ್ದ ಎರಡೂ ಕಡೆಯ ಬಾಗಿಲುಗಳು ಒಳಗಿನಿಂದಲೇ ಮುಚ್ಚಲ್ಪಟ್ಟಿವೆ! ಯೋಚನಾಕ್ರಾಂತರಾದರು ಜಮಾದಾರ್.

ಜನಗಳ ಸಹಾಯದಿಂದ ಹಳೇ ಕಾಲದ ಆ ಬಾಗಿಲನ್ನು ಹಾರೆಯಿಂದ ಹಿಗ್ಗಲಿಸಲು 30 ನಿಮಿಷಗಳೇ ಬೇಕಾಯಿತು. ಇಬ್ಬರು ಕಾನ್ಸ್‌ಟೆಬಲ್‌ಗಳೊಂದಿಗೆ ಒಳಹೊಕ್ಕ ಜಮಾದಾರ್, ಒಮ್ಮೆಲೇ ಹಿಂತಿರುಗಿದವರು ಬಾಗಿಲನ್ನೊಮ್ಮೆ ಪರೀಕ್ಷಿಸಿದರು. ಒಳಗಿನಿಂದ ಹಾಕಿದ್ದ ಡೋರ್‌ಲಾಕ್ ಹಾಕಿದ ಹಾಗೆಯೇ ಇದೆ!! ಚಕಿತರಾದವರು ಅಲ್ಲಿದ್ದ ಸಾಕಷ್ಟು ಸೋಫಾ, ಕುರ್ಚಿಗಳನ್ನು ದಾಟಿ, ಮಲಗುವ ಕೋಣೆಯ ಒಳಗೆ ಅಡಿ ಇಟ್ಟರು. ಅಲ್ಲಿನ ದೃಶ್ಯವನ್ನು ಕಂಡವರೇ ಒಮ್ಮೆಲೇ ಸ್ಥಂಭೀಭೂತರಾಗಿ ನಿಂತಲ್ಲೇ ನಿಂತುಬಿಟ್ಟರು!

ದೊಡ್ಡದಾದ ಪಲ್ಲಂಗದಲ್ಲಿ ಕಾಳೇಗೌಡರ ಕುತ್ತಿಗೆಯು ಮುಂಡದಿಂದ ಬೇರ್ಪಟ್ಟು ಕಾಲು ಭಾಗದಷ್ಟು ಮಾತ್ರ ದೇಹಕ್ಕೆ ಅಂಟಿಕೊಂಡಿದೆ. ಪಕ್ಕದಲ್ಲೇ ಪತ್ನಿ ರತ್ನಮ್ಮ ಹೆಣವಾಗಿ ಬಿದ್ದಿದ್ದಾಳೆ. ಅವಳ ಹೊಟ್ಟೆಯ ಮೇಲೆ ರಕ್ತವು ಹೆಪ್ಪುಗಟ್ಟಿದೆ. ಹಾಸಿಗೆಯ ಮೇಲಿನ ಬಿಳೀ ಬಣ್ಣದ ಮೇಲು ಹೊದಿಕೆಯಂತೂ ಪೂರ್ತಿಯಾಗಿ ರಕ್ತದಲ್ಲಿ ಮುಳುಗಿಸಿ ತೆಗೆದಂತಿದೆ. ಎಂತಹಾ ಗಂಡೆದೆಯನ್ನೂ ಸಹಾ ಅಲುಗಾಡಿಸುವಂತಹ ನೋಟ! ಥರ-ಥರನೆ ನಡುಗಿತು ಪೊಲೀಸ್ ಇಲಾಖೆ.

ಇದಾವುದರ ಅರಿವಿಲ್ಲದಿದ್ದ ಸಂಪೂರ್ಣ, ಬಾಗಿಲಿಗೆ ಅಡ್ಡವಾಗಿ ನಿಂತಿದ್ದ ಪಿಸಿಯನ್ನು ಈಗ ಬಲವಂತವಾಗಿ ಪಕ್ಕಕ್ಕೆ ಸರಿಸಿ ಬಿಕ್ಕುತ್ತಲೇ ಒಳ ಬಂದವಳು, ಮಲಗುವ ಕೋಣೆಯನ್ನು ಹೊಕ್ಕಳು. ಅಲ್ಲಿನ ಆ ದೃಶ್ಯವನ್ನು ಕಂಡವಳೇ, 'ಅಪ್ಪ..ಯ್ಯಾ' ಎಂದು ಏರು ಧ್ವನಿಯಲ್ಲಿ ಚೀರಿದವಳು, ಒಮ್ಮೆಲೇ ನೆಲಕ್ಕೆ ವಾಲಿದಳು.

ಆ ಕೂಡಲೇ, ಅನುಭವಸ್ಥ ಇನ್ಸ್‌ಪೆಕ್ಟರ್ ಜಮಾದಾರವರ ಕೈಗಳು ಮುಂಜಾಗರೂಕತೆಯಾಗಿ ಮುಂದಕ್ಕೆ ಬಂದಿತ್ತು. ಅವಳನ್ನು ಗಟ್ಟಿಯಾಗಿ ಹಿಡಿದ ಜಮಾದಾರ್ ಒಮ್ಮೆ ಸುತ್ತಾ ನೋಡುತ್ತಾ ನೆಮ್ಮದಿಯ ಉಸಿರೊಂದನ್ನು ಬಿಟ್ಟರು. 'ಮೂರನೆಯ ಹೆಣವೊಂದು ಆ ಯಮನಿಗೆ ಅತಿಥಿಯಾಗುವುದನ್ನು ತಪ್ಪಿಸಿದೆ' ಎಂಬ ತೃಪ್ತಿಯ ಭಾವವೊಂದು ಅವರ ಆ ಗಡಸು ಮುಖದಲ್ಲಿತ್ತು.

ಅಲ್ಲಿಂದ ಹೊರ ಹೊರಟ ಜಮಾದಾರ್ ಹಾಗೂ ಅವರ ಸಿಬ್ಬಂದಿ ಹಜಾರವನ್ನು ದಾಟಿ ಅದಕ್ಕೇ ಅಂಟಿಕೊಂಡಂತೆ ಇದ್ದ ಮತ್ತೊಂದು ಕೋಣೆಗೆ ಕಾಲಿರಿಸಿತು.

ಪಾಪ ಅಲ್ಲಿ ತಮ್ಮನ್ನು ಸ್ವಾಗತಿಸಲು ಮೂರನೆಯ ಹೆಣವು ಕಾಯುತ್ತಿದೆಯೆಂಬ ಅರಿವು ಇವರಿಗಿರಲಿಲ್ಲ! ಸೊಂಟದಿಂದ ಹೊರಟಿದ್ದ ಉದ್ದನೆಯ ದೊಡ್ಡ 'ಬಾಕು' ಹೊಟ್ಟೆಯನ್ನೂ ದಾಟಿ ಮುಂದಕ್ಕೆ ಇಣುಕುತಿತ್ತು!! ಬೋರಲಾಗಿ ಸತ್ತು ಬಿದ್ದಿದ್ದ ಕಾಳೇಗೌಡರ ಮಗ ರವಿ!! ದೃಶ್ಯವನ್ನು ಕಂಡ ಈ ಜಮಾದಾರ್ ಹಾಗೂ ಅವರ ಸಿಬ್ಬಂದಿ ವರ್ಗವು ಒಮ್ಮೆಲೇ ತಲ್ಲಣಗೊಂಡಿತು. ಕ್ಷಣಕಾಲ ಮಾತಿಲ್ಲದೇ ಒಬ್ಬರ ಮುಖನ್ನೊಬ್ಬರು ನೋಡಿಕೊಂಡರಷ್ಟೆ.

ಜಮಾದಾರ್ ತಮ್ಮ ವೃತ್ತಿ ಬದುಕಿನಲ್ಲಿ ಸಾಕಷ್ಟು ಕೊಲೆಗಳನ್ನು ಕಂಡಿದ್ದರೂ, ಇದು ಮಾತ್ರ ಇವರನ್ನೂ ಸಹ ಸ್ವಲ್ಪ ಮಟ್ಟಿಗೆ ನಡುಗುವಂತೆ ಮಾಡಿತು.

ಹಿತ್ತಲಿನ ಬಾಗಿಲಿನ ಕಡೆಗೆ ಹರಿ ಹಾಯಿಸಿದ ಜಮಾದಾರ್ ಒಮ್ಮೆಲೇ ಯೋಚನಾಕ್ರಾಂತರಾದರು. ಒಳಗಿನಿಂದಲೇ ಭದ್ರವಾಗಿ ಅಗುಳಿ ಹಾಕಿದ್ದು, ಅದರೊಂದಿಗೆ ಕಬ್ಬಿಣದ ಅಡ್ಡಪಟ್ಟಿಯು ಸಹ ಆ ಬಾಗಿಲನ್ನು ಸುರಕ್ಷಿತವಾಗಿ ಹಿಡಿದಿಟ್ಟಿದೆ!

ಬಹುಶಃ ಜಮದಗ್ನಿಪುರವು ಈವರೆಗೂ ಕಾಣದ ಭೀಕರವಾದ ತ್ರಿವಳಿ ಕೊಲೆ ಅದಾಗಿತ್ತು ಎನ್ನಬಹುದೇನೋ!

ಒಂದು ಗಂಟೆಯಲ್ಲಿ, ವೈದ್ಯಾಧಿಕಾರಿ ಸತೀಶ್ ಹೊಂಬಾಳಿ, ಎಸ್.ಪಿ. ದಿನಕರ್, ಪತ್ರಕರ್ತರ ಹಿಂಡು, ಬೆರಳು ತಜ್ಞರ ತಂಡದ ಜೊತೆಗೆ, ಶ್ವಾನ ದಳವೂ ಕೂಡಾ ಕೊಲೆ ನಡೆದಿದ್ದ ಸ್ಥಳಕ್ಕೆ ಹಾಜರಾಗಿದ್ದವು. ಇಡೀ ಜಮದಗ್ನಿಪುರವೇ ಆ ಕದಂಬ ರಸ್ತೆಯಲ್ಲಿತ್ತು.

****

ಇಪ್ಪತ್ತು ದಿನಗಳೇ ಸವೆದುಹೋದವು. ಆದರೂ ಕೊಲೆಗಾರನ ಸುಳಿವು ಮಾತ್ರ ದೊರೆಯಲಿಲ್ಲ ಸ್ವಾಭಾವಿಕವಾಗಿ ತಾಳ್ಮೆಯನ್ನು ಕಳೆದುಕೊಂಡ ಗೃಹ ಇಲಾಖೆಯು ಸಿಬಿಐನ ಮೊರೆ ಹೊಕ್ಕಿತು. ಪರಿಣಾಮವಾಗಿ ಬೆಂಗಳೂರಿನಿಂದ ಆಗಮಿಸಿದ ಇನ್ಸ್‌ಪೆಕ್ಟರ್ ಸೂರ್ಯ ನೇರವಾಗಿ ಜಮದಗ್ನಿಪುರದ ಪೊಲೀಸ್ ಠಾಣೆಯನ್ನು ಪ್ರವೇಶಿಸಿದ. ಇವನ ಆಗಮನದ ಬಗ್ಗೆ ಮಾಹಿತಿ ಇದ್ದ ಜಮಾದಾರ್,ಕೂಡಲೇ ಎದ್ದು ಅವನನ್ನು ಬರಮಾಡಿಕೊಂಡರು.

ಕೇವಲ 25 ರಿಂದ 27 ವರ್ಷದ ಇನ್ಸ್‌ಪೆಕ್ಟರ್ ಸೂರ್ಯನನ್ನು ಕಂಡು ಏಕಕಾಲಕ್ಕೆ ಸಂತೋಷ ಹಾಗೂ ಅಚ್ಚರಿ ಎರಡೂ ಉಂಟಾಯಿತು. ಆ ಹಕ್ಕಿಯ ಚುರುಕು ನಡಿಗೆ, ಆ ನಡಿಗೆಯಲ್ಲಿನ ತೀವ್ರತೆ, ನಿಂತಲ್ಲಿ ನಿಲ್ಲಲಾರದ ಚಡಪಡಿಕೆ ಇವರನ್ನು ಅರೆಕ್ಷಣ ದಂಗು ಬಡಿಸಿತ್ತು ಅವರ ಅರಿವಿಗೇ ಇಲ್ಲದಂತೆ ಕಣ್ಣುಗಳಲ್ಲಿ ಮೆಚ್ಚುಗೆಯೊಂದು ಮನದಣಿಯ ಕುಣಿದಿತ್ತು.

'ನೋಡ್ರಿ ಸರ, ನಿಮ್ಮ ಎಲ್ಲಾ ರೀತಿ ಕೋಆಪರೇಷನ್ ಕೊಡ್ಬೇಕಂತ ನಮ್ ಎಸ್‌ಪಿ ಸಾಹೇಬ್ರು ನಂಗೆ ಆದೇಶ್ ಕೊಟ್ಟಾರೆ. ನಿಮ್ಮ ಅಜಮಾಸ್ಕ ಏನಿದ್ರೂ ನನ್ ಕಡಿ ಒದರ್ಬೋದ್ರೀ ಸರ. ಎಲ್ಲನ್ನೂ ಒದಗ್ಸ ವ್ಯವಸ್ಥೆ ನಾ ಮಾಡ್ತೀನ್ರಿ ಸರ. "For your use, a Jeep and a two wheeler have also been already allotted and you can make use of them at your convenience.?" ನುಡಿದು, ಮುಂದಿದ್ದ ಲೋಟದಲ್ಲಿನ ಕಾಫಿಯನ್ನು ಮುಗಿಸಿದರು. ಈಗ ತಾನೂ ಸಹ ಒಂದು ಗುಟುಕು ಕುಡಿದ ಸೂರ್ಯ, 'ಈ ಕೊಲೆಗೆ ಸಂಬಂಧ ಪಟ್ಟ ಎಲ್ಲಾ ವಿಚಾರ್ಗಳೂ ಜೊತೆಗೆ ನೀವು ಇದ್ವರ್ಗೂ ಮಾಡಿರೋ ವಿಚಾರ್ಣೆಗಳ ಎಲ್ಲಾ ಡೀಟೇಲ್ಲೂ ನಂಗೆ ಕೊಡಿ' ಕಾಲ ಮೇಲೆ ಕಾಲು ಹಾಕುತ್ತಾ ನುಡಿದ. ಚುರುಕಿನ ಅವನ ಆ ಪೊಲೀಸ್ ಕಣ್ಗಳು ಸ್ಟೇಷನ್‌ನ ಸುತ್ತಾ-ಮುತ್ತಾ ಒಮ್ಮೆ ಆಡಿದ್ದವು.

'ಸರ, ಈ ಕೊಲಿಗಳ ಬಗ್ಗಿ ನಿಮ್ಮ ಹೇಳೀ ಕಂದ್ರ, ಮಿಸ್ಟರ್ ಸುರೇಶ್ ಕಾಮತ್, ಅಂದ್ರ, ಕಾಳೇಗೌಡ್ರ ಬಾಜು ಮನೆಯವ ನಂಗ ಫೋನ್ ಹಚ್ಚಿದ್ರೀ ಸರ್'.

'ಏನಂತ'

"ಕಾಳೇಗೌಡ್ರ ಮನೆ ಕದ ಬಂದ್ ಆಗೈತಿ... ಮುಂಜಾನೆಯಿಂದ ಕದ ತೆಗಿದಿಲ್ಲ....ಮನೆ ಮುಂದೆ ಯಾರ ಓಡಾಟನೂ ಇಲ್ಲ ಅಂತ. ಇದೆಲ್ಲಾ ನನ್ ರಿಪೋರ್ಟ್‌ನಾಗೇ ಬರೋಬರಿ ಬಟ್ಟಿ ಇಳ್ಸೀನಿ ಸರ. Moreover, it is a RCC house and not a tiled roof ಸರ. ಇಂಥ ಸಂದರ್ಭದಾಗ ಕೊಲೆಗಾರ್ನಿಗೆ ಒಳ್ಗಡಿಕಿ ಎಂಟ್ರಿ ಹ್ಯಾಂಗ್ ಸಿಕ್ತೂ ಅನ್ನೋದ್ ನಮ್ಮ, ಒಂದು ಯಕ್ಷ ಪ್ರಶ್ನೆ ಆಗ್ಯತ್ರಿ.?

ರೆಪ್ಪೆಯಾಡಿಸದೇ ಆಲಿಸುತಿದ್ದ ಸೂರ್ಯ, ಹೌದೆಂಬಂತೆ ಆಗಾಗ್ಗೆ ತಲೆಯನ್ನು ಮೇಲೆ-ಕೆಳಗೆ ಆಡಿಸುತ್ತಿದ್ದ.

ಅಲ್ಲಿದ್ದ ಕಪಾಟಿನ ಕಡೆಗೆ ನಾಲ್ಕು ಹೆಜ್ಜೆ ಹಾಕಿದ ಜಮಾದಾರ್, ಕಡತವನ್ನು ಹೊರ ತೆಗೆದು ಸೂರ್ಯನಿಗೆ ಒಪ್ಪಿಸಿದರು.

ಎಲ್ಲರ ಹೇಳಿಕೆಗಳ ಜೊತೆಗೆ, ಹತ್ತು ಛಾಯಚಿತ್ರಗಳನ್ನೊಳಗೊಂಡಿದ್ದ 30 ಪುಟಗಳ ದೀರ್ಘವಾದ ಆ ವರದಿಯನ್ನು ಓದಿ ಗ್ರಹಿಸಿಕೊಳ್ಳಲು ಸುಮಾರು ಎರಡು ಗಂಟೆಗಳ ಕಾಲವನ್ನೇ ತೆಗೆದುಕೊಂಡ ಸೂರ್ಯ.

ಜಮಾದಾರ್ ತಮ್ಮ ಮಿಕ್ಕ ಕೆಲಸಗಳ ಕಡೆಗೆ ಗಮನವನ್ನು ಹರಿಸಿದ್ದರು. ಆಕಳಿಸಿ ಒಮ್ಮೆ ಮೈಮುರಿದೆದ್ದ ಸೂರ್ಯ ಠಾಣೆಯ ಹೊರಕ್ಕೆ ಬಂದು ನಿಂತ, ಶರಾಯಿ ಕಿಸೆಗಳಿಗೆ ಕೈಗಳನ್ನು ತೂರಿಸಿದವನು ತಣ್ಣನೆಯ ಗಾಳಿಗೆ ಕ್ಷಣಕಾಲ ಮೈಯೊಡ್ಡಿ ನಿಂತ.

ಹತ್ತು ನಿಮಿಷಗಳ ತರುವಾಯ ಮತ್ತೆ ಒಳ ಬಂದ ಸೂರ್ಯ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಮೇಜಿನ ಮೇಲಿದ್ದ ಕಡತವನ್ನು ಮುಂದಕ್ಕೆ ಎಳೆದುಕೊಂಡ. ಅದರಲ್ಲಿ ಒಮ್ಮೆ ತನ್ನ ಚುರುಕು ಕಣ್ಣುಗಳನ್ನಾಡಿಸಿದವನು ತಲೆಯನ್ನು ಎತ್ತುತ್ತಾ 'ಜಮಾದಾರ್ ಸರ್, ಕಾಳೇಗೌಡ್ರ ಮಗಳು ಸಂಪೂರ್ಣ ಅವರ ಹೇಳಿಕೆಯನ್ನ ನಾನು ನಿಮ್ ರಿಪೋರ್ಟ್‌ಲ್ಲಿ ನೋಡ್ದೆ. ಆ ಹುಡುಗಿ ಪ್ರಕಾರ, ಕೊಲೆಯಾದ ದಿನ ಅವ್ಳು ತನ್ನ ಗೆಳತಿಯರ ಜೊತೆ ನಂದಿ ಬೆಟ್ಟದಲ್ಲಿ ಇದ್ಳು. ನಿಮ್ಮಿಂದ ಫೋನ್ ಆಕೆಗೆ ಹೋದ ಮೇಲೆ ಅಲ್ಲಿಂದ ಆ ಹುಡ್ಗಿ ಹಿಂತಿರುಗಿದ್ದು. Am I right Jamadar Sir?

"You are absolutely right Mr.Surya."

'ಜೊತೆಗೆ, ಸಿಮೆಂಟ್ ವ್ಯಾಪಾರಿ ವರ್ದೇಗೌಡ್ರ ಮಗ ಅಭಿಷೇಕ್ ಪ್ರೀತಿ, ಪ್ರೇಮ ಅಂತ ಹೇಳ್ಕೊಂಡು ಸಂಪೂರ್ಣಳ ಹಿಂದೆ ಬಿದ್ದಿದ್ದ ಅಂತೂ ನಿಮ್ ವರ್ದಿ ಹೇಳತ್ತೆ'.

'ಆ ಮಗಂಗೆ ಅವ್ಳ್ ಮೇಲೆ ಯಾಪಾಟಿ ಕಾಯಶ್ ಇತ್ತೂಂತ ಅಂದ್ರೆ, ನಿಮ್ ಅಪ್ಪ, ನಿಮ್ ಅಣ್ಣ ಎಲ್ರನ್ನೂ ಕೊಲೆ ಮಾಡಾದ್ರೂ ನಿನ್ನ ಲಗ್ನ ಆಗ್ತಿನಿ ಅಂತ ಬೆದರ್‍ಸಾನೆ ಆ ಮಗ. ಇದು ಆ ಸಂಪೂರ್ಣನೇ ಕೊಟ್ಟಿರೋ ಹೇಳ್ಕೆ. ಆದ್ರಿ ಸರ, ನಾ ಆ ಮಗನ್ನಾ, ಜೊತೆ ಅವ್ರ ತಂದೆ ವರದೇಗೌಡನ್ನ ಸಾಕಷ್ಟು ವಿಚಾರೆ ಮಾಡ್ದೆ ಸರ. ಒಂದು ಹೆಣ್ಣಿನ ಮೇಲಿನ ಮೋಹಕ್ಕೆ ಕಟ್ ಬಿದ್ದು ಆ ಮಗ ಹಂಗ ಒದರಾನೆ ಅಷ್ಟೆ ರೀ ಸರ. ನನ್ನ ಇನ್ವೆಸ್ಟಿಗೇಷನ್ ಪ್ರಕಾರ ಆ ಮಗ ನಿರ್ದೋಷಿ ಸರ. ಈ ವಿಚಾರದಾಗೆ ನಾ ನಿಮ್ಮ ನೂರ್ ಭಾಗ ಗ್ಯಾರಂಟಿ ಕೊಡ್ತೀನಿ ಸರ.

'ಐ.ಸಿ. ಇನ್ನು ನಮ್ಮ ಎರಡ್ನೇ ಅನುಮಾನಾಸ್ಪದ ವ್ಯಕ್ತಿ? ...ಕಾಳೇಗೌಡ್ರ ತಮ್ಮ ಬಸಪ್ಪ....ನಿಮ್ ವರ್ದೀ ಪ್ರಕಾರ, 'ಹಳೇ ದ್ವೇಷನಾ ಮುಂದಿಡ್ಕೊಂಡು ಬಸಪ್ಪ ಈ ಕೊಲೆಗಳ ಮಾಡಿರ್ಬ ಹುದುಂತ, ಅವ್ನ್ ಬಗ್ಗೆ ನಿಮ್ ವರ್ದಿ ಏನ್ ಹೇಳತ್ತೇ ಅಂದ್ರೆ, ಈ ಜಮದಗ್ನಿಪುರದಲ್ಲೇ ಬಾಡಿಗೆ ಮನೇನಲ್ಲಿ ವಾಸ ಇದ್ದ ಆ ಬಸಪ್ಪನ್ನ ಈ ಊರೇ ಬಿಟ್ ಓಡಿಸ್ಬೇಕಂತ ಹಠಕ್ಕೆ ಬಿದ್ದು, ಬಸಪ್ಪ ವಾಸ ಇದ್ದ ಆ ಮನೇನ ಕಾಳೇಗೌಡರೇ ಖರೀದಿ ಮಾಡಿ, ಮನೇನೂ ಖಾಲಿ ಮಾಡಿ ಹಳ್ಳಿ ಸೇರೋ ಹಂಗ್ ಮಾಡಿದ್ರೂ ಅಂತ....ಜೊತೆಗೆ ಅಷ್ಟೇ ಸಾಲ್ದಂಥ ಖರೀದಿ ಮಾಡಿರೋ ಆ ಮನೇನಲ್ಲಿ ಕಾಳೇಗೌಡ್ರು ಈಗ ವಾಸ ಮಾಡ್ತಾ ಇದಾರೇಂತ. ಅಂದ್ರೆ, ಈಗ ಸತ್ತು ಹೆಣ್ಣಾಗಿರೋ ಮನೆ. Am I right.?

Once again you are right Sir. And Mr.Basappa is not involved in this. ಜೊತೆಗೆ ದ್ವೇಷ ಸಾಧ್ಸೋ ಸ್ಥಿತೀಲಿ ಅನ್ನಿಲ್ಲ.. ಎಲ್ಲಕ್ಕಿಂತ ಹೆಚ್ಚಾಗಿ ಆ ಮಯಸ್ಸೂ ಅಲ್ಲ. ತುಂಬಾನೇ ಸಂಭಾವಿತ.

ಆದ್ರೆ, ಜಮಾದಾರ್ ಸಾರ್, ಅಪ್ಪ ಸಂಭಾವಿತ ಅಂದ್ಮಾತ್ರಕ್ಕೆ ಅವ್ನ್ ಮಗ, ಯಾಲ್ವನು? ನುಡಿದು ಒಮ್ಮೆ ವರದಿಯ ಕಡೆಗೆ ಕಣ್ಣು ಹಾಯಿಸಿದವನು, 'ಹಾಂ, ಪ್ರಕಾಶ, ಅವ್ನು ಕೂಡಾ ಸಂಭಾವಿತನಾಗಿರ್ಬೇಕೂಂತ ಯಾವ್ ಕಾನೂನು ಇಲ್ವಲ್ಲ' ಮುಗುಳ್ನಗೆಯೊಂದಿಗೆ ಕೇಳಿದ್ದ ಸೂರ್ಯ ತನ್ನ ಮಾತನ್ನು ಮುಂದುವರಿಸಿದ್ದ. "ಅವ್ನು ಕೂಡ ಸಾಕಷ್ಟೇ ಚಿಕ್ಕೋನು, ಅಂದ್ರೆ ಹದಿ ವಯಸ್ಸಿನವನು. ಅವ್ನಿಗೂ ಕೂಡ ಕೋಪ, ತಾಪ, ದ್ವೇಷ ಹಗೆತನ ಎಲ್ಲವೂ ಇರುತ್ತಲ್ವೇ?" 75 ವರ್ಷದ ಅಪ್ಪ ಬಸಪ್ಪ ಸಂಭಾವಿತ ಆದ ಮಾತ್ರಕ್ಕೆ 25 ವರ್ಷದ ಅವನ ಮಗನೂ ಕೂಡಾ ಅಷ್ಟೇ ಸಂಭಾವಿತನಾಗಿರಬೇಕೆಂದೇನಿಲ್ಲವಲ್ಲ? ಜೊತೆಗೆ, 'ಪಟ್ಟಣ ಬಿಟ್ಟು ಹಳ್ಳಿ ಸೇರೋ ಹಾಗೆ ಮಾಡಿದ ಅವನ ದೊಡ್ಡಪ್ಪ ಕಾಳೇಗೌಡನ ಮೇಲೆ ದ್ವೇಷವಿರಲಿಲ್ಲ ಅಂತ ಹ್ಯಾಗೆ ಹೇಳ್ತಿರಿ?

****

"ನಿಮ್ ವರ್ದಿ ಪ್ರಕಾರ ಇನ್ನು ಉಳ್ಕೊಳೋ ಮೂರ್ನೇ ಅನುಮಾನಾಸ್ಪದ ವ್ಯಕ್ತಿ, ಲಿಕ್ಕರ್ ವ್ಯಾಪಾರಿ ಶಂಭೂ ಗೌಡ"

"ಹೌದ್ರೀ ಸರ, ಕಾಳೇಗೌಡ್ರ ಬಿಸಿನೆಸ್ ಮುಂದೆ ಅವನ ಬಿಸಿನೆಸ್ ಸ್ವಲ್ಪ ಮಟ್ಟಿಗೆ ಡಲ್ಲಾಗಿ, ಕಾಳೇಗೌಡ್ರ ವ್ಯಾಗೆ ಆ ಮಗಂಗೆ ದ್ವೇಷ ಇದೇರಿ ಸರ, ಸಾಕಷ್ಟು ಸಲಾ ಇಬ್ರ ಮಧ್ಯೆ ಮಾತಿನ ಚಕಮಕಿ ಕೂಡ ನಡೆದೈತ್ರಿ ಸರ. ನಾನೇ ಒಮ್ಮೆ ಖುದ್ದಾಗಿ ಹೋಗಿ ಆ ಜಗ್ಳ ಬಿಡ್ಸೀನಿ ಸರ.... ಆದ್ರೆ, ಆ ಶಂಭೂ ಗೌಡ ಈ ಮಟ್ಟದ ನೀಚ ಕೆಲ್ಸ ಮಾಡೋನಲ್ರೀ ಸರ. ಈ ಕೊಲೆಗಳು ನಡ್ದಾಗ ಆ ಮಗ ಶಂಭೂ ಗೌಡ ಮೈಸೂರಾಗಿದ್ದ ರಿ ಸರ."

ಜಮಾದಾರ್ ಮಾತುಗಳನ್ನು ತದೇಕಚಿತ್ತನಾಗಿ ಆಲಿಸುತ್ತಿದ್ದ ಸೂರ್ಯ ಬಹುಶಃ ಹದಿನೈದು ನಿಮಿಷಗಳ ಕಾಲ ಮೌನವಾದ. ಅವನ ತಲೆಯಲ್ಲಿ ಯೋಚನೆಗಳು ಚಕ್ರಾಕಾರವಾಗಿ ಸುತ್ತುತ್ತಿದ್ದವು.

ಈಗ ಒಮ್ಮೆಲೇ ತಲೆ ಎತ್ತಿ, ದುರ್ದಾನ ತೆಗೆದುಕೊಂಡವನಂತೆ, ದಡಕ್ಕನೇ ಮೇಲೆದ್ದವನು, 'ಜಮಾದಾರ್, ಈ ತ್ರಿವಳಿ ಕೊಲೆಗಳನ್ನು ಮಾಡಿದವನು ಬೇರೆ ಯಾರೂ ಅಲ್ಲಾ, ಆ ನಿಮ್ಮ ಸಂಭಾವಿತ ಬಸಪ್ಪನ ಮಗ ಪ್ರಕಾಶ. ಮೊದ್ಲು ಅವನ್ನ ಒದ್ದು ಎಳೆದು ತನ್ನಿ'

"ಏನೀ ಸರ:

"ಹೌದು. ಈ ಪ್ರಕರಣಕ್ಕೆ ನಾನು ಮಂಗಳ ಹಾಡ್ತಿನಿ. You better arrange for his arrest immediately. I am very sure that If you subject him to severe interrogation, the truth will come out from him only.....Don't be so surprised. Please do as I said."

."ಖರೇ ಏನ್ರೀ ಸೂರ್ಯ?!.....ಇಷ್ಟ್ ಲಗೂನ?!" ಕೇಳಿದರು.

"ಹೌದು:

"ಸ್ವಲ್ಪ ಬಿಡಿಸಿ ಹೇಳಲಾ"

"ಬಿಡಿಸಿ ಹೇಳೋಂತದ್ದೇನು ಇಲ್ಲಾ ಜಮಾದಾರ್, Because, the matter is very simple....ಕಾಳೇಗೌಡ್ರ ಮನೇನ ಪ್ರವೇಶ ಮಾಡೋದಿಕ್ಕೆ ಇರೋದೇ Two door ಆ ಎರ್ಡೂ ಡೋರ್ಸ್, ಒಳ್ಗಿನಿಂದ್ಲೇ ಡೋರ್‌ಲಾಕ್ ಮೂಲ್ಕ ಲಾಕ್ ಆಗಿರೋದು ನಮ್ಮ ಗೋಚ್ರ ಆಗಿದೆ. ಅಂದ್ರೆ That front door was locked with the help of the key either from inside or from outside....... ಆ ಮೂರೂ ಜೀವಗಳು ಬರ್ಬರವಾಗಿ ಹತ್ಯೆ ಆಗಿರೋ ರೀತಿನ ಗಮ್ನಕ್ಕೆ ತೊಗೊಂಡ್ರೆ, ಅದು 'ದ್ವೇಷ'ಕ್ಕಾಗಿ ಮಾಡಿರೋ ಕೊಲೆಗಳು ಅಂತ ನಮ್ ಇಲಾಖೇಲಿ ಕೆಲ್ಸ ಮಾಡೋ ಯಾರ್ಬೇ ಕಾದ್ರೂ ಊಹೆ ಮಾಡ್ತಾರೆ. Because, ಶಂಭೂ ಗೌಡ ಯಾರ್ಗಾದ್ರು 'ಹಫ್ತಾ' ಕೊಟ್ಟು ಕೊಲೆಗಳ ಮಾಡ್ಸಿದಾನೆ ಅಂತೂ ಹೇಳೋದಿಕ್ಕೆ ಖಂಡಿತಾ ಆಗಲ್ಲ"

"ಅ ಸರ, ಅಷ್ಟೊಂದು ನಿಖಾಗಿ ಹ್ಯಾಗ್ ಒದರ್‍ತಾ ಇದೀರಿ?"

"Because, 'ಹಫ್ತಾ' ತೊಗೊಳ್ಳೋ ಭೂಗತ ಲೋಕ್ದೋರು ಈ ರೀತೀಲಿ ಕೊಲೆಗಳ ಮಾಡೋದಿಲ್ಲ ಅನ್ನೋದು, ನನ್ಗ-ನಿಮ್ಗ ಗೊತ್ತಿರೋ ವಿಚಾರ್ವಷ್ಟೇ ಅಲ್ವೇ, ಸಾಕಷ್ಟು ಬಾರಿ ನಮ್ ಇಲಾಖೆ ಅನುಭವಕ್ಕೂ ಸಹ ಬಂದಿದೆ. Because, they too have some methods of their own!...... ಇನ್ನು ನಮ್ಮ ಈ ವರ್ದೇಗೌಡ್ರ ಮಗ ಅಭಿಷೇಕ್, ಆ ದಿನ ಆ ಗಳ್ಗೇಲಿ ಭಾವೋದ್ರೇಕ್ದಂದ ಜೊತ್ಗೆ, ಒಂದು ಹೆಣ್ಣಿನ ಮೇಲಿನ ವ್ಯಾಮೋಹ್ದಿಂದ ದುಡ್ಕಿ ಆಡಿರೋ ಮಾತ್ಗಳು ಅಷ್ಟೆ ಅವು."

"ಇನ್ನೂ ಕೂಡಾ ನಿಮ್ ಮಾತು ನಂಗ ಅರ್ಥ ಆಗ್ಲಿಲ್ರೀ ಮಿಸ್ಟರ್ ಸೂರ್ಯ" ಪೆಚ್ಚಾಗಿ ನುಡಿದಿದ್ದರು.

"ನೋಡಿ ಜಮಾದಾರ್, ನಿಮ್ ವರ್ದೀ ಪ್ರಕಾರ ಕಾಳೇಗೌಡ್ರು ಹಠಕ್ಕೆ ಬಿದ್ದು ಬಸಪ್ಪ ಹಿಂದೆ ವಾಸ ಮಾಡ್ತಾ ಇದ್ದ ಮನೇನೇ ಖರೀದಿ ಮಾಡಿ ಅದ್ರಲ್ಲೇ ಈಗ ಪ್ರಸ್ತುತ ವಾಸ ಇರೋದು ಅಂತ. ಹೌದಾ? ಜೊತೆಗೆ, ಅದೇ ಮನೇನಲ್ಲೇ ಈಗ ಕೊಲೆಗಳು ಕೂಡಾ ಆಗಿರೋದು. ಹೌದಲ್ವ?"


"ಹೌದ್ರ:

"ಆದ್ರೆ, ಬಸಪ್ಪ ತಾನು ಆ ಮನೆ ಖಾಲಿ ಮಾಡ್ದಾಗ ಎಲ್ಲಾ ಕೀಲಿಗಳ ಅದರ ಮಾಲೀಕರಿಗೆ ಕೊಡ್ವಾಗ ಪ್ರಾಯಶಃ ಅಷ್ಟೇ ಗೊತ್ತಿಲ್ದೇ ಉಳಿದ ಇನ್ನೊಂದ್ ಕೀಲಿನ ಕೊಡೋದು ಮರ್ತಿದಾನೆ. ಬಹುಶಃ ಅದು ಆ ಪ್ರಕಾಶಂಗೂ ಸಹ ಗೊತ್ತಿದೆ. ಅಲ್ಲಿಗೆ ಆ ಮನೆಗೆ ಸಂಬಂಧ ಪಟ್ಟಾಗೆ ಒಟ್ಟು ಮೂರು ಕೀಲಿಗಳಿವೆ. ಜೊತೆಗೆ ಆ ಮೂರ್ನೇ ಕೀಲಿ ಮೋಸ್ಟ್ಲೀ ಪ್ರಕಾಶ ಸುಪರ್ದಿನಲ್ಲೇ ಇತ್ತೂಂತ ಕಾಣತ್ತೆ. ಆ ಕೀಲಿನೇ ಉಪ್ಯೋಗ್ಸಿ ಈ ಕೆಲ್ಸ ಮಾಡಿದಾನೆ......ಆ ಮನೆ ಮಾಲೀಕ್ರು ಕಾಳೇಗೌಡ್ರಿಗೆ ಮನೇನ ಮಾರ್ವಾಗ, ಉಳಿದ ಆ ಎರ್ಡು ಕೀಗಳಷ್ಟೇ ಕೊಟ್ಟಿರೋದು. ಅಂದ್ರೆ,

ಬಸಪ್ಪ ಎಷ್ಟು ಕೀಗಳ ಕೊಟ್ನೋ ಅಷ್ಟನ್ನ ಮಾತ್ರ ಕಾಳೇಗೌಡ್ರಿಗೆ ಕೊಟ್ಟಿರೋದು.... ಇದ್ರಲ್ಲಿ ಪ್ರಕಾಶಂಗೆ ಅನ್ಕೂಲ ಆಗೀರೋ ಇನ್ನೊಂದ್ ವಿಚಾರ ಏನೂಂದ್ರೆ ಕೊಲೆಗಳಾದ ಸಮಯದಲ್ಲಿ, ಒಳ್ಗಿನಿಂದ ಡೋರ್ ಲಾಕ್ ಮಾತ್ರ ಹಾಕಿದೆ. ಆದ್ರೆ, ಅಗುಳಿ ಹಾಕಿಲ್ಲ. ಇದನ್ನ ನಿಮ್ ರಿಪೋರ್ಟ್ ಕೂಡಾ ಹೇಳತ್ತೆ. ಅಕಸ್ಮಾತ್ ಆ ಅಗುಳಿ ಏನಾದ್ರೂ ಹಾಕಿದ್ದಿದ್ರೆ, ಪ್ರಕಾಶ ಯಾವ್ರೀತಿ ಮುಂದ್ವರಿತಾ ಇದ್ದ ಅನ್ನೋದ್ನ ಅವ್ನನ್ನೇ ಕೇಳ್ಬೇಕು... ಯಾಕಂದ್ರ, ಕೊಲೆ ಮಾಡ್ಲೇಬೇಕು ಅಂತ ತೀರ್ಮಾನ ಮಾಡಿ ಹೆಜ್ಜೆ ಇಡೋರು, ಯಾವತ್ತೂ ಸುಮ್ಮೆ ಹಿಂದಿರ್ಗೋದಿಲ್ಲ. ಆ ಕ್ಷಣದಲ್ಲೇ ಪರ್ಯಾಯವಾಗಿ ಮತ್ತೊಂದು ದಾರಿನ ಹುಡ್ಕೇ ಹುಡ್ಕತಾರೆ.

ಸೂರ್ಯನ ಸುದೀರ್ಘವಾದ ಒಕ್ಕಣೆಯನ್ನು ಆಲಿಸುತ್ತಿದ್ದ ಅಲ್ಲಿನ ಎಲ್ಲಾ ಸಿಬ್ಬಂದಿ ವರ್ಗವು ಸ್ಥಂಭೀಭೂತರಾಗಿ ನಿಲ್ಲಬೇಕಾಯಿತು.

"ಪ್ರಕಾಶ, ಮುಂದಿನ ಬಾಗ್ಲಿಂದ್ಲೇ ಪ್ರವೇಶ ಪಡ್ಕೊಂಡಿದಾನೆ. ತನ್ ಕೆಲ್ಸ ಆದ್ಮಲೆ, ಮತ್ತೆ ಡೋರ್‌ಲಾಕ್ ಮಾಡ್ಕೊಂಡು ಹೋಗಿದಾನೆ" ತನ್ನ ಮಾತನ್ನು ಮುಂದುವರಿಸಿದ ಸೂರ್ಯ, "ನೋಡಿ ಜಮಾದಾರ್, ಇದ್ರಿಂದ ಎಲ್ರೂ ಕಲೀಬೇಕಾದ್ದು ಏನಂದ್ರೆ, ಯಾವ್ ಗಳ್ಗೇಲೂ ಕೂಡಾ ಮನೆಗಳ ಖರೀದಿ ಮಾಡೋ ಸಂದರ್ಭಗಳಲ್ಲಿ ಅಥವಾ ಬಾಡ್ಗೆಗೆ ಉಪ್ಯೋಗ ಮಾಡೋ ಸಂದರ್ಭಗಳಲ್ಲಿ ಮುಂಜಾಗ್ರತೆ ಕ್ರಮವಾಗಿ ಮನೆಯ ಎಲ್ಲಾ ಲಾಕ್‌ಗಳ್ನ... ಅದ್ರಲ್ಲೂ ಫ್ರಂಟ್ ಡೋರ್‌ಲಾಕ್ ಮಾತ್ರ ಯಾವ್ದೇ ಮುಲಾಜಿಲ್ದೆ ಚೇಂಜ್ ಮಾಡ್ಬೇಕು. ಇಲ್ದೇ ಇದ್ರೆ ಇಂತಾ ಅನಾಹುತ್ಗಳು ಆಗೇ ಆಗತ್ತೆ. I think this is a good lesson to the public. ಆದ್ರೆ, ಇದ್ನ ಜನಗಳ ಗಮ್ನಕ್ಕೆ ಹ್ಯಾಗ್ ತರ್ತೀರೋ ಅದು ನಿಮ್ಗೆ ಬಿಟ್ಟಿದ್ದು ಮಿಸ್ಟರ್ ಜಮಾದಾರ್.? ■



ವಾರಭವಿಷ್ಯ

27.04.2025 ರಿಂದ 03.05.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ಕಟಕ, ಬುಧ - ಮೀನ, ಗುರು-ವೃಷಭ, ಶುಕ್ರ-ಮೀನ, ಶನಿ-ಮೀನ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರದ ಆದಿಗೆ ಚಂದ್ರ-ಗುರು ಸಂಯೋಗ ಶುಭ ಸ್ಥಾನದಲ್ಲಿ ಇರುವ ಪರಿಣಾಮ ಉನ್ನತ ಅಧಿಕಾರಿಗಳೊಂದಿಗೆ ಸಂವಹನ ನಡೆಸಲು, ನಿಮ್ಮ ಕೆಲಸಗಳನ್ನು ಕಾರ್ಯಗತ ಮಾಡಿಕೊಳ್ಳಲು ಪ್ರಶಸ್ತವಾಗಿದೆ. ಉಚ್ಚ ಚಂದ್ರನ ಪ್ರಯಾಣದಿಂದ ನಿಮ್ಮ ಮನಸ್ಸಿಗೆ ಮುದ ನೀಡುವಂತಹ ಪ್ರಸಂಗಗಳು ನಡೆಯುವುದು. ಮುತ್ತು, ಹವಳ, ವ್ಯಾಪಾರಿಗಳಿಗೆ ಭರಪೂರ ಲಾಭವಾಗುವುದು. ಸ್ನೇಹಿತರೊಂದಿಗೆ ವಿವಾದಗಳು ಬೇಡಿ.

ಶ್ರೀ ದುರ್ಗಾ ಪೂಜೆ, ಶುಭ ಸಂಖ್ಯೆ-4

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕುಟುಂಬ ಜೀವನ ಸಾಮಾನ್ಯಕ್ಕಿಂತ ಉತ್ತಮವಾಗಿ ಕಾಣುತ್ತಿದೆ. ಕೋರ್ಟು ಕೇಸುಗಳಲ್ಲಿ ಅನುಕೂಲಗಳನ್ನು ನಿರೀಕ್ಷಿಸಬಹುದು. ಆದರೆ ಇತರೆ ಸರ್ಕಾರಿ ಕೆಲಸಗಳಲ್ಲಿ ಹಿನ್ನಡೆ ಉಂಟಾಗುವುದು. ದುಡುಕು ಮಾತಿನಿಂದ ಸಮಸ್ಯೆಯನ್ನು ಎದುರಿಸಬೇಕಾಗುವುದು. ಪಾಲುದಾರಿಕೆ ವ್ಯವಹಾರಗಳಲ್ಲಿ ಭಿನ್ನಾಭಿಪ್ರಾಯಗಳಿಂದ ನಷ್ಟ ಉಂಟಾಗುವುದು. ವಾರಾಂತ್ಯಕ್ಕೆ ಸತ್ಸಂಗದಿಂದ ಮಾನಸಿಕ ನೆಮ್ಮದಿ.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ನಿಮ್ಮ ಕುಲಾಚಾರ ವಿಚಾರಗಳನ್ನು ಪಾಲಿಸುವಿರಿ. ಪ್ರತಿದಿನ ಮಧುರ ಆಹಾರ ಸೇವನೆ. ನೆರೆಹೊರೆ ಹಾಗೂ ಬಂಧು-ಮಿತ್ರರ ಜೊತೆಗೆ ಪ್ರೀತಿ-ವಿಶ್ವಾಸಗಳು ವೃದ್ಧಿಸುವುದು. ಮನೆಯಲ್ಲಿ ನಡೆಯುವ ಶುಭ ಕಾರ್ಯಗಳಿಗೆ ಹಣ ವ್ಯಯವಾಗುವುದು. ಗೋವು ಮಾರಾಟದಿಂದ ದೂಷಣೆಗೆ ಗುರಿಯಾಗುವಿರಿ. ಕೃಷಿಯಲ್ಲಿ ಅಲ್ಪಫಲ. ವಾರಾಂತ್ಯಕ್ಕೆ ಚಿತ್ತ ಚಾಂಚಲ್ಯತೆ. ಸ್ತ್ರೀ ಮೂಲಕ ಹಾನಿ.

ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ-9

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ದೇಹಸೌಖ್ಯ, ನೂತನ ಉದ್ಯೋಗವನ್ನು ಅರಿಸಿಕೊಳ್ಳುವಿರಿ. ಚಿಂತಿಸಿದ ಕಾರ್ಯದಲ್ಲಿ ಸಫಲತೆಯನ್ನು ಹೊಂದುವಿರಿ. ಸುತ್ತಮುತ್ತಲಿನ ಜನ, ಬಂಧು-ಮಿತ್ರರ ಜೊತೆಗೆ ಉತ್ತಮ ಬಾಂಧವ್ಯವನ್ನು ಮುಂದುವರೆಸಿ. ಹೋಟೆಲ್, ಟ್ರಾವೆಲ್ಸ್ ಏಜೆನ್ಸಿಯವರಿಗೆ ಉತ್ತಮ ಲಾಭ ದೊರಕುವುದು. ನಿಮ್ಮ ರಾಶ್ಯಾಧಿಪತಿ ಚಂದ್ರನ ಪ್ರಭಾವದಿಂದ ಸದ್ಬುದ್ಧಿಯಿಂದ ಜನಾನುರಾಗಕ್ಕೆ ಪಾತ್ರರಾಗುವಿರಿ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-5

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ದೈನಂದಿನ ಕೆಲಸಗಳು ನೀವಂದುಕೊಂಡಂತೆ ಸಾಗುವುದು. ಮಹಾಸೌಖ್ಯ, ದುಃಖ ನಾಶ, ಬಂಧು-ಮಿತ್ರರ ಸಮಾಗಮ, ಸಣ್ಣಮಟ್ಟ 'ಪಾರ್ಟಿ'ಗಳು ಏರ್ಪಡುವುದು. ರಾಜದರ್ಶನದಿಂದ ಧನಲಾಭ. ಸರ್ಕಾರಿ ನೌಕರರಿಗೆ ಪದೋನ್ನತಿಯೊಂದಿಗೆ ವರ್ಗಾವಣೆ, ಹಿರಿಯ ಅಧಿಕಾರಿಗಳ ಒಲವು ಹೆಚ್ಚಾಗುತ್ತದೆ. ಪಿತ್ರಾರ್ಜಿತ ಆಸ್ತಿ ವಿಭಾಗ ವಿಷಯದಲ್ಲಿ ಮನೆಯಲ್ಲಿ ಒಮ್ಮತ ಮೂಡದೆ ಅಸಮಾಧಾನ.

ಶ್ರೀ ಸೂರ್ಯಾಷ್ಟಕ ಪಠಿಸಿ, ಶುಭ ಸಂಖ್ಯೆ-1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಮಕ್ಕಳ ಸಾಧನೆಯಿಂದ ಹರ್ಷ. ಸುವರ್ಣದಲ್ಲಿ ಬಂಡವಾಳ ಹೂಡಿಕೆ ಮಾಡಬಹುದು. ಪ್ರೇಮ-ಪ್ರೀತಿ ಪ್ರಸಂಗಗಳಲ್ಲಿ ಸಂತಸ ದೊರೆಯುವುದು. ಸತಿ-ಪತಿಯರು ಪರಸ್ಪರ ಸೋತು ಗೆದ್ದರೆ ಗೃಹದಲ್ಲಿ ಶಾಂತಿ ನೆಲೆಸುವುದು. ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನಕ್ಕೆ ಪಾತ್ರರಾಗುವಿರಿ. ಕೇತು-ರಾಹು ಮಾರಕರಾಗಿದ್ದು, ದುಡುಕು ಮಾತು, ಆತುರದ ವಾಹನ ಚಾಲನೆ ತೊಂದರೆಗೆ ಆಹ್ವಾನ ಕೊಟ್ಟಂತೆ.

ಶ್ರೀ ಮನ್ನಾರಾಯಣ ನಾಮ ಜಪ. ಶುಭ ಸಂಖ್ಯೆ-2

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಗುರುಗ್ರಹ, ಶನಿ ಗ್ರಹಗಳು ಶುಭ ಭಾವದಲ್ಲಿ ಸಂಚರಿಸುತ್ತಿದ್ದು ಋಣ ಮುಕ್ತತೆ, ಶತ್ರು ನಿಗ್ರಹ, ರೋಗ ನಿವೃತ್ತಿಗಳಂತಹ ಶುಭಫಲಗಳನ್ನು ನಿರೀಕ್ಷಿಸಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಸ್ತ್ರೀಯರಿಂದ ವಸ್ತ್ರಾಭರಣ ಖರೀದಿ. ವಾರಾಂತ್ಯಕ್ಕೆ ಜಾತ್ರಾ ಉತ್ಸವಾದಿಗಳಲ್ಲಿ ಭಾಗವಹಿಸುವುದರಿಂದ ಧನ್ಯತಾಭಾವ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-7

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ಅವಕಾಶ ಒದಗಿ ಬಂದಿದೆ. ನೀವು ಹೊಸ ಉದ್ಯೋಗವನ್ನು ಕಂಡುಕೊಳ್ಳುವ ಸಾಧ್ಯತೆಯೂ ಇದೆ. ಕೌಟುಂಬಿಕ ವಿಚಾರಗಳಲ್ಲಿ ಉಂಟಾಗಿದ್ದ ವಿವಾದಗಳು ದೂರವಾಗಲಿವೆ. ಸತಿ-ಪತಿಯರು ಪರಸ್ಪರ ಸೋತು ಗೆಲ್ಲಿ. ಜಲಜನ್ಯ ವಸ್ತು ವ್ಯಾಪಾರಿಗಳಿಗೆ ಕೈ ತುಂಬಾ ಸಂಪಾದನೆ ಆಗುವುದು. ಮಕ್ಕಳ ವಿದ್ಯಾಭ್ಯಾಸದ ಖರ್ಚುಗಳು ಎದುರಾಗುವುದು.

ಶ್ರೀ ಗಣಪತಿ ಸೇವೆ, ಶುಭ ಸಂಖ್ಯೆ-8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಬಯಸಿದ ಕಾರ್ಯಗಳು ಸಫಲವಾಗದೆ ಮನಸ್ಸಿಗೆ ಕಳವಳ. ಶಾರೀರಿಕವಾಗಿ ಸೋಮಾರಿತನ. ರಾಹು-ಕೇತುಗಳ ಅಶುಭರಿದ್ದು ಹಣದ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆ. ವಾರದ ಉತ್ತರಾರ್ಧಕ್ಕೆ ವಸ್ತ್ರ ಲಾಭ ಧನ-ಧಾನ್ಯ ಲಾಭ. ಮನಸ್ಸಿನಲ್ಲಿ ಧೈರ್ಯ, ಸ್ವಬುದ್ಧಿಯಿಂದ ಕೆಲಸ ಪ್ರಾರಂಭಿಸಿ ಅದರಲ್ಲಿ ಯಶಸ್ಸು ಸಿಗುವುದು. ಸಮಾಜ ವಿರೋಧಿ ವ್ಯಕ್ತಿಗಳಿಂದ ದೂರವಿರಿ.

ಶ್ರೀ ಗುರುರಾಯರ ಪಾದಸೇವನೆ, ಶುಭ ಸಂಖ್ಯೆ-6

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಗುರು ಕೃಪೆಯಿಂದ ಕಷ್ಟವಾದ ಕೆಲಸವನ್ನು ಸಾಧಿಸಿಕೊಳ್ಳುವಿರಿ. ಶರೀರ ಪೋಷಣೆ ಮಾಡಿಕೊಳ್ಳುವಿಕೆ. ಬಂಧುಗಳ ಮೂಲಕ ಸೌಖ್ಯ, ದೇಹಬಾಧೆ ಕಳೆದು ಆರೋಗ್ಯ ಮರುಕಳಿಸುವುದು. ಬುದ್ಧಿ, ಪರಾಕ್ರಮಗಳಿಗೆ ನಿಮ್ಮ ಕೆಲಸಗಳು ಹಗುರಾಗುವುದು. ಗುರು ಜನರ ಭೇಟಿಯಿಂದ ಮಾರ್ಗದರ್ಶನ ದೊರಕುವುದು. ಧಾರ್ಮಿಕ ಆಚಾರ-ವಿಚಾರಗಳನ್ನು ಪಾಲಿಸುವುದರಿಂದ ಮಾನಸಿಕ ನೆಮ್ಮದಿ.

ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ-5

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ದ್ರವ್ಯಲಾಭ, ಮನೋವಾಂಛಿತ ಕೆಲಸಗಳು ಸರಾಗವಾಗಿ ಸಾಗುವುದು. ಕೈ ಕೆಸರಾದರೆ ಬಾಯಿ ಮೊಸರು. ಸತಿ-ಸುತರ ಸಹಕಾರವೂ ದೊರಕುವುದು. ಪ್ರತಿಭಾವಂತರಿಗೆ ಸೂಕ್ತ ಸ್ಥಾನಮಾನ ಲಭಿಸುವುದು. ನಿಮ್ಮ ಸಾಹಸ ಪ್ರವೃತ್ತಿಯ ಫಲವನ್ನು ಅನುಭವಿಸುವಿರಿ. ಶನಿ-ರಾಹು ಸಂಯೋಗವಿದ್ದು ಪ್ರಯಾಣಗಳಲ್ಲಿ ಆಪತ್ತು, ಕಳ್ಳಕಾಕರಿಂದ ಎಚ್ಚರವಾಗಿರಿ.

ಶ್ರೀ ಮಾರುತಿ ಉಪಾಸನೆ, ಶುಭ ಸಂಖ್ಯೆ-3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ವಾರದಲ್ಲಿ ನಿರೀಕ್ಷೆಯಂತೆ ಹಣ ಕೈ ಸೇರಿದರೂ ಬರಿಗೈ ಆಗಲು ಕ್ಷಣಮಾತ್ರ ಧನಲಾಭ, ಮನಸ್ಸಿಗೆ ಸೌಖ್ಯ, ಉತ್ತಮ ಸ್ತ್ರೀ ಸಂಗ. ಉದ್ದೇಶವಿಲ್ಲದ ಸಂಚಾರಗಳು, ಕೃಷಿಯಲ್ಲಿ ನಿರೀಕ್ಷಿತ ಫಸಲು ದೊರೆಯದು. ನಿಮ್ಮ ರಾಶಿಯಲ್ಲಿ ಚತುರ್ಗ್ರಹ ಯುದ್ಧವಿರುವ ಕಾರಣ ಬಂಧುಮಿತ್ರರ ಜೊತೆಗೆ ವೈರತ್ವ ಉದ್ಯೋಗ ಭಂಗ, ದೇಹಪೀಡೆ, ವೈದ್ಯರ ಭೇಟಿ, ಔಷಧೋಪಚಾರಕ್ಕೆ ಹಣ ವಿನಿಯೋಗ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4

ಉಗ್ರರ ಕೃತ್ಯ ಖಂಡಿಸಿ ಸರಗೂರಿನಲ್ಲಿ ಪ್ರತಿಭಟನೆ


ಸರಗೂರಿನಲ್ಲಿ ಉಗ್ರರ ಕೃತ್ಯ ಖಂಡಿಸಿ ಭಾರಿ ಪ್ರತಿಭಟನೆ ನಡೆಸಲಾಯಿತು.

ಸರಗೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ಕೃತ್ಯವನ್ನು ಖಂಡಿಸಿ ಸರಗೂರು ಪಟ್ಟಣದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸರಗೂರು ನಾಗರೀಕ ಹಿತರಕ್ಷಣಾ ಸಮಿತಿ ಹಾಗೂ ಜಾಗೃತ ನಾಗರೀಕ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಶಾಂತಿಯುತ ಪ್ರತಿಭಟನಾ ಮೆರವಣಿಗೆಯಲ್ಲಿ ವರ್ತಕರ ಸಂಘ, ಹಿಂದೂಪರ ಸಂಘಟನೆ ಸೇರಿದಂತೆ ತಾಲೂಕಿನ ವಿವಿದ ಸಂಘ ಸಂಸ್ಥೆಗಳು, ವಾಹನ ಚಾಲಕರು, ಆಟೋ ಚಾಲಕರು ಭಾಗವಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಸಂತೆ ಮಾಸ್ತಮ್ಮನವರ ದೇವಸ್ಥಾನದಿಂದ ಬಸ್ ನಿಲ್ದಾಣದವರೆಗೆ ಶಾಂತಿಯುತ ಪ್ರತಿಭಟನೆ ನಡೆಸಿ ಮಾನವ ಸರಪಳಿ ರಚಿಸಿ ಮೃತರ ಅತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸಿಸಲಾಯಿತು. ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ತಾಲೂಕು ಆದಿಕರ್ನಾಟಕ ಮಹಾಸಭಾದ ಅಧ್ಯಕ್ಷ ಶಿವಣ್ಣ ಕಾಶ್ಮೀರದ ಪಹಲ್ಗಾವ್‌ನಲ್ಲಿ ನಡೆದ ಭಯೋತ್ಪಾದಕರ ಅಮಾನವೀಯ ಭೀಕರ ದಾಳಿಯು ದೇಶದ ಅಸ್ಮಿತೆಗೆ ಅಘಾತಕಾರಿ ಯಾದ ವಿಷಯವಾಗಿದೆ, ದಾಳಿಯಲ್ಲಿ ಮಡಿದವರ ಕುಟುಂಬದ ಆಕ್ರಂದನ ದೇಶವನ್ನೇ ಮೌನವಾಗಿಸಿದೆ, ಈ ಘೋರ ಕೃತ್ಯಗಳು ಮತ್ತೆ ಮರುಕಳಿಸಬಾರದು ಭಯೋತ್ಪಾದನೆಯಿಂದ ಏನನ್ನು ಸಾದಿಸಲು ಸಾಧ್ಯವಿಲ್ಲ. ಶಾಂತಿ ಸಹಬಾಳ್ವೆಯಿಂದ ಎಲ್ಲವನ್ನು ಸಾಧಿಸಬಹುದು ಎಂದರು,

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಲಕ್ಷ್ಮಣ್, ಹಿಂದೂಪರ ಮುಖಂಡರಾದ ರವಿಕುಮಾರ್ ಮಾತನಾಡಿದರು,

ವರ್ತಕರ ಸಂಘ ಹಿಂದೂಪರ ಸಂಘಟನೆ ಸೇರಿದಂತೆ ತಾಲೂಕಿನ ವಿವಿದ ಸಂಘ ಸಂಸ್ಥೆಗಳು ವಾಹನ ಚಾಲಕರು, ಆಟೋ ಚಾಲಕರು, ತಮ್ಮಗಳ ಕಾರ್ಯವನ್ನು ಸ್ಥಗಿತಗೊಳಿಸಿ ಬೆಳಿಗ್ಗೆ 10 ಗಂಟೆಯಿಂದ ಮದ್ಯಾಹ್ನ 1 ಗಂಟೆಯವರೆಗೆ ಅಂಗಡಿ ಬಂದ್ ಮಾಡಿ ಎಲ್ಲರೂ ಶಾಂತಿಯುತ ಪ್ರತಿಭಟನೆ ಹಾಗೂ ಶ್ರದ್ಧಾಂಜಲಿಯಲ್ಲಿ ಭಾಗವಹಿಸಿದ್ದರು,

ಪ್ರತಿಭಟನೆಯಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಮಾಜಿ ಅಧ್ಯಕ್ಷ ಹಂಚೀಪುರ ಗುರುಸ್ವಾಮಿ, ಸಿ.ಕೆ.ಗಿರೀಶ್, ತಾಲೂಕು ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಜಿಲ್ಲಾ ಕಾರ್ಯದರ್ಶಿ ಎಂ.ಪಿ.ಮಂಜುನಾಥ್, ಉಪಾಧ್ಯಕ್ಷ ಬಸವಣ್ಣ, ವರ್ತಕರ ಸಂಘದ ಅಧ್ಯಕ್ಷ ಎಸ್.ಪಿ.ಪ್ರಸಾದ್, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ವಿನಾಯಕಪ್ರಸಾದ್, ನೂರಾಳಸ್ವಾಮಿ, ಹಿಂದೂಪರ ಮುಖಂಡರಾದ ರವಿಕುಮಾರ್, ಚನ್ನಪ್ಪನಾಯಕ, ಶ್ರೀವತ್ಸ, ಮುಖಂಡರಾದ ಎಸ್.ಎನ್.ಮೋಹನ್ ಕುಮಾರ್, ನವೀನ್, ರಾಮು, ಗುರು, ಗ್ರಾಮೀಣ ಮಹೇಶ್, ಸರಗೂರು ಕೃಷ್ಣ ದಾಸಪ್ಪ ಎಸ್.ಹೆಚ್.ರಮೇಶ್, ಮಕ್ ಫೀರಲ್ಲಾ, ಇಬ್ರಾಹಿಂ, ಮೈದೀನ್ ಸಾಬ್, ಟೈಲರ್ ಪಾಷ, ಉದಯ್ ಕುಮಾರ್, ಪೈಟ್ ನಾಗರಾಜು, ಅಭಿ, ರವಿಗೌಡ್ರು, ಇನ್ನಿತತರು ಬಾಗಿಯಾಗಿದ್ದರು, ಸರಗೂರು ಸಿಪಿಐ ಪ್ರಸನ್ನಕುಮಾರ್, ಪಿಎಸ್ಐ ಕಿರಣ್ ಕುಮಾರ್ ಸೂಕ್ತಬಂದೊ ಬಸ್ತು ಮಾಡಿದ್ದರು.

ಮೂರು ವರ್ಷವಾದರೂ ಬಗೆ ಹರಿಯದ ಭೂ ಸಮಸ್ಯೆ

ಮೈಮೇಲೆ ಸಗಣಿ ಸುರಿದುಕೊಂಡು ಪ್ರತಿಭಟನೆ



ಬೈಲಕುಪ್ಪೆ: ಕಳೆದ ಮೂರು ವರ್ಷಗಳಿಂದ ತಾಲೂಕು ಆಡಳಿತ ಕಚೇರಿ ಮುಂದೆ ತಾಲೂಕಿನ ಭೂ ಸಮಸ್ಯೆ ಸೇರಿದಂತೆ ಇತರೆ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಪ್ರತಿಭಟನೆ ಮಾಡುತ್ತಿದ್ದರೂ ಕೂಡ ಸಮಸ್ಯೆ ಬಗೆಹರಿಸಲು ನಿರ್ಲಕ್ಷ ವಹಿಸುತ್ತಿರುವ ತಾಲೂಕು ಆಡಳಿತದ ವಿರುದ್ಧ ಪ್ರತಿಭಟನಾ ನಿರತರು ಮೈಮೇಲೆ ಸಗಣಿ ಸುರಿದುಕೊಂಡು ಪ್ರತಿಭಟನೆ ನಡೆಸಿದರು.

ಕಳೆದ ಮೂರು ವರ್ಷಗಳಿಂದ ದಸಂಸ ಮುಖಂಡ ಸಿ.ಎಸ್.ಜಗದೀಶ್ ಮತ್ತು ಮುಮ್ಮಡಿ ಕಾವಲ್ ದೊಡ್ಡಯ್ಯ ನೇತೃತ್ವದಲ್ಲಿ ತಾಲೂಕಿನ ದಲಿತರ ಮತ್ತು ರೈತರ ಭೂ ಸಮಸ್ಯೆಗಳನ್ನು ಬಗೆಹರಿಸುವಂತೆ ಮತ್ತು ಗ್ರಾಮ ಪಂಚಾಯಿ ತಿಗಳಲ್ಲಿ ಆಗಿರುವ ಭ್ರಷ್ಟಚಾರವನ್ನು ತಡೆಗಟ್ಟು ವಂತೆ ಪ್ರತಿಭಟನಾ ಧರಣಿ ನಡೆಸಲಾಗುತ್ತಿತ್ತು.

ಸರ್ಕಾರ ಹಾಗೂ ಉಚ್ಚ ನ್ಯಾಯಾಲಯವು ಧರಾಖಸ್ತು ಮೂಲಕ ಬಂದಂತಹ ಜಮೀನನ್ನು ಪಕ್ಕ ಪೋಡು ದುರಸ್ತಿ ಸಂಬಂಧ ದುರಸ್ತಿ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುವಂತೆ ಅಧಿಕಾರಿಗ ಳಿಗೆ ಆದೇಶ ಮಾಡಿ ವರ್ಷಗಳೇ ಕಳೆದಿದೆ. ಆದರೆ ಈ ಆದೇಶಗಳನ್ನು ಗಾಳಿಗೆ ದೂರಿ ದಲಿತರಿಗೆ, ರೈತರಿಗೆ ಅಧಿಕಾರಿ ವರ್ಗ ತೊಂದರೆ ನೀಡುತ್ತಿದೆ. ಇದರಿಂದಾಗಿ ನಮ್ಮಗಳ ಹೆಸರಿಗೆ ದಾಖಲೆ ಮಾಡಿಸಿಕೊಳ್ಳಲು ಆಗದೆ, ಹಂಚಿಕೆ ಮಾಡಿಕೊಳ್ಳಲು ಆಗದೆ ಸಂಕಷ್ಟ ಅನುಭವಿಸಬೇಕಾಗಿದೆ. ಪ್ರತಿಭಟನಾಕಾರರು ದೂರಿದರು. ಪ್ರಭಾವಿಗಳು ಸರ್ಕಾರಿ ಕೆರೆ ಕಟ್ಟೆ ಗೋಮಾಳ ಜಾಗಗಳನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ. ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತರಲು ಅವಕಾಶ ಕೊಡಲು ನಿರಾಕರಿಸಿದ ಹಿನ್ನೆಲೆಯಲ್ಲಿ ನಾವು ಸಗಣಿ ಸುರಿದುಕೊಂಡು ಪ್ರತಿಭಟನೆ ನಡೆಸಿದ್ದೇವೆ ಎಂದರು.

ಮಂಗಳೂರು ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಹೆಚ್.ಡಿ.ಕೋಟೆಯ ಆದಿಚುಂಚನಗಿರಿ ಕಾಲೇಜು ವಿದ್ಯಾರ್ಥಿನಿ



ಹೆಚ್.ಡಿ.ಕೋಟೆ: ಮಂಗಳೂರಿನ ಯೆನೆಪೋಯ ವಿಶ್ವ ವಿದ್ಯಾನಿಲಯವು ಮೇ 15 ಮತ್ತು 16 ರಂದು ಆಯೋಜಿಸಿರುವ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಪಟ್ಟಣದ ಶ್ರೀಆದಿ ಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ಬಿಕಾಂ ವಿದ್ಯಾರ್ಥಿನಿ ಪ್ರಿಯಾಂಕ ಪಾಲ್ಗೊಳ್ಳಲಿದ್ದು, ಮೈಸೂರು ವಿಶ್ವವಿದ್ಯಾನಿಲಯ ಇವರನ್ನು ಎನ್‌ಎಸ್‌ಎಸ್ ಸ್ವಯಂ ಸೇವಕಿಯಾಗಿ ನಿಯೋಜಿಸಿದೆ.

ಸಮ್ಮೇಳನವು ಕ್ರಿಯಾತ್ಮಕ ಮತ್ತು ದೂರ ದೃಷ್ಟಿಯ ವೇದಿಕೆಯಾಗಿದ್ದು, ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರದ ಕುರಿತು ಚರ್ಚಿಸಲು ಮತ್ತು ವಿಶ್ವದಾದ್ಯಂತ ಯುವ ನಾಯಕರು, ಶಿಕ್ಷಣ ತಜ್ಞರು,ನೀತಿ, ನಿರೂಪಕರು ಮತ್ತು ತಜ್ಞರುಗಳನ್ನು ಒಟ್ಟುಗೂಡಿಸುವ ಉದ್ದೇಶವನ್ನು ಹೊಂದಿದೆ.

ಇಲ್ಲಿ ಮುಖ್ಯ ಭಾಷಣಗಳು, ಪ್ಯಾನಲ್ ಚರ್ಚೆಗಳು ಮತ್ತು ನೆಟ್‌ವರ್ಕಿಂಗ್ ಅವಕಾಶಗಳನ್ನು ಸಮ್ಮೇಳನವು ಒಳಗೊಂಡಿರುತ್ತದೆ. ಪ್ರಿಯಾಂಕ ಅವರನ್ನು ಶ್ರೀ ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಕಾರ್ಯದರ್ಶಿ ಸೋಮೇಶ್ವರನಾಥ ಸ್ವಾಮೀಜಿ, ಪ್ರೊ.ಕೆ.ಪಿ.ಬಸವೇಗೌಡ, ಪ್ರಾಂಶುಪಾಲರಾದ ಡಾ.ಜೆ. ಎನ್.ವೆಂಕಟೇಶ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ, ವಿದ್ಯಾರ್ಥಿಗಳು, ಅಧ್ಯಾಪಕ ವರ್ಗ ಹಾಗೂ ಸಿಬ್ಬಂದಿ ಅಭಿನಂದಿಸಿ ಶುಭ ಹಾರೈಸಿದ್ದಾರೆ.

ಅಂಬೇಡ್ಕರ್ ಸಂವಿಧಾನ, ಚಿಂತನೆಗಳನ್ನು ಉಳಿಸುವ ಅಗತ್ಯವಿದೆ


ಅಂಬೇಡ್ಕರ್ ಜಯಂತಿ ಅಂಗವಾಗಿ ಏರ್ಪಡಿಸಲಾಗಿದ್ದ ಜನಜಾಗೃತಿ ಸಮಾವೇಶದಲ್ಲಿ ಪಾಲ್ಗೊಂಡಿರುವ ಮುಖಂಡರು ಮತ್ತು ಗ್ರಾಮಸ್ಥರು.

ತಿ.ನರಸೀಪುರ ಏ 26– ಅಂಬೇಡ್ಕರ್ ಅವರ ಸಂವಿಧಾನದ ಆಶಯ, ಚಿಂತನೆಗಳನ್ನು ಬುಡಮೇಲು ಮಾಡುವ ಪ್ರಯತ್ನಗಳು ನಡೆಯುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಸಂವಿಧಾನ ಹಾಗೂ ಚಿಂತನೆಗಳನ್ನು ಉಳಿಸುವ ದಿಕ್ಕಿನಲ್ಲಿ ನಾವೆಲ್ಲರೂ ಜಾಗೃತರಾಗಬೇಕೆಂದು ದಲಿತ ಸಂಘರ್ಷ ಸಮಿತಿಯ ಹಿರಿಯ ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ ಕರೆ ನೀಡಿದರು.

ಪಟ್ಟಣದ ನಂಜನಗೂಡು ರಸ್ತೆಯಲ್ಲಿರುವ ಅಂಬೇಡ್ಕರ್ ಸಮುದಾಯ ಭವನದಲ್ಲಿ ಶನಿವಾರ ಡಾ.ಬಿ.ಆರ್.ಅಂಬೇಡ್ಕರ್‌ರವರ 134ನೇ ಜನ್ಮದಿನಾಚರಣೆಯ ಅಂಗವಾಗಿ ದಲಿತ ಸಂಘರ್ಷ ಸಮಿತಿ ಆಯೋಜಿಸಿದ್ದ "ಸ್ವಾತಂತ್ರ್ಯ ನಂತರ ಭಾರತದ 77 ವರ್ಷಗಳ ನಡೆಯಲ್ಲಿ ಸಂಕಿರಣಗೊಂಡ ಸಂವಿಧಾನದ ಆಶಯಗಳು ಕುರಿತ ಜನಜಾಗೃತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು ಪ್ರಸಕ್ತ ಸನ್ನಿವೇಶದಲ್ಲಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಹಾಗೂ ಸಂವಿಧಾನವನ್ನು ಬುಡಮೇಲು ಮಾಡುವ ಪ್ರಯತ್ನಗಳು ನಡೆದಿದೆ. ಇಂತಹ ಸಂದರ್ಭದಲ್ಲಿ ನಾವು ಸಂವಿಧಾನದ ಆಶಯಗಳು ಈಡೇರಿವೆಯೇ ಎಂಬುದರ ಬಗ್ಗೆ ವಿಮರ್ಶೆ ಮಾಡಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮತ್ತೋರ್ವ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಜಗತ್ತಿನ ಶೋಷಿತರ ಏಕೈಕ ವಿಮೋಚಕ ಡಾ.ಬಿ.ಆರ್.ಅಂಬೇಡ್ಕರ್ ಅವರಾಗಿದ್ದಾರೆ. ಅವರ ಹೋರಾಟದ ಫಲವಾಗಿ ಸಮಾಜದಲ್ಲಿ ತುಳಿತಕ್ಕೋಳಗಾಗಿದ್ದ ಕೋಟ್ಯಂತರ ಜನರು ಬದುಕನ್ನು ಕಟ್ಟಿಕೊಂಡು ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ. ಮಹಿಳೆರಿಗೂ ಕೌಟುಂಬಿಕ ಮತ್ತು ಸಮಾಜದಲ್ಲಿ ಸಮಾನ ಅವಕಾಶ 'ಕೊಡಬೇಕೆಂದು ಸಚಿವ ಹುದ್ದೆಯನ್ನೇ ತೊರೆದು, ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಹೋರಾಟ ನಡೆಸಿದ ಮಹಾ ಮಾನವತಾವಾದಿ ಅಂಬೇಡ್ಕರ್ ಎಂಬುದನ್ನು ಪ್ರತಿಯೊಬ್ಬರು ಅರಿಯಬೇಕು. ಸಂವಿಧಾನದ ಉಳಿವಿಗೆ, ಅಂಬೇಡ್ಕರ್‌ರವರ ಕನಸನ್ನು ನನಸಾಗಿಸುವ ದಿಕ್ಕಿನಲ್ಲಿ ನಾವೆಲ್ಲರೂ ಹೆಚ್ಚು ಸಂಘಟಿತರಾಗಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಮುಖ್ಯ ಭಾಷಣಕಾರರಾಗಿ ವಕೀಲರ ಬಿ.ಆರ್.ರಂಗಸ್ವಾಮಿ ಹಾಗೂ ಸಂಶೋಧನಾ ಸಹಾಯಕ ಪ್ರಾಧ್ಯಾಪಕಿ ಹೆಚ್.ಕೆ.ಕಲಾವತಿ ಅವರು ಅಂಬೇಡ್ಕರ್ ಚರಿತ್ರೆಯನ್ನು ತೆರೆದಿಟ್ಟು ಮಾತನಾಡಿದರು.

ದಸಂಸ ಜಿಲ್ಲಾ ಸಂ.ಸಂಚಾಲಕರಾದ ಶಂಭುಲಿಂಗಸ್ವಾಮಿ, ಹೆಗ್ಗನೂರು ನಿಂಗರಾಜು, ಬಿ.ಡಿ. ಶಿವಬುದ್ದಿ, ಉಪ ವಿಭಾಗೀಯ ಸಂಘಟನಾ ಸಂಚಾಲಕ ಮಂಜು ಶಂಕರಪುರ, ತಾಲೂಕು ಸಂಚಾಲಕರಾದ ಕುಕ್ಕೂರು ರಾಜು, ಯಾಚೇನಹಳ್ಳಿ ಸೋಮಶೇಖರ್, ಮುಖಂಡರಾದ ಆಲಗೂಡು ನಾಗರಾಜಮೂರ್ತಿ, ಶಾಂತಕುಮಾರ್, ಬನ್ನಹಳ್ಳಿಹುಂಡಿ ಉಮೇಶ್, ಕರೋಹಟ್ಟಿ ನಾಗೇಶ, ಹ್ಯಾಕನೂರು ಶಿವಕುಮಾರ್, ಆಟೋ ಮಹೇಶ್, ಸುಜ್ಜಲೂರು ಶಿವಯ್ಯ, ಕೊರಚರ ರಾಜು, ಕೃಷ್ಣಮೂರ್ತಿ ಬಸವಟ್ಟಿಗೆ, ರವಿ ಆಕಳ, ಸುರೇಶ್ ಸಿದ್ದೇಗೌಡನಹುಂಡಿ, ಗಜೇಂದ್ರ ಗೋಣಹಳ್ಳಿ, ಮರಿಸ್ವಾಮಿ ಸರಗೂರು, ಹೊಳೆಯಪ್ಪ ಏಚಗಳ್ಳಿ, ನಟರಾಜುಮಾಕನಪುರ, ಮಹೇಶ್ ಬೆಳಲೆ, ನಾಗರಾಜು ಹಗಿನವಾಳು, ಸೋನಹಳ್ಳಿ ಮಹಾದೇವಸ್ವಾಮಿ, ತಾಲೂಕಿನ ದಸಂಸ ಕಾರ್ಯಕರ್ತರು, ವಿದ್ಯಾರ್ಥಿಗಳು, ಯುವಕರು ಹಾಗೂ ಮಹಿಳೆಯರು ಸಮಾವೇಶದಲ್ಲಿ ಇದ್ದರು.

ಕ್ರೀಡೆಯಿಂದ ಆರೋಗ್ಯ, ಸಾಮರಸ್ಯ, ಬಾಂಧವ್ಯ ವೃದ್ಧಿ



ಎಂಎಲ್‌ಎ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಶಾಸಕ ದರ್ಶನ್ ದ್ರುವನಾರಾಯಣ್ ಚಾಲನೆ ನೀಡುತ್ತಿರುವುದು.

ನಂಜನಗೂಡು: ಕ್ರೀಡೆಗಳು ಎಲ್ಲಾ ಜನರನ್ನು ಒಂದೆಡೆ ಸೇರಿಸಿ ಎಲ್ಲರಲ್ಲೂ ಸಾಮರಸ್ಯ ಭಾವನೆ, ಬಾಂಧವ್ಯವನ್ನು ವೃದ್ಧಿಪಡಿಸುವುದರ ಜೊತೆಗೆ ಮನುಷ್ಯನ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು. ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಸರ್ಕಾರಿ ನೌಕರರು ಮತ್ತು ಜನಪ್ರತಿನಿಧಿಗಳ ನಡುವೆ ಏರ್ಪಡಿಸಲಾಗಿರುವ ಎಂಎಲ್‌ಎ ಕಪ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹೆಚ್ಚಿಸುತ್ತದೆ, ಅಲ್ಲದೆ ಶಿಕ್ಷಣವು ಮನುಷ್ಯನ ಜೀವನ ರೂಪಿಸಲು ಪ್ರಮುಖ ಪಾತ್ರವಹಿಸುವಂತೆ, ಕ್ರೀಡೆಯು ಸಹ ಮನುಷ್ಯನ ಯಶಸ್ಸಿನ ಮೂಲ ಮಂತ್ರವಾಗಿವೆ, ಆದ್ದರಿಂದ ಪ್ರತಿಯೊಬ್ಬರೂ ಪ್ರತಿದಿನ ಯಾವುದಾದರೂ ಒಂದು ಕ್ರೀಡೆಯಲ್ಲಿ ತೊಡಗಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಪ್ರತಿದಿನ ಜನರ ಸೇವೆಯಲ್ಲಿ ನಿರತರಾಗಿರುತ್ತಾರೆ, ಅವರನ್ನು ಕ್ರೀಡೆಗಳ ಮೂಲಕ ಒಂದೇ ವೇದಿಕೆಯಲ್ಲಿ ಸೇರಿಸಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ನಡುವೆ ಸಾಮರಸ್ಯ ಬಾಂಧವ್ಯ ಮೂಡಿಸುವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ, ಜೊತೆಗೆ ಪ್ರತಿಭೆಯನ್ನು ಪ್ರದರ್ಶನ ಮಾಡಲು ಉತ್ತಮ ವೇದಿಕೆ ಕಲ್ಪಿಸಿಕೊಡಲಾಗಿದೆ, ಇಂತಹ ಕ್ರೀಡಾ ಕೂಟಗಳು ಹೆಚ್ಚು ಹೆಚ್ಚು ಆಯೋಜನೆಗೊಳ್ಳಬೇಕು ಆಗ ನೌಕರರು ಮತ್ತು ಜನಪ್ರತಿ ನಿಧಿಗಳ ನಡುವೆ ಸಾಮರಸ್ಯ ವೃದ್ಧಿಗೊಳ್ಳಲಿದೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ ಶಾಸಕ ದರ್ಶನ್ ಧ್ರುವನಾರಾಯಣರವರು ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವ ಜೊತೆಗೆ ಕ್ರೀಡಾಕೂಟಗಳಿಗೂ ಹೆಚ್ಚಿನ ಆದ್ಯತೆ ನೀಡಿದ್ದಾರೆ ಎಂದರು.

ಮೂಳೆ ಮತ್ತು ಕೀಲು ತಜ್ಞರಾದ ಡಾ. ಶ್ರೀಕಾಂತ್ ಮಾತನಾಡಿ ನಂಜನಗೂಡು ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಕ್ರೀಡಾ ಇತಿಹಾಸವನ್ನು ಹೊಂದಿತ್ತು, ಇತ್ತೀಚಿನ ದಿನಗಳಲ್ಲಿ ಕ್ರೀಡಾಪಟುಗಳ ಆಸಕ್ತಿಯ ಕೊರತೆಯಿಂದಾಗಿ ಕ್ರೀಡೆಗಳು ನಶಿಸುತ್ತಿವೆ, ನಂಜನಗೂಡಿನ ಕ್ರೀಡೆಯ ಇತಿಹಾಸವನ್ನು ಮರುಕಳಿಸುವಂತೆ ಮಾಡಲು ಮತ್ತು ಕ್ರೀಡಾಸಕ್ತರಿಗೆ ಉತ್ತೇಜನ ನೀಡಲು ಇಂತಹ ಕ್ರೀಡಾಕೂಟಗಳು ಸಹಕಾರಿಯಾಗಲಿವೆ ಎಂದರು.

ಇದೇ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ. ಶಂಕರ್, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಎಸ್.ಸಿ.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ ಮುಖಂಡರಾದ ಕಳಲೆ ರಾಜೇಶ್, ದೊರೆಸ್ವಾಮಿ ನಾಯಕ, ನಾಗರಾಜಯ್ಯ, ಬದನವಾಳು ಸೋಮು, ಮಹದೇವು, ದೇಬೂರು ಅಶೋಕ್, ಕ್ರೀಡಾ ಆಯೋಜಕರಾದ ಎಂ.ಡಿ.ಬಾಲರಾಜು, ತಹಸೀಲ್ದಾರ್ ಶಿವಕುಮಾರ ಕಾಸ್ನೂರು, ತಾಪಂ ಇಒ ಜೆರಾಲ್ಡ್ ರಾಜೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ದೊಡ್ಡಮ್ಮ ತಾಯಿ ಪೂಜಾ ಮಹೋತ್ಸವ


ಕಂಪಲಾಪುರದಲ್ಲಿ ಶುಕ್ರವಾರ ದೊಡ್ಡಮ್ಮ ತಾಯಿ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಭಕ್ತರು ಹರಕೆ ತೀರಿಸಿ, ದೇವಿಯ ದರ್ಶನ ಪಡೆದು ಪುನೀತರಾದರು.

ಯುವಜನರ ಶಿಬಿರ

ಮೈಸೂರು, ಏ.26– ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ 28ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಯುವಜನರ (ಪದವೀಧರರು) ಶಿಬಿರ ಏರ್ಪಡಿಸಲಾಗಿದೆ.

ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಬಿ. ರಾಜೇಶ್ ಅವರನ್ನು ದೂ.ಸಂ. 0821–2548212, ಮೊ: 9964141560 ಸಂಪರ್ಕಿಸಬಹುದು.

ವಿಜೃಂಭಣೆಯ ಪಟ್ಲದಮ್ಮ, ಲಕ್ಷ್ಮೀದೇವಿ ಪೂಜಾ ಮಹೋತ್ಸವ



ಚುಂಚನಕಟ್ಟೆ, ಏ.26– ಕೆ.ಆರ್.ನಗರ ತಾಲೂಕಿನ ಹೊಸಕೊಪ್ಪಲು ಗೇಟ್ ಬಳಿಯ ಶ್ರೀಆದಿಶಕ್ತಿ ಪಟ್ಲದಮ್ಮ ಮತ್ತು ಶ್ರೀಲಕ್ಷ್ಮೀದೇವಿ ಪೂಜಾ ಮಹೋತ್ಸವ ಶುಕ್ರವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮತ್ತು ಪೂಜಾ ಮಹೋತ್ಸವದ ಅಂಗವಾಗಿ ಬೆಳಗ್ಗೆ 6.30ಕ್ಕೆ ಗಣಪತಿ ಹೋಮ, ನವಗ್ರಮ ಹೋಮ, ದುರ್ಗಾ ಹೋಮವನ್ನು ಕೆ.ಆರ್.ನಗರದ ಚಂದ್ರ ಮೌಳೇಶ್ವರ ದೇವಸ್ಥಾನದ ಅರ್ಚಕ ಗಣಪತಿ ಭಟ್ ನೇತೃತ್ವದಲ್ಲಿ ನಡೆಸಲಾಯಿತು. ನಂತರ ದೇವಲಯದ ಪ್ರಧಾನ ಅರ್ಚಕ ರಾಜಣ್ಣ ಪಟ್ಲದಮ್ಮ ಮತ್ತು ಲಕ್ಷ್ಮಿ ದೇವರಿಗೆ ಮಹಾಮಂಗಳಾರತಿ ನೆರವೇರಿಸಿದರು. ಈ ವೇಳೆ ಭಕ್ತರು, ವಿಶೇಷ ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ಜಾತ್ರಾ ಮಹೋತ್ಸವದಲ್ಲಿ ಹೊಸಕೊಪ್ಪಲು, ಡಿ.ಕೆ.ಕೊಪ್ಪಲು, ಕಂಚಗಾರಕೊಪ್ಪಲು, ಸಿದ್ದಾಪುರ, ಶ್ರೀರಾಮಪುರ, ಕೆಸ್ತೂರು ಗೇಟ್, ಅರಸನಕೊಪ್ಪಲು ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಭಕ್ತರು ಆಗಮಿಸಿದ್ದರು. ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಪುರಸಭೆ ಅಧ್ಯಕ್ಷ ಶಿವುನಾಯಕ್, ಸದಸ್ಯ ನಟರಾಜು, ಕೆಆರ್.ನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಪ್ರದೀಪ್, ನಿರ್ದೇಶಕ ಹರಿಚಿದಂಬರ್, ದೇವಾಲಯ ಸಮಿತಿ ಗೌರವಧ್ಯಕ್ಷ ಕೆ.ಬಿ.ಪ್ರಕಾಶ್, ಅಧ್ಯಕ್ಷ ಕೆ.ಬಿ.ಬಲರಾಮೇಗೌಡ, ಕಾರ್ಯದರ್ಶಿ ಕೆ.ಎಸ್.ಹಿರಣ್ಣಯ್ಯ, ಸಹ ಕಾರ್ಯದರ್ಶಿ ಕೆ.ಟಿ.ಚಂದ್ರೇಗೌಡ, ಉಪಾಧ್ಯಕ್ಷ ಹೆಚ್.ಪಿ. ನಾಗರಾಜೇಗೌಡ, ಸಂಚಾಲಕರಾದ ಕುಮಾರ್, ವಿಶ್ವನಾಥ್, ಗ್ರಾಪಂ ಅಧ್ಯಕ್ಷ ರಂಗಸ್ವಾಮಿ, ವಕೀಲ ಕೆ.ಸಿ.ಹರೀಶ್, ಎಡತೊರೆ ಬಿಇಡಿ ಕಾಲೇಜಿನ ವ್ಯವಸ್ಥಾಪಕ ಲೋಕೇಶ್, ಮುಖಂಡರಾದ ಅನಂತ್‌ಕುಮಾರ್ ಬಾಬು, ರಘು, ಕಾಂತರಾಜು, ಮಿಠಾಯಿ ಗೋವಿಂದೇಗೌಡ, ಮಹೇಶ್, ಹೆಚ್.ಬಿ. ಕುಮಾರ್, ಹೆಚ್.ಕೆ.ಮಂಜು, ಪತ್ರಕರ್ತರಾದ ಚುಂಚನಕಟ್ಟೆ ಮಧು ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು.

ಕ್ರಿಯಾ ಯೋಜನೆಯಂತೆ ಆದ್ಯತೆ ಮೇರೆಗೆ ಕಾಮಗಾರಿ

ಕೆ.ಆರ್.ನಗರ ಪುರಸಭಾ ಸಭೆಯಲ್ಲಿ ನಿರ್ಧಾರ


ಪುರಸಭೆಯ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ಸಾಮಾನ್ಯ ಸಾಧಾರಣಾ ಸಭೆ ನಡೆಯಿತು.

ಕೆ.ಆರ್.ನಗರ: ಪಟ್ಟಣ ಪುರಸಭೆಗೆ ಸರ್ಕಾರದಿಂದ ವಿವಿಧ ಯೋಜನೆಯಡಿಯಲ್ಲಿ ಮಂಜೂರಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಿ ಆಧ್ಯತೆಯ ಮೇರೆಗೆ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಪುರಸಭೆಯ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಧರಿಸಲಾಯಿತು.

ಇಲ್ಲಿನ ಪುರಸಭೆಯ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ಅಧ್ಯಕ್ಷ ಶಿವುನಾಯಕ್ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಾಧಾರಣ ಸಭೆಯಲ್ಲಿ ಈ ತೀರ್ಮಾನ ಮಾಡಲಾಯಿತಲ್ಲದೆ 23 ವಾರ್ಡುಗಳಿಗೂ ಸಮನಾಗಿ ಅನುದಾನ ನೀಡಬೇಕು ಎಂದು ಸದಸ್ಯರು ಒತ್ತಾಯಿಸಿದಾಗ ಯಾರಿಗೂ ತೊಂದರೆಯಾಗದಂತೆ ಅನುದಾನ ವಿತರಣೆ ಮಾಡುವುದಾಗಿ ಅಧ್ಯಕ್ಷರು ಭರವಸೆ ನೀಡಿದರು.

ಎಸ್‌ಸಿಎಫ್‌ಪಿ ಮತ್ತು ಟಿಎಸ್‌ಪಿ ಹಾಗೂ ಎಸ್‌ಎಫ್‌ಸಿ ಒಟ್ಟು 28 ಲಕ್ಷ ರೂಗಳಲ್ಲಿ ವಿವಿಧ ಕಾಮಗಾರಿ ಕೈಗೆತ್ತಿಕೊಳ್ಳಲು ಒಪ್ಪಿಗೆ ನೀಡಬೇಕೆಂದು ಮುಖ್ಯಾಧಿಕಾರಿಗಳು ಕೋರಿದಾಗ ಇದಕ್ಕೆ ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು. 15ನೇ ಹಣಕಾಸು ನಿರ್ಬಂಧಿತ ಅನುದಾನ 108.60 ಲಕ್ಷ ಮುಕ್ತ ಅನುದಾನ 72.40 ಲಕ್ಷ ಸೇರಿ ಒಟ್ಟು 181 ಲಕ್ಷ ರೂಗಳಾಗಿದ್ದು ಇವು ಗಳಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತು ಕೊಳ್ಳಲಾಗುತ್ತದೆ ಎಂದು ಅಧ್ಯಕ್ಷರು ಸಭೆಗೆ ಮಾಹಿತಿ ನೀಡಿದರು.

ಸದಸ್ಯ ಬಿ.ಎಸ್.ತೋಂಟದಾರ್ಯ ಮಾತನಾಡಿ ಬೇಡ ಜಂಗಮ ಜಾತಿಯಿಂದ ನಾನು ಚುನಾಯಿತನಾಗಿದ್ದು ಅದು ಎಸ್‌ಸಿ ಮೀಸಲು ವರ್ಗಕ್ಕೆ ಬರಲಿದೆ ಆದರೆ ನನ್ನನ್ನು ಲಿಂಗಾಯತರೆಂದು ಪರಿಗಣಿಸಿ ನಮ್ಮ ವಾರ್ಡಿಗೆ ಅನುದಾನ ನೀಡುವಲ್ಲಿ ತಾರತಮ್ಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

3ನೇ ವಾರ್ಡಿನಲ್ಲಿ ನಿರ್ಮಾಣಗೊಂಡಿರುವ ಕೇಶವ ಅವರ ಬಡಾವಣೆಯಲ್ಲಿ ಯಾವುದೇ ರೀತಿಯ ಮೂಲಭೂತ ಸೌಕರ್ಯ ಇಲ್ಲದಿದ್ದರೂ ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ. ಇದೇ ಮಾದರಿಯಲ್ಲಿ ಪಟ್ಟಣದ ಸುತ್ತ ಹಲವು ಬಡಾವಣೆಗಳಲ್ಲೂ ನಿವೇಶನ ಬಿಡುಗಡೆ ಮಾಡಲಾಗಿದ್ದು ಹಣದ ಆಸೆಗಾಗಿ ಅಧಿಕಾರಿಗಳು ಈ ಕೆಲಸ ಮಾಡಿದ್ದು ಕೂಡಲೇ ಯೋಜನಾ ಪ್ರಾಧಿಕಾರಕ್ಕೆ ಪತ್ರ ಬರೆಯಬೇಕೆಂದು ಸದಸ್ಯರಾದ ಕೋಳಿಪ್ರಕಾಶ್, ಕೆ.ಎಲ್.ಜಗದೀಶ್ ಮತ್ತಿತರರು ಒತ್ತಾಯಿಸಿದ್ದಾಗ ಇದಕ್ಕುತ್ತರಿಸಿದ ಅಧ್ಯಕ್ಷರು ಕೂಡಲೇ ಗಮನಹರಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದರು. ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಶಂಕರ್, ಉಪಾಧ್ಯಕ್ಷೆ ವಸಂತಮ್ಮ, ಸದಸ್ಯರಾದ ಕೋಳಿ ಪ್ರಕಾಶ್, ಕೆ.ಜಿ.ಸುಬ್ರಮಣ್ಯ, ನಟರಾಜು, ಶಂಕರ್‌ಸ್ವಾಮಿ, ಶಾರದನಾಗೇಶ್, ಸೌಮ್ಯ ಲೋಕೇಶ್, ಸರೋಜಮಹದೇವ್, ಸೈಯದ್‌ಸಿದ್ದಿಕ್, ಉಮೇಶ್, ಕೆ.ಎಲ್.ಜಗದೀಶ್, ಸಂತೋಷ್‌ಗೌಡ, ಬಿ.ಎಸ್.ತೋಂಟದಾರ್ಯ, ಅಫ್ರೋಜ್‌ಉನ್ನಿಸಾ, ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಕಂದಾಯಾಧಿಕಾರಿ ರಮೇಶ್ ಸೇರಿದಂತೆ ಪುರಸಭೆ ಸಿಬ್ಬಂದಿಗಳು ಹಾಜರಿದ್ದರು.

ಪ್ರತಿಭಾವಂತ ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಉನ್ನತ ಶಿಕ್ಷಣಕ್ಕಾಗಿ ಪಟ್ಟಣ ಮಕ್ಕಳಂತೆ ಹಳ್ಳಿ ಮಕ್ಕಳಿಗೂ ಬೋಧನಾ ಕೇಂದ್ರ ತೆರೆಯಬೇಕು


ತಿ.ನರಸೀಪುರದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗು ಬನ್ನೂರು ಗ್ರಾಮಾಂತರ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಪಿಯುಸಿ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು

ತಿ.ನರಸೀಪುರ,ಏ.26– ಗ್ರಾಮೀಣ ಪ್ರದೇಶದ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ತಾಲೂಕು ಮಟ್ಟದಲ್ಲಿ ಬೋಧನಾ ಕೇಂದ್ರ ತೆರೆಯುವ ಮೂಲಕ ಪಟ್ಟಣ ಪ್ರದೇಶದ ಮಕ್ಕಳಿಗೆ ದೊರಕುವ ಶಿಕ್ಷಣ ಹಳ್ಳಿ ಮಕ್ಕಳಿಗೂ ಸಿಗುವಂತಾಗಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಖಜಾಂಚಿ ಎಂ.ಬಿ.ಚೇತನ್ ಹೇಳಿದರು.

ತಾಲೂಕಿನ ಬನ್ನೂರಿನ ಎಪಿಎಂಸಿ ಆವರಣದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ಬನ್ನೂರು ಗ್ರಾಮಾಂತರ ಘಟಕದ ವತಿಯಿಂದ ಪ್ರತಿಭಾನ್ವಿತ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿ ಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಟ್ಟಣ ಪ್ರದೇಶದ ಮಕ್ಕಳು ಉನ್ನತ ಶಿಕ್ಷಣಕ್ಕಾಗಿ ಶುಲ್ಕ ಭರಿಸುವ ಸಾಮರ್ಥ್ಯ ಹೊಂದಿರುತ್ತಾರೆ, ಹಾಗಾಗಿ ಅವರು ಐಎಎಸ್, ಐಪಿಎಸ್ ಹಾಗೂ ಕೆಎಎಸ್ ಸೇರಿದಂತೆ ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಪ್ರತಿಭಾವಂತ ಮಕ್ಕಳಿದ್ದರೂ ಉನ್ನತ ಶಿಕ್ಷಣಕ್ಕೆ ಶುಲ್ಕ ಪಾವತಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಗ್ರಾಮಾಂತರ ಪ್ರದೇಶದ ಮಕ್ಕಳಲ್ಲಿರುವ ಪ್ರತಿಭೆ ಹೊರಬರಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಲಹೆಗಾರ ಟಿ.ವಿ.ಗೋಪಿನಾಥ್ ಮಾತನಾಡಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ಕ್ಷೇತ್ರ ಅತ್ಯಂತ ಮಹತ್ವತೆಯಿಂದ ಕೂಡಿದೆ. ಮಕ್ಕಳ ಶೈಕ್ಷಣಿಕ ಚಟುವಟಿಕೆಯಲ್ಲಿ ಪೋಷಕರ ಪಾತ್ರ ಮಹತ್ತರವಾಗಿದೆ. ಶಿಕ್ಷಣದೊಂದಿಗೆ ಮಾನವೀಯ ಮೌಲ್ಯಗಳು ಮಕ್ಕಳಲ್ಲಿ ಬೆಳೆಯಬೇಕಾದರೆ ಮನೆಯ ಪರಿಸರ ಹಾಗೂ ಶಾಲೆಯ ಪರಿಸರ ಎರಡೂ ಅತಿ ಮುಖ್ಯ. ಯಾವುದೇ ಶಾಲೆ ಅಥವಾ ಕಾಲೇಜಿನಲ್ಲಿ ಪಠ್ಯದಷ್ಟೇ ಇತರೆ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದಲ್ಲಿ ಮಾತ್ರ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಬನ್ನೂರಿನ ಸಂತೇಮಾಳದ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗು ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪಿಯುಸಿ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅರಣ್ಯ ಇಲಾಖೆಯ ವತಿಯಿಂದ ಸಾರ್ವಜನಿಕರಿಗೆ ಸಸಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜು, ಕನ್ನಡ ಸಾಹಿತ್ಯ ಕಲಾಕೂಟದ ಎಂ.ಚಂದ್ರಶೇಖರ್, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಗೂಳೇಗೌಡ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರವೀಶ್, ಸಾಮಾಜಿಕ ವಲಯ ಅರಣ್ಯ ವಲಯದ ಗಸ್ತು ಅರಣ್ಯಪಾಲಕ ಚನ್ನಬಸವಯ್ಯ, ಅತ್ತಳ್ಳಿ ಲಿಂಗಣ್ಣ, ಅರುಣ್ ಕುಮಾರ್, ಕೇತುಪುರ ಗಿರಿರಾಜ್, ಬನ್ನೂರು ಸೂರಿ, ಕಿರಗಸೂರು ಶಂಕರ್, ಹೆಗ್ಗೂರು ರಂಗರಾಜು, ಕುಂಚನಹಳ್ಳಿ ಕುಳ್ಳೇಗೌಡ, ಮೆಡಿಕಲ್ ಮಹೇಶ್, ವೈನ್ ನಟೇಶ್, ಕೊಡಗಹಳ್ಳಿ ರಾಜಣ್ಣ, ಟೈಲರ್ ಸ್ವಾಮಿ, ಎ.ಪಿ ನವೀನ್, ಚಾಮನಹಳ್ಳಿ ನಿಂಗೇಗೌಡ, ಕರಿಯಪ್ಪ, ಎ.ಪಿ.ಚೇತನ್ ಎ.ಎನ್. ಮಹೇಶ್, ರಂಗಸಮುದ್ರ ರೇವಣ್ಣ, ಯಾಚೇನಹಳ್ಳಿ ರಾಮಸ್ವಾಮಿ, ಬರಡನಪುರ ನಾಗರಾಜ್, ಉಡಿಗಾಲ ರೇವಣ್ಣ, ಮೂಡಲಪುರ ಶಿವಮೂರ್ತಿ, ಕುರುಬೂರು ಪ್ರದೀಪ್, ಹೆಗ್ಗೂರು ರಂಗರಾಜು, ಅತ್ತಹಳ್ಳಿ ಮೈಕ್ ಬಾಬು, ರಾಜೇಶ ಸೇರಿದಂತೆ ವಿದ್ಯಾರ್ಥಿಗಳು ಪೋಷಕರು ಹಾಜರಿದ್ದರು.

ನಾಗರತ್ನ ನಿಧನ



ಹುಣಸೂರು: ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ನಂಜೇಗೌಡರ ಪತ್ನಿ, ನಾಗರತ್ನ (67)ಶನಿವಾರ ಸಂಜೆ ನಿಧನರಾದರು

ಮೃತರು ಪುತ್ರ ಹಿರೀಕ್ಯಾತನಹಳ್ಳಿ ರೈತ ವ್ಯವಸಾಯ ಸಹಕಾರ ಸಂಘದ ಕಾರ್ಯ ನಿರ್ವಹಣಾಧಿಕಾರಿ ಶ್ರೀನಿವಾಸ್, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ

ಇವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಹಿಂದೂಸ್ತಾನ್ ಜಿಂದಾಬಾದ್... ಪಾಕಿಸ್ತಾನ್ ಮುರ್ದಾಬಾದ್...

●ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲಿನ ಉಗ್ರರ ದಾಳಿಗೆ ಮೈಸೂರಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ನೇತೃತ್ವದಲ್ಲಿ ಮುಸ್ಲಿಂ ಧರ್ಮಗುರುಗಳು, ಮುಖಂಡರ ಆಕ್ರೋಶ ●ಪಾಕಿಸ್ತಾನ ಇಲ್ಲವೆ ಉಗ್ರರ ವಿರುದ್ಧ ಭಾರತ ಯಾವುದೇ ಕ್ರಮ ಕೈಗೊಂಡರೂ ಬೆಂಬಲ ಘೋಷಣೆ

ಮೈಸೂರು, ಏ.26(ಎಂಕೆ)– ಹಿಂದೂಸ್ತಾನ್ ಜಿಂದಾಬಾದ್... ಪಾಕಿಸ್ತಾನ್ ಮುರ್ದಾಬಾದ್... ಘೋಷಣೆಂಯೊಂದಿಗೆ ಜಮ್ಮು-ಕಾಶ್ಮೀರದ ಪಹಲ್ಗಾಮ್ ಬಳಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯನ್ನು ತೀವ್ರವಾಗಿ ಖಂಡಿಸಿದ ಮುಸ್ಲಿಂ ಧರ್ಮಗುರುಗಳು, ಮುಖಂಡರು, ಯುವಕರು, ಮಕ್ಕಳು ಕ್ಯಾಂಡಲ್ ಲೈಟ್ ಮೆರವಣಿಗೆ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಅಶೋಕ ರಸ್ತೆಯ ಮಿಲಾದ್ ಪಾರ್ಕ್ ಎದುರು ಶನಿವಾರ ಸಂಜೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರೂ ಆದ ಮಾಜಿ ಮೇಯರ್ ಅಯೂಬ್‌ಖಾನ್ ನೇತೃತ್ವದಲ್ಲಿ ಜಮಾವಣೆಗೊಂಡ ನೂರಾರು ಮಂದಿ ಮುಸ್ಲಿಂ ಧರ್ಮಗುರುಗಳು ಹಾಗೂ ಮುಖಂಡರು ಉಗ್ರರ ಪೈಶಾಚಿಕ ಕೃತ್ಯವನ್ನು ಅತ್ಯಂತ ತೀವ್ರವಾಗಿ ಖಂಡಿಸಿದರು.

ಹಿಂದೂಸ್ತಾನ್ ಜಿಂದಾಬಾದ್... ಪಾಕಿಸ್ತಾನ್ ಮುರ್ದಾಬಾದ್... ಉಗ್ರಗಾಮಿಗಳನ್ನು ಅಂತ್ಯ ಗೊಳಿಸಿ... ನರ ರಾಕ್ಷಸರಿಗೆ ಶಿಕ್ಷೆಯಾಗಲಿ... ಫಲಕಗಳನ್ನು ಹಿಡಿದು ದೇಶದ ಶಾಂತಿ ಮತ್ತು ಐಕ್ಯತಾ ವಿರೋಧಿಗಳಿಗೆ ಧಿಕ್ಕಾರ ಕೂಗಿದರು. ಇದೇ ವೇಳೆ ಕ್ಯಾಂಡಲ್‌ಗಳನ್ನು ಬೆಳಗಿಸಿ, ಮೃತಪಟ್ಟ ಪ್ರವಾಸಿಗರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ನಂತರ ಮೀಲಾದ್ ಪಾರ್ಕ್‌ನಿಂದ ಫೌಂಟೆನ್ ಸರ್ಕಲ್‌ವರೆಗೆ ಪಾಕಿಸ್ತಾನಕ್ಕೆ ಧಿಕ್ಕಾರ ಕೂಗುತ್ತಾ ಕ್ಯಾಂಡಲ್ ಲೈಟ್ ಮೆರವಣಿಗೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ ಮುಸ್ಲಿಂ ಧರ್ಮಗುರುಗಳು, ಜಮ್ಮು-ಕಾಶ್ಮೀರದ ಪಹಲ್ಗಾವ್ ಬಳಿ ದೇಶದ ಪ್ರವಾಸಿಗರ ಮೇಲೆ ಉಗ್ರರ ದಾಳಿ ಅತ್ಯಂತ ಖಂಡನೀಯ. ಉಗ್ರರಿಗೆ ಅತ್ಯಂತ ಕಠಿಣ ಶಿಕ್ಷೆಯಾಗಬೇಕು. ನಾವೆಲ್ಲರೂ ಭಾರತೀಯರು. ಭಾರತೀಯರಾಗಿ ಉಗ್ರರ ಪೈಶಾಚಿಕ ಕೃತ್ಯವನ್ನು ತೀವ್ರವಾಗಿ ಖಂಡಿಸುತ್ತೇವೆ. ಉಗ್ರರಿಗೆ ಆಶ್ರಯ ನೀಡಿರುವ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ನಿರ್ಣಯಕ್ಕೆ ಭಾರತ ದೇಶದ ಸಮಸ್ತ ಮುಸ್ಲಿಂಮರು ಬೆಂಬಲ ನೀಡಲಿದ್ದಾರೆ ಎಂದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಜಮ್ಮು-ಕಾಶ್ಮೀರದ ಪಹಲ್ಗಾಮ್ ಬಳಿ ಪ್ರವಾಸಿಗರ ಮೇಲೆ ಉಗ್ರರು ನಡೆಸಿದ ದಾಳಿಯನ್ನು ದೇಶದ 146 ಕೋಟಿ ಜನರು ಖಂಡಿಸುತ್ತಾರೆ. ಆದರೆ, ರಾಜಕೀಯ ಲಾಭ ಪಡೆಯುವ ಮನಸ್ಥಿತಿಯನ್ನು ಇಟ್ಟುಕೊಂಡು ನಾಲ್ವರು ಉಗ್ರರು ನಡೆಸಿದ ಪೈಶಾಚಿಕ ಕೃತ್ಯಕ್ಕೆ ದೇಶದ 40 ಕೋಟಿ ಮುಸ್ಲಿಂಮರನ್ನು ದ್ವೇಷ ಮಾಡುವುದು ಸರಿಯಲ್ಲ. ನಮ್ಮ ದೇಶದಲ್ಲಿರುವ ಮುಸ್ಲಿಂಮರೆಲ್ಲರೂ ಭಾರತ ಮಾತೆಯ ಮಕ್ಕಳೇ ಎಂದರು.

ಖಳನಾಯಕರನ್ನಾಗಿಸುವುದು ಅಕ್ಷಮ್ಯ: ರಾಜಕೀಯ ಲಾಭಕ್ಕಾಗಿ ಸಾಮಾಜಿಕ ಜಾಲತಾಣ ಹಾಗೂ ಮಾಧ್ಯಮಗಳ ಮೂಲಕ ದೇಶದ ಮುಸ್ಲಿಂಮರ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು. ಅವರನ್ನು ಖಳನಾಯಕರನ್ನಾಗಿಸುತ್ತಿರುವುದು ಅಕ್ಷಮ್ಯ ಅಪರಾಧ. ಇದನ್ನು ದೇವರೂ ಕೂಡ ಕ್ಷಮಿಸಲ್ಲ. ಕಳೆದ 11 ವರ್ಷದಿಂದ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದ್ದರೂ ದೇಶದಲ್ಲಿರುವ ಮುಸ್ಲಿಂ ಸಮುದಾಯ ತಾಳ್ಮೆ ಕಳೆದುಕೊಂಡಿಲ್ಲ. ಆದರೆ, ಈ ತಾಳ್ಮೆಯನ್ನೇ ಬಳಸಿಕೊಂಡು, ತಮ್ಮ ರಾಜಕೀಯ ಲಾಭಕ್ಕಾಗಿ ತುಳಿಯುವ ಕೆಲಸವಾಗುತ್ತಿದೆ. ಉಗ್ರರ ಹಾಗೂ ಪಾಕಿಸ್ತಾನದ ವಿರುದ್ಧ ಕೇಂದ್ರ ಸರ್ಕಾರ ಯಾವುದೇ ಕ್ರಮಕ್ಕೆ ಮುಂದಾದರೂ ಇಡೀ ದೇಶದ ಮುಸ್ಲಿಂ ಸಮುದಾಯದ ಬೆಂಬಲ ನೀಡಲಿದೆ.

ಮೈಸೂರು ಸರ್ ಖಾಜಿ ಮೊಹಮ್ಮದ್ ಉಸ್ಮಾನ್ ಷರೀಫ್, ಮುಸ್ಲಿಂ ಧರ್ಮಗುರುಗಳಾದ ತಾಜುದೀನ್ ಹಜರತ್, ಮೌಲಾನಾ ಜಹುಾವುಲ್ಲಾ ಮೌಲಾನಾ ಇಬ್ರಾಹಿಂ, ಸಲೀಂ, ಮೌಲಾನಾ ನೂರುದ್ದೀನ್ ಫಾರೂಖಿ, ಮಾಜಿ ಉಪಮೇಯರ್‌ಗಳಾದ ಷಫಿ ಅಹಮದ್, ಅಫ್ತಾಬ್ ಅಹಮದ್, ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಸುಹೇಲ್ ಬೇಗ್ ಮತ್ತಿತರರು ಭಾಗವಹಿಸಿದ್ದರು.



ಜಮ್ಮು-ಕಾಶ್ಮೀರದ ಪಹಲ್ಗಾಮ್ ಬಳಿ ಪ್ರವಾಸಿಗರ ಮೇಲೆ ನಡೆದ ಉಗ್ರರ ದಾಳಿ ಖಂಡಿಸಿ ಮುಸ್ಲಿಂ ಧರ್ಮಗುರುಗಳು, ಮುಖಂಡರು ಕ್ಯಾಂಡಲ್ ಲೈಟ್ ಮೆರವಣಿಗೆ ನಡೆಸಿದರು.

ಬೀದಿಯಲ್ಲಿ ನಿಲ್ಲಿಸಿ ಕೊಲ್ಲುತ್ತೇವೆ...!

ಕೇಂದ್ರ ಸರ್ಕಾರ ಉಗ್ರರನ್ನು ಹಿಡಿದು ಅತ್ಯಂತ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಅಥವಾ ಉಗ್ರರನ್ನು ಹಿಡಿದು ನಮಗೆ ಒಪ್ಪಿಸಿದರೆ ನಾವೇ ಬೀದಿಯಲ್ಲಿ ನಿಲ್ಲಿಸಿ ಕೊಲ್ಲುತ್ತೇವೆ. ಹಾಗೆಯೇ ಮೃತಪಟ್ಟ ಸಂತ್ರಸ್ತರೊಂದಿಗೆ ನಾವಿದ್ದೇವೆ. ಕೇಂದ್ರ ಸರ್ಕಾರ ಪಾಕಿಸ್ತಾನದ ವಿರುದ್ಧವಾಗಲೀ ಅಥವಾ ಉಗ್ರರ ವಿರುದ್ಧವಾಗಲೀ ಏನೇ ಕ್ರಮ ತೆಗೆದುಕೊಂಡರು ದೇಶದ ಮುಸಲ್ಮಾನರು ಒಗ್ಗಟ್ಟಾಗಿ ಕೇಂದ್ರ ಸರ್ಕಾರದ ಜೊತೆ ನಿಲ್ಲುತ್ತೇವೆ. ಯಾವುದೇ ಕ್ರಮ ತೆಗೆದುಕೊಂಡರು ಅದಕ್ಕೆ ಬದ್ಧರಾಗಿದ್ದೇವೆ.

- **ಅಯೂಬ್ ಖಾನ್,** ಅಧ್ಯಕ್ಷರು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದ ಗುಡಿ (ಕ)+ ಒಡೆಲಾ-2 (ತೆ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ದಾಸರಹಳ್ಳಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗ್ಯಾಂಗರ್ಸ್ (ತ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ದಾಸರಹಳ್ಳಿ (ಕ) + ರಿಕ್ಷಾ ಚಾಲಕ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಅಲಪ್ಪುಳ ಜಿಮ್ಖಾನ (ಮ): ಬೆ10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
ಸ್ಕ್ರೀನ್ 3	ದಿ ಅಮೆಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ, ಜಾಟ್ (ಹಿಂ): ಸಂ.4.10ಕ್ಕೆ.
ಸ್ಕ್ರೀನ್ 4	ವಿದ್ಯಾಪತಿ (ಕ): ಬೆ10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 2	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಡಾ. ರಾಜ್‌ಕುಮಾರ್ ನೆನಪಿನೋತ್ಸವ, ಗೀತಗಾಯನ ಕಾರ್ಯಕ್ರಮ



ಡಾ. ಲೀಲಾಪ್ರಕಾಶ್


ದೇವರಾಜ್


ಶ್ರೀಧರ್ ದೀಕ್ಷಿತ್


ಎಸ್.ಇ. ಗಿರಿಧರ್


ಶ್ರೀಮತಿ ನಾಗಮ್ಮ


ಕೃಷ್ಣಮೂರ್ತಿ

ಮೈಸೂರು, ಏ. 26– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಉತ್ತಿಷ್ಠ ಭಾರತ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ನಾಳೆ (ಏ. 27) ಸಂಜೆ 5 ಗಂಟೆಗೆ ವಿಜಯನಗರ ಮೊದಲ ಹಂತದ ಕನ್ನಡ ಸಾಹಿತ್ಯ ಭವನದಲ್ಲಿ ಡಾ. ರಾಜ್ ಕುಮಾರ್ ನೆನಪಿನೋತ್ಸವ, ಗೀತಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಯೂನಿವರ್ಸಲ್ ಅಕಾಡೆಮಿ ಸಂಸ್ಥಾಪಕ ಪ್ರಕಾಶ್ ಎಸ್. ಹಳ್ಳಿ ಉದ್ಘಾಟಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ ಡಾ. ರಾಜ್‌ಕುಮಾರ್ ಕುರಿತು ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಹಿರಿಯ ಯೋಗಾಚಾರ್ಯ ಎಸ್.ವಿ. ವೆಂಕಟೇಶಯ್ಯ ಭಾಗವಹಿಸಲಿದ್ದಾರೆ. ಶಿಕ್ಷಣ ತಜ್ಞ ರಘು ಕೌಟಿಲ್ಯ ಅವರು ಡಾ. ಕೆ. ಲೀಲಾಪ್ರಕಾಶ್ (ಸಾಹಿತ್ಯ), ದೇವರಾಜ್ (ಯೋಗ), ಎನ್. ಶ್ರೀಧರ್ ದೀಕ್ಷಿತ್ (ಸಮಾಜ ಸೇವೆ), ಎಸ್.ಇ. ಗಿರಿಧರ್ (ವೈದ್ಯಕೀಯ ಸೇವೆ), ಶ್ರೀಮತಿ ನಾಗಮ್ಮ (ಕಾವ್ಯ) ಮತ್ತು ಕೃಷ್ಣಮೂರ್ತಿ (ಆಡಳಿತ) ಅವರಿಗೆ ಡಾ. ರಾಜ್‌ಕುಮಾರ್ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಉತ್ತಿಷ್ಠ ಭಾರತ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ವಿ. ನಾಗೇಂದ್ರಬಾಬು, ಸಂಚಾಲಕ ಅರುಣ್ ಹೇಮಂತ್ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಎನ್. ಅನಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನ ಪೀಠಿಕೆ ನೀಡಿ ಗೌರವ



ಮೈಸೂರಿಗೆ ಆಗಮಿಸಿದ್ದ ಗೃಹ ಸಚಿವ ಜಿ. ಪರಮೇಶ್ವರ್ ಅವರನ್ನು ಕರ್ನಾಟಕ ರಾಜ್ಯ ಆದಿ ದ್ರಾವಿಡ (ಮಾದಿಗ) ಮಹಾಸಂಘದ ಅಧ್ಯಕ್ಷ ವೆಂಕಟೇಶ್, ಸಂವಿಧಾನ ಪೀಠಿಕೆ ನೀಡಿ ಗೌರವಿಸಿದರು. ಈ ವೇಳೆ ಮೈಸೂರಿನ ಹಲವು ದಲಿತ ಮುಖಂಡರು ಹಾಜರಿದ್ದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮಹತ್ವದ ಸಭೆ



ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಶನಿವಾರ ಮೈಸೂರಿನ ಬಿಜೆಪಿ ಕಾರ್ಯಾಲಯದಲ್ಲಿ ಸಭೆ ನಡೆಸಿದರು.


ಮೈಸೂರು, ಏ.26– ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಶನಿವಾರ ಮೈಸೂರಿನ ಬಿಜೆಪಿ ಕಾರ್ಯಾಲಯಕ್ಕೆ ಭೇಟಿ ನೀಡಿದ್ದರು.

ಭಾರತ ಮಾತೆಯ ಫೋಟೋಗೆ ಪುಷ್ಪಾರ್ಚನೆ ಮಾಡಿದ ನಂತರ ಪಕ್ಷದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಗೋಪ್ಯ ಸಭೆ ನಡೆಸಿದರು.

ಪಕ್ಷದ ಬಲಿಷ್ಠತೆ ಹಾಗೂ ಏಳಿಗೆಗೆ ಸಂಘಟನೆ ಬಹಳ ಮುಖ್ಯ. ಯಾವುದೇ ಕಾರಣಕ್ಕೂ ಇದರಲ್ಲಿ ವಿಫಲವಾಗಬಾರದು. ಈ ನಿಟ್ಟಿನಲ್ಲಿ ಸಮನ್ವಯದೊಂದಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಮುಂಬರುವ ಸ್ಥಳೀಯ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಸಂಘಟನೆಯತ್ತ ಹೆಚ್ಚು ಗಮನಹರಿಸಬೇಕು. ಹೀಗೆ ಹತ್ತಾರು ಸಲಹೆ-ಸೂಚನೆಗಳನ್ನು ನೀಡಿದರೆಂದು ಬಲ್ಲ ಮೂಲಗಳು ತಿಳಿಸಿವೆ.


ಸಭೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಸಂಸದ ಪ್ರತಾಪ್ ಸಿಂಹ, ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್ ಜಯರಾಮೇಗೌಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮಾಜಿ ಎಂಎಲ್‌ಸಿ ತೋಂಟದಾರ್ಯ, ಮುಖಂಡರಾದ ಕವೀಶ್‌ಗೌಡ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್, ಎನ್.ವಿ. ಫಣೀಶ್ ಮತ್ತಿತರರು ಭಾಗವಹಿಸಿದ್ದರು.

ಸಚಿವ ಸಂತೋಷ್ ಲಾಡ್‌ಗೆ ಅಭಿನಂದನೆ



ಜಮ್ಮು-ಕಾಶ್ಮೀರದಿಂದ ಸುರಕ್ಷಿತವಾಗಿ 180 ಕನ್ನಡಿಗರನ್ನು ಕರೆತಂದ ಸಚಿವ ಸಂತೋಷ್ ಲಾಡ್ ಅವರನ್ನು ಶ್ರೀ ದುರ್ಗಾ ಫೌಂಡೇಶನ್ ಹಾಗೂ ಕೆವಿಕೆ ಫೌಂಡೇಶನ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಕುಶಾಲ್ ಹರವೇಗೌಡ, ಲೋಕೇಶ್ ಹಗರಿಬೊಮ್ಮನಹಳ್ಳಿ, ದಶಮಿ, ರೇಖಾ ಶ್ರೀನಿವಾಸ್, ಖುಷಿ, ದೀಪನಾಯಕ್, ಶಾಜಿಯಾ ಸುಲ್ತಾನ್, ಸಂಪತ್ ಸುಬ್ಬಯ್ಯ, ತ್ರಿವೇಣಿ, ನಕುಲ್, ಸಾರಥಿ, ಕುಮಾರ್, ನಂದೀಶ್, ಕಾಂಗ್ರೆಸ್ ಕಾರ್ಯಕರ್ತ ವಾಸಿಮ್, ಮತಿನ್, ಆದಿತ್ಯ, ಯುವ ಕಾಂಗ್ರೆಸ್ ಮುಖಂಡರಾದ ಮೂಡಿಗೆರೆ ಜ್ಞಾನಿ, ಮಂಜುನಾಥ, ತ್ರಿವೇಣ್ ಮುರುಳಿ, ಕವಿತಾ ರೆಡ್ಡಿ, ಅರ್ಜುನ್ ಗೌಡ, ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಪಂಜಾಬ್-ಕೋಲ್ಕತ್ತ ಪಂದ್ಯಕ್ಕೆ ಮಳೆ ಅಡ್ಡಿ; ಉಭಯ ತಂಡಗಳಿಗೆ ತಲಾ ಒಂದು ಪಾಯಿಂಟ್ ಹಂಚಿಕೆ



ಕೋಲ್ಕತ್ತ, ಏ.26 – ಇಲ್ಲಿನ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ಶನಿವಾರ ನಡೆಯುತ್ತಿದ್ದ ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ನಡುವಿನ ಪಂದ್ಯವು ಮಳೆಯ ಕಾರಣದಿಂದಾಗಿ ರದ್ದಾಗಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 201 ರನ್ ಗಳಿಸಿದರೆ, 202 ರನ್‌ಗಳ ಗುರಿ ಬೆನ್ನತ್ತಿದ ಕೋಲ್ಕತ್ತ ನೈಟ್ ರೈಡರ್ಸ್ ಮೊದಲ ಓವರ್‌ನಲ್ಲಿ 7 ರನ್‌ಗಳಿಸಿದ್ದ ವೇಳೆ ಆರಂಭವಾದ ಜೋರು ಮಳೆಯಿಂದಾಗಿ ಪಂದ್ಯ ರದ್ದಾಗಿದ್ದು, ಉಭಯ ತಂಡಗಳಿಗೆ ತಲಾ ಒಂದು ಅಂಕ ನೀಡಲಾಗಿದೆ.

ಪಂಜಾಬ್ ಕಿಂಗ್ಸ್ ಆರಂಭಿಕರಾದ ಪ್ರಿಯಾಂಶ್ ಆರ್ಯ(69 ರನ್) ಮತ್ತು ಪ್ರಭಸಿಮ್ರನ್ ಸಿಂಗ್ (83 ರನ್) ಸಿಡಿಸಿದ ಅರ್ಧಶತಕಗಳ ಬಲದಿಂದ ಪಂಜಾಬ್ ಕಿಂಗ್ಸ್ ತಂಡವು ಆತಿಥೇಯ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಬೃಹತ್ ಮೊತ್ತ ಕಲೆಹಾಕಿತ್ತು.

ಮಳೆ ಅಡ್ಡಿ: ಬೃಹತ್ ಗುರಿ ಬೆನ್ನತ್ತಿರುವ ಕೋಲ್ಕತ್ತ ಒಂದು ಓವರ್ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೆ 7 ರನ್ ಗಳಿಸಿದ್ದಾಗ ಮಳೆ ಸುರಿಯಿತು. ಹೀಗಾಗಿ, ಪಂದ್ಯ ನಿಲ್ಲಿಸಲಾಗಿತ್ತು. ರಹ್ಮನುಲ್ಲಾ ಗುರ್ಬಾಜ್ (1 ರನ್) ಮತ್ತು ಸುನಿಲ್ ನಾರಾಯಣ್ (4 ರನ್) ಕ್ರೀಸ್‌ನಲ್ಲಿದ್ದರು.

ಕೇಂದ್ರದ ಆರ್ಥಿಕ ನೀತಿಯಿಂದ ದೇಶದ ಐಕ್ಯತೆಗೆ ಮಾರಕ ಸಾಧ್ಯತೆ

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಆತಂಕ



ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿ ಸಂಗೀತ ಸಭಾದಲ್ಲಿ ನಡೆದ ಆಲ್ ಇಂಡಿಯಾ ಇನ್ಶುರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್‌ನ 9ನೇ ಸಾಮಾನ್ಯ ಸಮ್ಮೇಳನದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಸಂ.ಮೀನಾಕ್ಷಿ ಸುಂದರಂ ಮಾತನಾಡಿದರು.

ಮೈಸೂರು,ಏ.26(ಎಂಟಿವೈ)– ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದಾಗಿ ಮುಂದಿನ ದಿನಗಳಲ್ಲಿ ದೇಶದ ಐಕ್ಯತೆಗೆ ಮಾರಕವಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಸಂ.ಮೀನಾಕ್ಷಿ ಸುಂದರಂ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿ ಸಂಗೀತ ಸಭಾದಲ್ಲಿ ಆಲ್ ಇಂಡಿಯಾ ಇನ್ಶುರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್ ಆಯೋಜಿಸಿದ್ದ 9ನೇ ಸಾಮಾನ್ಯ ಸಮ್ಮೇಳನದಲ್ಲಿ 'ನಿರುದ್ಯೋಗ, ಕಡಿಮೆ ಉದ್ಯೋಗ ಹಾಗೂ ಉದ್ಯೋಗ ರಹಿತ ಅಭಿವೃದ್ಧಿ' ವಿಷಯ ಕುರಿತು ಮಾತನಾಡಿದ ಅವರು, ಕೇಂದ್ರ ಸರ್ಕಾರದ ಆರ್ಥಿಕ ನೀತಿ ದೇಶದಲ್ಲಿ ಉತ್ತರ, ದಕ್ಷಿಣ ಎಂಬ ಸಂಘರ್ಷಕ್ಕೆ ನಾಂದಿಯಾಡುವಂತಹ ಸ್ಥಿತಿ ನಿರ್ಮಿಸುತ್ತಿದೆ. ಈಗಾಗಲೇ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್, ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತಮ್ಮ ರಾಜ್ಯಗಳಿಂದ ಹೆಚ್ಚಿನ ಪ್ರಮಾಣದ ತೆರಿಗೆಯನ್ನು ಕೇಂದ್ರಕ್ಕೆ ನೀಡುತ್ತಿದ್ದರೂ, ಕೇಂದ್ರದಿಂದ ಸರಿಯಾದ ಪ್ರಮಾಣದಲ್ಲಿ ಅನುದಾನ ಬರುತ್ತಿಲ್ಲ ಎಂದು ಹೇಳುತ್ತಲೇ ಇದ್ದಾರೆ. ಇದಕ್ಕೆ ಕೇಂದ್ರದ ಆರ್ಥಿಕ ನೀತಿಯೇ ಕಾರಣ ಎಂದರು.

ಕೇಂದ್ರ ಸರ್ಕಾರ ಜನಸಂಖ್ಯೆಯ ಆಧಾರದಲ್ಲಿ ಅನುದಾನ ನೀಡುತ್ತಿದೆ. ಕರ್ನಾಟಕ, ತಮಿಳುನಾಡು, ಕೇರಳದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಕಟ್ಟುನಿಟ್ಟಾಗಿ ಮಾಡಿದ್ದೇವೆ. ಉತ್ತರ ಭಾರತದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಜಾರಿಗೊಳಿಸಿಲ್ಲ. ಅಲ್ಲಿ ಹೆಚ್ಚು ಮಕ್ಕಳಿಗೆ ಜನ್ಮ ನೀಡಿದ ಮಹಿಳೆಯರನ್ನು ವೀರ ಮಾತೆ ಎಂದು ಸನ್ಮಾನಿಸಲಾಗುತ್ತದೆ. ಆ ಕಾರಣದಿಂದ ಜನಸಂಖ್ಯೆಗೆ ಅನುಗುಣವಾಗಿ ಉತ್ತರ ಭಾರತಕ್ಕೆ ಹೆಚ್ಚಿನ ಅನುದಾನ, ದಕ್ಷಿಣ ಭಾರತದ ರಾಜ್ಯಗಳಿಗೆ ಕಡಿಮೆ ಅನುದಾನ ನೀಡಲಾಗುತ್ತಿದೆ. ಇದರಿಂದ ಸಂಘರ್ಷಕ್ಕೆ ಕಾರಣವಾಗುತ್ತಿದೆ ಎಂದು ತಿಳಿಸಿದರು.

ಕ್ಷೇತ್ರ ಪುನರ್ ವಿಂಗಡಣೆ ಆದರೆ ಗಂಭೀರವಾದ ಸಮಸ್ಯೆ ಎದುರಿಸುವಂತಾಗುತ್ತದೆ. ಎಲ್ಲಿ ಆರ್ಥಿಕ ಅಭಿವೃದ್ಧಿಯಾಗಿದೆಯೋ, ಯಾರು ಆರ್ಥಿಕತೆಗೆ ಹೆಚ್ಚು ಕೊಡುಗೆ ಕೊಡುತ್ತಿದ್ದಾರೋ ಅವರಿಗೆ ಶಾಸನ ಸಭೆಗಳಲ್ಲಿ ಧ್ವನಿ ಇಲ್ಲದಂತಾಗುತ್ತದೆ. ಕ್ಷೇತ್ರ ಪುನರ್ ವಿಂಗಡಣೆಯಿಂದಾಗಿ ದೇಶದಲ್ಲಿ ಸಂಸತ್ ಸದಸ್ಯರ ಸಂಖ್ಯೆ 800ಕ್ಕೂ ಹೆಚ್ಚು ಆಗಬಹುದು. ಹೊಸದಾಗಿ ಉದಯವಾಗುವ ಕ್ಷೇತ್ರಗಳಲ್ಲಿ ದಕ್ಷಿಣ ಭಾರತಕ್ಕೆ ಎಷ್ಟು ಕ್ಷೇತ್ರ ಸಿಗುತ್ತದೆ ಎಂದು ಕಾದು ನೋಡಬೇಕಾಗುತ್ತದೆ. ಇದರಿಂದ ಬಲಿಷ್ಠವಾದ ಅವಕಾಶ ಇರುವ ಭಾರತದಂತಹ ದೇಶದಲ್ಲಿ ಉತ್ತರ, ದಕ್ಷಿಣ ಎಂಬ ಭಿನ್ನತೆ, ಸಂಘರ್ಷ ಬರಲು, ದೇಶದ ಐಕ್ಯತೆಗೆ ಮಾರಕವಾಗಲು ಸರ್ಕಾರದ ಆರ್ಥಿಕ ನೀತಿ ಕಾರಣ. ಇದರಿಂದ ಆಳುವ ವರ್ಗಕ್ಕೆ ಬಿಸಿಮುಟ್ಟಿಸಬೇಕು. ಉದ್ಯೋಗದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಮುಂದಿನ ಪೀಳಿಗೆಗೆ ಉದ್ಯೋಗ ಕೊಡಿಸುವುದು ಸವಾಲಾಗಿದೆ. ಉದ್ಯೋಗ ಪ್ರಶ್ನೆ ಬಂದರೆ ನಾವು ಬದಲಾದಂತಹ ಕಾಲಘಟ್ಟದಲ್ಲಿದ್ದೇವೆ. ಉದ್ಯೋಗದ ವ್ಯಾಖ್ಯಾನಗಳು ಬುಡಮೇಲಾಗುವ ಸಂದರ್ಭ ಒದಗಿ ಬಂದಿದೆ ಎಂದು ವಿಷಾದಿಸಿದರು.

ದೇಶದಲ್ಲಿ ಉದ್ಯೋಗರಹಿತರಾಗುತ್ತಿರುವುದನ್ನೇ ಅಭಿವೃದ್ಧಿ ಸಾಧನೆ ಎಂದು ಹೇಳಿಕೊಳ್ಳುವ ಪರಿಸ್ಥಿತಿಗೆ ಬರುತ್ತಿದ್ದೇವೆ. ಕೇಂದ್ರ ಸರ್ಕಾರ ಬಜೆಟ್‌ಗೂ ಮುನ್ನ ಸಂಸತ್‌ನಲ್ಲಿ ಮಂಡಿಸಿದ 2024-25ರಲ್ಲಿನ ಆರ್ಥಿಕ ಸಮೀಕ್ಷೆಯ ವರದಿಯಲ್ಲಿ ಉದ್ಯೋಗ ಹಾಗೂ ಸ್ವಯಂ ಉದ್ಯೋಗದ ಬಗ್ಗೆ ಅನೇಕ ವಿಚಾರ ಪ್ರಸ್ತಾಪಿಸಿದೆ. ಸಂಬಳ ಆಧಾರಿತ ಉದ್ಯೋಗದಿಂದ ಹೊರಬರುವುದನ್ನು ಅಭಿವೃದ್ಧಿಯ ಲಕ್ಷಣ ಎಂದು ಬಿಂಬಿಸಲಾಗಿದೆ. ಉದ್ಯೋಗವನ್ನು ಸಾಮಾನ್ಯವಾಗಿ ಫ್ರೀ ಲೇಬರ್ ಎಂದು ವ್ಯಾಖ್ಯಾನಿಸುತ್ತೇವೆ. ಫ್ರೀ ಲೇಬರ್ ಎಂದರೆ ತನ್ನ ಸವಲತ್ತುಗಳ ಬಗ್ಗೆ ಮಾತನಾಡುವುದಕ್ಕೆ ಸಂಪೂರ್ಣವಾಗಿ ಹಕ್ಕಿರುವ ದುಡಿಯುವ ಶಕ್ತಿ. ಆದರೆ, ಈಗ ಉದ್ಯೋಗದಿಂದ ಬಿಡುಗಡೆಯಾಗುವುದಕ್ಕೆ ಫ್ರೀ ಲೇಬರ್ ಎಂದು ವ್ಯಾಖ್ಯಾನಿಸಲಾಗುತ್ತಿದೆ ಎಂದು ವಿಷಾದಿಸಿದರು.

ಬಡತನ ಹೆಚ್ಚಾಗುವುದಕ್ಕೆ ಜನಸಂಖ್ಯೆ ಏರಿಕೆ ಕಾರಣ ಎನ್ನುತ್ತಾರೆ. ಜನಸಂಖ್ಯೆ ಹೆಚ್ಚಾಗುವುದು ಇಂದು ಅಗತ್ಯವಾಗಿದೆ. ಯಾಕೆಂದರೆ ಶ್ರಮವನ್ನು ಕೊಡುವ ಸಾಮರ್ಥ್ಯ ಇರುವ 'ಯುವ ಜನರ' ಪ್ರಮಾಣ ಯಾವ ದೇಶದಲ್ಲಿ ಹೆಚ್ಚು ಇದೆಯೋ ಅದು ಹೆಚ್ಚು ಪ್ರೊಡಕ್ಟಿವ್ ಕಂಟ್ರಿ ಆಗಿರುತ್ತದೆ. ಜಗತ್ತಿನಲ್ಲಿ ಹೆಚ್ಚು ಉತ್ಪಾದನೆಯುಳ್ಳ ಸಾಮರ್ಥ್ಯ ಹೊಂದಿರುವ ದೇಶ ಭಾರತವಾಗಿದೆ ಎಂದು ತಿಳಿಸಿದರು.


ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಸಂ.ಹೆಚ್.ಎಸ್.ಸುನಂದ, ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಂ.ಎಸ್.ಎನ್.ನಾಗೇಶ್, ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಸಬೀಹಾ ಭೂಮಿಗೌಡ, ಸಿಐಟಿಯು ಕಾರ್ಯದರ್ಶಿ ಎನ್.ಕೆ. ಬಾಲಾಜಿರಾವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಡಾ. ರಾಜ್ ಹುಟ್ಟುಹಬ್ಬ



ಡಾ. ರಾಜ್ ಶಿವಸೈನ್ಯ ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಡಾ. ರಾಜ್‌ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಲನಚಿತ್ರ ನಟ ಸೋಮಣ್ಣ, ಬಿ.ಎಸ್.ರವಿ, ಬಾಲಾಜಿ, ಶೇಖರ್, ಮಹೇಶ್, ಮಂಜು, ವಿಶ್ವನಾಥ್ ಇತರರಿದ್ದರು.

30ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಇಂದ್ರಾಣಿ.ಜೆ ಶ್ರೀ ವೆಂಕಟೇಶ್
ನಿವೃತ್ತ (KSFES)

ಶುಭಕೋರುವವರು: ಕಾವ್ಯ.ವಿ, ಕುಮಾರ್, ಕುಸುಮ.ವಿ, ಯಶಸ್ವಿನಿ (ಕುಟುಂಬವರ್ಗದವರು)

NEWLY LAUNCHED PROJECT IN YELWALA
"PARISARA SIRI" - MYSORE
RESIDENTIAL PLOTS @ JUST Rs. 675/- Sqft.,
2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228

MUDA APPROVED SITES FOR SALE
30X50 & 40x60 W/F
Opp. 40 Feet Road & Park
Next to Police layout
T.Narasipura Road & Ring Road
Call 99018 48182 99867 14860

---

rProcess
MEGA WALK-IN DRIVE
STEP IN AND EXPLORE EXCITING OPPORTUNITIES
Hiring for **Data Annotators for AI Project**
Walk-in Date
28th April to 2nd May 2025(9AM to 4 PM)
We are looking for candidates with good communication, basic computer skills, attention to detail, and a result - focused approach.
Gunamba towers No.579/2, D Subbaiah Rd, Lakshmipuram, Mysuru
APPLY TODAY
careers@rprocess.net
CONTACT US
6361794249/998007732/7829573628
Scan for Location
www.rprocess.in

COMMERCIAL SPACE FOR RENT
40x25 - 1000 sq.ft.
L.V.R. ENCLAVE
Near Maramma temple ring road & Preethi Layout,
Srirampura 2nd Stage, Mysuru
For Offices, Medical Centres & Labs, Agencies, Companies.
9900466811, 9980270076

ತಕ್ಷಣ ಬೇಕಾಗಿದ್ದಾರೆ
ಉತ್ಸಾಹಿ ಹುಡುಗರು ಮತ್ತು ಹುಡುಗಿಯರು ಬೋಗಾದಿ ರಿಂಗ್ ರೋಡ್ ಬಳಿ ಇರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
9448116337
9986394123

ಜಮೀನು ಮಾರಾಟಕ್ಕಿದೆ
ಮೈಸೂರು ಜಿಲ್ಲೆ, ಜಯಪುರ ಹೋಬಳಿಯಲ್ಲಿ ಜಮೀನು ಮಾರಾಟಕ್ಕಿದೆ
ನೇರ ಸಂಪರ್ಕಿಸಿ:
9731937223
8892581231

REQUIRED BAMS AYURVEDIC DOCTOR
We are looking for a qualified BAMS Ayurvedic Doctor to join our clinic as a Consultant. Preference will be given to male doctors.
Place : Sri nagara near J.P.nagar
9964280802


ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಸಿಸ್ಟಮ್ ಸರ್ವೀಸ್ ಇಂಜಿನಿಯರ್ ಕೆಲಸಕ್ಕೆ, ಸಿಸ್ಟಮ್ ಮತ್ತು ಪ್ರಿಂಟರ್ ರಿಪೇರಿ ಗೊತ್ತಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಅನುಭವ ಮತ್ತು ದ್ವಿಚಕ್ರ ವಾಹನ ಹೊಂದಿದವರಿಗೆ ಹೆಚ್ಚಿನ ಆದ್ಯತೆ.
ಹೊಸಬರೂ ಟ್ರೈನಿ ಇಂಜಿನೀಯರ್ ಕೆಲಸಕ್ಕೆ ಬೇಕಾಗಿದ್ದಾರೆ
ಸಂಪರ್ಕಿಸಿ: 8073393505

WANTED TEACHERS - APPLY NOW!
Emmanuel Christian Public School,
a reputed English medium school located in Chamarajanagar, is inviting applications for the following teaching positions:

Open Positions:
1. English Language Teacher
2. Physical Education Teacher (B.P.Ed)
3. Computer Teacher (BCA/B.Sc in CS)
4. Nursery Teacher (NTT)

Note: Minimum 2 years of experience required.

Benefits:
P.F. & ESI facility available
Email: ttiimoffice2023@gmail.com
Phone: +91 96204 56222



ಮೊದಲನೇ ವರ್ಷದ ಪುಣ್ಯಸ್ಮರಣೆ



ಆರ್.ಮಂಜು

ನೀವು ನಮ್ಮನಗಲಿ ಇಂದಿಗೆ ಒಂದು ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು

ಚೆನ್ನಯ್ಯ ಅವರ ಕುಟುಂಬವರ್ಗದವರು ಹಾಗೂ ವಿನಾಯಕ ಡೆವೆಲಪರ್ಸ್

NEWLY BUILT HOUSES FOR RENT
2 BHK (6 houses) and Commercial Shops(2 Nos) with facilities like car parking, 2 wheeler parking, Lift with solar power and watchman room at
A J RESIDENCY, No 1692,2nd stage, K block, Dattagalli,Mysore.
Please Contact: Dr Murigesh
8618199793 | 8660354094

PRERANA GLOBAL ACADEMY
WE ARE HIRING!
TEACHERS
- Aged between 21 & 50 who can Speak English Fluently
- Ready to relocate & Teach Spoken English to School Students anywhere in Karnataka
- Good Remuneration
- Free Training
- Free Accommodation Provided

Send your Resume through
Preranatgs1@gmail.com
WhatsApp: +91 78998-06077

CIPET
Career Counseling
Career after PUC Fail
Date: 26.04.2025 onwards
Time : 11.30am
Venue : Central Institute of Petrochemicals Engineering & Technology (CIPET):
Center for Skilling and Technical Support (CSTS)
(Dept. of Chemicals & Petrochemicals,
Ministry of Chemicals and fertilizers, Govt. of India)
437/A, Hebbal Industrial Area, Mysore - 570 016
For enquiry: 97914 31827 / 94802 53024
Email: mysore@cipet.gov.in / ltc-mysore@cipet.gov.in

COMMERCIAL SPACE FOR RENT
Basement - 2600 Sq.ft
Ground floor - 2350 Sq.ft
First floor - 2950 Sq.ft
Second floor - 2950 Sq.ft
Roof Top - 2950 Sq.ft
9449254477 | 9141446761
Address: KHB 80ft, Road, Hootgalli, Mysore

ಉಚಿತ ತರಬೇತಿ ಕಾರ್ಯಕ್ರಮಗಳು

BRBNMPL
ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿ., ಮೈಸೂರು
ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (CIPET), ಮೈಸೂರು
सि पे ट CIPET

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು 2024–25ನೇ ಸಾಲಿನಲ್ಲಿ ತನ್ನ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿಯಡಿ ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ, (ಸಿಪೆಟ್) – ಸೆಂಟರ್ ಫಾರ್ ಸ್ಕಿಲ್ಲಿಂಗ್ ಅಂಡ್ ಟೆಕ್ನಿಕಲ್ ಸಪೋರ್ಟ್ ಮೂಲಕ 03 ತಿಂಗಳ ಉಚಿತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಎಲ್ಲಾ ವರ್ಗದ 150 ನಿರುದ್ಯೋಗಿ ಯುವಕ ಯುವತಿಯರಿಗೆ ಉಚಿತ ಊಟ ಹಾಗೂ ವಸತಿಗಳೊಂದಿಗೆ ಆಯೋಜಿಸಿದೆ. ತರಬೇತಿ ಹಾಗೂ ಅರ್ಹತೆಗಳ ವಿವರ ಈ ಕೆಳಗಿನಂತಿದೆ

ತರಬೇತಿಯ ಹೆಸರು	ಮಂಜೂರಾದ ಸಂಖ್ಯೆ	ಅವಧಿ	ವಿದ್ಯಾರ್ಹತೆ
ಸಹಾಯಕ ಯಂತ್ರ ನಿರ್ವಾಹಕರು ಪ್ಲಾಸ್ಟಿಕ್ಸ್ ಪ್ರೋಸೆಸಿಂಗ್ ಮೆಷಿನ್ (MoA-PP)	75	03 ತಿಂಗಳು	8ನೇ ತರಗತಿ (ಪಾಸ್) ಮೇಲ್ಪಟ್ಟು
ಸಹಾಯಕ ಯಂತ್ರ ನಿರ್ವಾಹಕರು ಇಂಜೆಕ್ಷನ್ ಮೌಲ್ಡಿಂಗ್ ಮೆಷಿನ್ (MoA-IM)	31		

ವಯೋಮಿತಿ: General / EWS: 18-30, OBC: 18-33, SC/ST: 18-35 ವರ್ಷಗಳು

ಕಾರ್ಯಕ್ರಮದ ವಿಶೇಷತೆಗಳು:
- ತಿಂಗಳಿಗೆ 1000/– ರೂಪಾಯಿ ಶಿಷ್ಯವೇತನ ನೀಡಲಾಗುವುದು
- ಉದ್ಯೋಗಾವಕಾಶ ಕಲ್ಪಿಸಿ ಕೊಡಲಾಗುವುದು
- Uniform, Shoes, Course Materials ಮತ್ತು Training Kit ಗಳನ್ನೂ ಉಚಿತವಾಗಿ ನೀಡಲಾಗುವುದು
- ತರಬೇತಿಯನ್ನು ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಅನುಸಾರ ನೀಡಲಿದ್ದು NCVET-Skill India Training Certificate ನೀಡಲಾಗುವುದು

ಆಯ್ಕೆಯ ವಿಧಾನ: ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಗೆ ಸಂಭಂದಿಸಿದ ದಾಖಲೆ, ಆಧಾರ್ ಪ್ರತಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರ (ಮೂಲ ಮತ್ತು ಪ್ರತಿ) ಮತ್ತು 06 ಕಲರ್ ಫೋಟೊಗಳೊಂದಿಗೆ ನೇರ ದಾಖಲಾತಿಗೆ ದಿನಾಂಕ 28-04-2025 ರಿಂದ ಕೆಳಕಂಡ ವಿಳಾಸಕ್ಕೆ ಹಾಜರಾಗಲು ಸೂಚಿಸಿದೆ

ತರಬೇತಿ ಸಂಸ್ಥೆಯ ವಿಳಾಸ :
ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ,
437/ಎ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮೈಸೂರು - 570 016

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
93807 56024, 98865 18246, 97417 19645